"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

# ಕರ್ನಾಟಕ ವಿಧಾನ ಪರಿಷತ್ತು

(158ನೇ ಅಧಿವೇಶನ)

(ಮುಂದುವರೆದ ಉಪವೇಶನಗಳು)

ಸೋಮವಾರ, 09ನೇ ಮಾರ್ಚ್ 2026

## ವಿಷಯಾನುಕ್ರಮಣಿಕೆ (INDEX)


**01. ಸಂತಾಪ ಸೂಚನೆಗಳು**

**ಮಾಜಿ ಶಾಸಕರಾದ ಶ್ರೀ ಬಸ್ರೂರು ಅಪ್ಪಣ್ಣ ಹೆಗ್ಡೆ ಹಾಗೂ ಮಾಜಿ ಶಾಸಕರು ಮತ್ತು ಹಿರಿಯ ಪತ್ರಕರ್ತರಾದ ಶ್ರೀ ಪಿ.ರಾಮಯ್ಯ ಇವರುಗಳ ನಿಧನದ ಬಗ್ಗೆ.**

- ಡಾ: ಶರಣಪ್ರಕಾಶ ಆರ್. ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು)
- ಶ್ರೀ ಛಲವಾದಿ ಟಿ. ನಾರಾಯಣ ಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀ ಶಿವಕುಮಾರ್ ಕೆ.

**02. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.**

**575– ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಹುದ್ದೆಯಿಂದ ಪ್ರಾಚಾರ್ಯರ ಹುದ್ದೆಗೆ ಬಡ್ತಿ ಕುರಿತು.**

- ಶ್ರೀ ಟಿ.ಡಿ.ಶ್ರೀನಿವಾಸ್(ಡಿ.ಟಿ.ಎಸ್.)
- ಶ್ರೀ ಎಸ್.ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)

**557– ವಿದ್ಯುತ್ ಪರಿವರ್ತಕಗಳ ಕುರಿತು.**

- ಶ್ರೀ ಎನ್. ರವಿಕುಮಾರ್
- ಶ್ರೀ ಕೆ.ಜೆ.ಜಾರ್ಜ್ (ಇಂಧನ ಸಚಿವರು)

**624– ಪದವಿ ಪೂರ್ವ ಕಾಲೇಜುಗಳ ಹೆಚ್ಚುವರಿ ಉಪನ್ಯಾಸಕರ ವರ್ಗಾವಣೆ ಬಗ್ಗೆ.**

- ಶ್ರೀ ಕೆ.ವಿವೇಕಾನಂದ
- ಶ್ರೀ ಎಸ್.ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)

**605– ಗ್ರಂಥಾಲಯ ಇಲಾಖೆಯಲ್ಲಿ ಕೈ ರಸೀದಿ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಬಗ್ಗೆ.**

- ಶ್ರೀ ರಾಮೋಜಿಗೌಡ
- ಶ್ರೀ ಎಸ್.ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)

**648–ಜಾಗತಿಕ ಬೆಳವಣಿಗೆಯ ಹಿನ್ನೆಲೆಯಲ್ಲಿ ಉನ್ನತ ಶಿಕ್ಷಣ ಇಲಾಖೆಯ ಕ್ರಮಗಳ ಕುರಿತು.**

- ಶ್ರೀ ರಮೇಶ್ ಬಾಬು
- ಡಾ: ಎಂ.ಸಿ.ಸುಧಾಕರ್ (ಉನ್ನತ ಶಿಕ್ಷಣ ಸಚಿವರು)

**581– ಮೈಸೂರಿನ ಕೆ.ಆರ್. ಆಸ್ಪತ್ರೆಯ ಬಗ್ಗೆ.**

- ಶ್ರೀ ಶಿವಕುಮಾರ್ ಕೆ
- ಡಾ: ಶರಣಪ್ರಕಾಶ ಆರ್.ಪಾಟೀಲ್ (ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು)

**687– ಬೆಂಗಳೂರು ನಗರ ಜಿಲ್ಲೆಯ ಸರ್ಕಾರಿ ಶಾಲೆಗಳಲ್ಲಿ ಮೂಲಸೌಕರ್ಯದ ಕೊರತೆಯಿಂದ ಮುಚ್ಚುವ ಪರಿಸ್ಥಿತಿ ತಲುಪಿರುವ ಬಗ್ಗೆ.**

- ಶ್ರೀ ಎಚ್.ಎಸ್,ಗೋಪಿನಾಥ್
- ಶ್ರೀ ಎಸ್.ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)

**598–ವಿಶ್ವವಿದ್ಯಾಲಯಗಳಲ್ಲಿ ಬೋಧಕರು ಹಾಗೂ ಬೋಧಕೇತರ ಸಾವಿರಾರು ಹುದ್ದೆಗಳು ಖಾಲಿ ಇರುವ ಬಗ್ಗೆ.**

- ಶ್ರೀ ಗೋವಿಂದರಾಜು
- ಡಾ: ಎಂ.ಸಿ.ಸುಧಾಕರ್ (ಉನ್ನತ ಶಿಕ್ಷಣ ಸಚಿವರು)

**710–ಕರ್ನಾಟಕ ಪಬ್ಲಿಕ್ ಶಾಲೆಗಳ ಬಗ್ಗೆ**

- ಶ್ರೀಮತಿ ಬಲ್ಕೀಸ್ ಬಾನು
- ಶ್ರೀ ಎಸ್.ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)

**639–ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳನ್ನು ಪಬ್ಲಿಕ್ ಶಾಲೆಗಳನ್ನಾಗಿ ಪರಿವರ್ತಿಸುತ್ತಿರುವ ಕುರಿತು.**

- ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
- ಶ್ರೀ ಎಸ್.ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)

**562–ಬೇಸಿಗೆಯಲ್ಲಿ ವಿದ್ಯುತ್ ಸಮಸ್ಯೆ ಕುರಿತು**

- ಶ್ರೀ ಟಿ,ಎನ್.ಜವರಾಯಿಗೌಡ
- ಶ್ರೀ ಕೆ.ಜೆ.ಜಾರ್ಜ್ (ಇಂಧನ ಸಚಿವರು)

**567–ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯ ಕುಡುಪು ಪ್ರದೇಶದಲ್ಲಿ ಸಬ್‌ಸ್ಟೇಷನ್ ಸ್ಥಾಪನೆ ಬಗ್ಗೆ.**

- ಶ್ರೀ ಐವನ್ ಡಿ' ಸೋಜಾ
- ಶ್ರೀ ಕೆ.ಜೆ.ಜಾರ್ಜ್ (ಇಂಧನ ಸಚಿವರು)

**591– ರಾಜ್ಯದಲ್ಲಿ ಭ್ರೂಣ ಹತ್ಯೆ ಪ್ರಕರಣಗಳು ದಾಖಲಾಗಿರುವ ಬಗ್ಗೆ**

- ಡಾ: ಉಮಾಶ್ರೀ
- ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

**629+578– ರಾಜ್ಯದ ಔಷಧ ಉಗ್ರಾಣಗಳಲ್ಲಿ ಔಷಧಗಳ ಕೊರತೆಯಿಂದ ಆಗುತ್ತಿರುವ ತೊಂದರೆ ಕುರಿತು.**

– ಡಾ: ಧನಂಜಯ ಸರ್ಜಿ
– ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

**579– ಅರಣ್ಯ ವಾಸಿಗಳ ಪುನರ್ವಸತಿ ಕೇಂದ್ರಗಳ ಕುರಿತು.**

– ಶ್ರೀ ಶಾಂತಾರಾಮ್ ಬುಡ್ನಸಿದ್ದಿ
– ಶ್ರೀ ಈಶ್ವರ ಬಿ. ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

3. **ಹಕ್ಕುಚ್ಯುತಿ ಪ್ರಸ್ತಾವ**

4. **ನಿಯಮ 58ಎ ಮೇರೆಗೆ ಶೂನ್ಯವೇಳೆ ಪ್ರಸ್ತಾವಗಳು**

**ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (BDA) ಸರ್. ಎಂ. ವಿಶ್ವೇಶ್ವರಯ್ಯ ಬಡಾವಣೆಯ 3ನೇ ಬ್ಲಾಕ್‌ನಲ್ಲಿ ರಾಜಕಾಲುವೆ, ಉದ್ಯಾನವನ ಮತ್ತು ಬೆಲೆಬಾಳುವ ನಿವೇಶನ ಒತ್ತುವರಿ ಮಾಡಿ ಅನಧಿಕೃತ ರಸ್ತೆ ನಿರ್ಮಾಣ ಮಾಡುತ್ತಿರುವ ಬಗ್ಗೆ.**

– ಶ್ರೀ ಟಿ.ಎಸ್.ಜವರಾಯಿಗೌಡ
– ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)

**ಆ) ವಿಷಯ: ರಾಜ್ಯದಲ್ಲಿ ಕಳೆದ 25 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ 'ಸಾಂತ್ವನ ಕೇಂದ್ರ'ಗಳನ್ನು ಸ್ಥಗಿತಗೊಳಿಸುವ ಸರ್ಕಾರದ ನಿರ್ಧಾರವನ್ನು ಕೈಬಿಡುವ ಬಗ್ಗೆ.**

– ಶ್ರೀ ತಿಪ್ಪಣ್ಣಪ್ಪ ಕಮಕನೂರ
– ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)

**ಇ) ಮದ್ಯ ಮಾರಾಟಗಾರರ ಬೃಹತ್ ಪ್ರತಿಭಟನೆ ಕುರಿತು.**

– ಶ್ರೀ ಸಿ.ಟಿ.ರವಿ
– ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)

**ಈ) ಕಾಸರಗೋಡು ಕನ್ನಡಿಗರ ಭಾಷಾ ಹಕ್ಕುಗಳ ಮೇಲೆ ಮಲಯಾಳ ಸವಾರಿ: ಕಾಯ್ದೆ ತಿದ್ದುಪಡಿಗೆ ಮತ್ತು ಸರ್ಕಾರದ ಮಧ್ಯಪ್ರವೇಶಕ್ಕೆ ಆಗ್ರಹ ಕುರಿತು.**

– ಶ್ರೀಮತಿ ಬಲ್ಕೀಸ್ ಬಾನು
– ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)

**ಉ) ರಾಜ್ಯದಲ್ಲಿ ಟೈಫಾಯಿಡ್ ಪ್ರಕರಣಗಳ ಏರಿಕೆ: ದೇಶದಲ್ಲೇ ಕರ್ನಾಟಕಕ್ಕೆ 3ನೇ ಸ್ಥಾನ – ಸರ್ಕಾರದ ತುರ್ತು ಕ್ರಮಕ್ಕೆ ಆಗ್ರಹ ಕುರಿತು**

– ಶ್ರೀ ಜಗದೇವ್ ಗುತ್ತೇದಾರ್

– ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)

**ಊ) ಹೋಳಿ ಆಚರಣೆಗಾಗಿ ಪರೀಕ್ಷೆ ತಪ್ಪಿಸಲು ವಿದ್ಯಾರ್ಥಿನಿಯ ಮೇಲೆ ಒತ್ತಡ: ಕೊಪ್ಪಳದಲ್ಲಿ ಶಿಕ್ಷಣ ಹಕ್ಕಿನ ಮೇಲೆ ನಡೆದ ದೌರ್ಜನ್ಯದ ಬಗ್ಗೆ.**

– ಶ್ರೀಮತಿ ಹೇಮಲತಾ ನಾಯಕ್

– ಶ್ರೀ ಎಸ್.ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)

**ಋ) ಮುಧೋಳದ ಮಹಾರಾಜ ಕಾಲೋನಿಯಲ್ಲಿ ಅಂತರ್ಜಲ ವಿಷಮಯವಾಗಿದ್ದು, ನಲ್ಲಿಗಳಲ್ಲಿ ಕಲುಷಿತ ನೀರು ಹರಿಯುತ್ತಿದ್ದು  ನಾಗರಿಕರ ಜೀವಕ್ಕೆ ಆಪತ್ತು ಎದುರಾಗಿರುವ ಕುರಿತು.**

– ಶ್ರೀ ಪಿ.ಹೆಚ್.ಪೂಜಾರ್

– ಶ್ರೀ ರಹೀಂ ಖಾನ್ (ಪೌರಾಡಳಿತ ಮತ್ತು ಹಜ್ ಸಚಿವರು)

**ಎ) ರಾಯಚೂರಿನ ಜೋಳ ಖರೀದಿ ಕೇಂದ್ರಗಳಲ್ಲಿ ನಡೆಯುತ್ತಿರುವ ಅವ್ಯವಹಾರದ ಬಗ್ಗೆ.**

– ಶ್ರೀ ಬಸನಗೌಡ ಬಾದರ್ಲಿ

– ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)

**ಏ) ಪದೋನ್ನತಿ ಪಡೆದ ಐ.ಎ.ಎಸ್ ಅಧಿಕಾರಿಗಳಿಂದ ಕಡ್ಡಾಯ 'ಇಂಡಕ್ಷನ್ ತರಬೇತಿ' ಉಲ್ಲಂಘನೆ: ಆಡಳಿತಾತ್ಮಕ ದಕ್ಷತೆಗೆ ಎದುರಾದ ಹಿನ್ನಡೆ ಬಗ್ಗೆ**

– ಶ್ರೀ ರಮೇಶ ಬಾಬು

– ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)

**ಐ) ಮಕ್ಕಳ ಆರೋಗ್ಯದ ಜೊತೆ ಸರ್ಕಾರದ ಚೆಲ್ಲಾಟ: ಹುಳು ಹಿಡಿದ ರವಾ, ಎಕ್ಸ್‌ಪೈರಿ ಆದ ಲಡ್ಡು ವಿತರಿಸಿದವರ ವಿರುದ್ಧ ಕ್ರಮ ಕೈಗೊಳ್ಳುವ ಕುರಿತು.**

– ಶ್ರೀ ಎಂ. ನಾಗರಾಜು

– ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)

5. **ಪ್ರಕಟಣೆ.**

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಿಗೆ ಆಯವ್ಯಯ ನಿರ್ವಹಣೆ ಕುರಿತು ವಿಶೇಷ ತರಬೇತಿ ಶಿಬಿರ ಏರ್ಪಡಿಸಿರುವ ಬಗ್ಗೆ.**

6. **ಸಭೆಯ ಮುಂದಿಡಲಾದ ಕಾಗದ ಪತ್ರಗಳು**

7. **ಕಳೆದ ಅಧಿವೇಶನದಲ್ಲಿ ತಮ್ಮ ಮೇಲೆ ಕೈಗೊಂಡ ಅಮಾನತ್ತಿನ ಬಗ್ಗೆ ಸ್ಪಷ್ಟನೆ ಕೋರಿ ಪ್ರಸ್ತಾವ.**

– ಶ್ರೀ ಸಿ.ಟಿ.ರವಿ

೮. ಗಮನ ಸೆಳೆಯುವ ಸೂಚನೆಗಳು.

ಅ) ಕಲ್ಯಾಣ ಕರ್ನಾಟಕ ಭಾಗದ ರಾಯಚೂರು ಜಿಲ್ಲಾ ಕೇಂದ್ರದಿಂದ ೯1 ಕಿ.ಮೀ ದೂರದಲ್ಲಿರುವ ಸಿಂಧನೂರು ತಾಲ್ಲೂಕು ಅತೀ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಹೊಂದಿದ್ದು, ವಿದ್ಯಾರ್ಥಿಗಳ ಸಂಖ್ಯೆ ಮತ್ತು ಭೌಗೋಳಿಕ ವ್ಯಾಪ್ತಿಯನ್ನು ಪರಿಗಣಿಸಿ ಸಿಂಧನೂರುತಾಲ್ಲೂಕನ್ನು ನೂತನ ಶೈಕ್ಷಣಿಕ ಜಿಲ್ಲೆ ಎಂದು ಘೋಷಿಸುವ ಕುರಿತು.

- ಶ್ರೀ ಬಸನಗೌಡ ಬಾದರ್ಲಿ
- ಶ್ರೀ ಎಸ್.ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)

೯. ನಿಯಮ ೫೮ಎ ಅಡಿಯಲ್ಲಿ ಪ್ರಸ್ತಾಪಿಸಿದ ಶೂನ್ಯವೇಳೆ ಪ್ರಸ್ತಾವಕ್ಕೆ ಸಚಿವರಿಂದ ಉತ್ತರ.

ವಿಷಯ: ಮಕ್ಕಳ ಆರೋಗ್ಯದ ಜೊತೆ ಸರ್ಕಾರದ ಚೆಲ್ಲಾಟ: ಹುಳು ಹಿಡಿದ ರವಾ, ಎಕ್ಸ್‌ಪೈರಿ ಆದ ಲಡ್ಡು ವಿತರಿಸಿದವರ ವಿರುದ್ಧ ಕ್ರಮ ಕೈಗೊಳ್ಳುವ ಕುರಿತು.

–ಶ್ರೀಮತಿ ಲಕ್ಷ್ಮಿ ಆರ್. ಹೆಬ್ಬಾಳ್ಕರ್ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕ ಸಬಲೀಕರಣ ಸಚಿವರು)

10. ಗಮನ ಸೆಳೆಯುವ ಸೂಚನೆ

ಆ) ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ಬರುವ ಬುಡಕಟ್ಟು ಮತ್ತು ಇತರೆ ಜನಾಂಗದ ಕುಟುಂಬಗಳನ್ನು ಬೇರೆ ಕಡೆ ಅವರ ಒಪ್ಪಿಗೆಯಂತೆ ಸ್ಥಳಾಂತರಿಸುತ್ತಿರುವ ಹಾಗೂ ಅವರು ಸಾಗುವಳಿ ಮಾಡಿಕೊಂಡು ಬಂದ ಅರಣ್ಯ ಭೂಮಿಗೆ ಪರಿಹಾರ ನೀಡುವ ಕುರಿತು.

- ಶ್ರೀ ಶಾಂತಾರಾಮ್ ಬುಡ್ನಸಿದ್ಧಿ
- ಶ್ರೀ ಈಶ್ವರ ಬಿ.ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು)

– – – –

(238) 09.03.2026 11.00 LL-KS

**ಕರ್ನಾಟಕ ವಿಧಾನ ಪರಿಷತ್ತು**

ಸೋಮವಾರ, 9ನೇ ಮಾರ್ಚ್, 2026

ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ

ಬೆಳಗ್ಗೆ 11ಗಂಟೆ 09 ನಿಮಿಷಕ್ಕೆ ಸಮಾವೇಶಗೊಂಡಿತು.

**ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಅವರು ಪೀಠದಲ್ಲಿ**

ಉಪಸ್ಥಿತರಿದ್ದರು.

1.**ಸಂತಾಪ ಸೂಚನೆಗಳು**

**ವಿಷಯ:– ಮಾಜಿ ಶಾಸಕರಾದ ಶ್ರೀ ಬಸ್ರೂರು ಅಪ್ಪಣ್ಣ ಹೆಗ್ಡೆ ಹಾಗೂ ಮಾಜಿ ಶಾಸಕರು ಮತ್ತು ಹಿರಿಯ ಪತ್ರಕರ್ತರಾದ ಶ್ರೀ ಪಿ.ರಾಮಯ್ಯ ಇವರುಗಳ ನಿಧನದ ಬಗ್ಗೆ.**

– –

**ಸಭಾಪತಿಯವರು:–** ವಿಧಾನ ಪರಿಷತ್ತಿನ ಮಾಜಿ ಶಾಸಕರಾಗಿದ್ದ ಶ್ರೀ ಬಸ್ರೂರು ಅಪ್ಪಣ್ಣ ಹೆಗ್ಡೆ ಮತ್ತು ಹಿರಿಯ ಪತ್ರಕರ್ತರು ಹಾಗೂ ವಿಧಾನ ಪರಿಷತ್ತಿನ ಮಾಜಿ ಶಾಸಕರಾಗಿದ್ದ ಶ್ರೀ ಪಿ. ರಾಮಯ್ಯ ಅವರುಗಳು ನಿಧನರಾಗಿರುವುದನ್ನು ಈ ಸದನಕ್ಕೆ ತಿಳಸಲು ವಿಷಾಧಿಸುತ್ತೇನೆ.

**1. ಶ್ರೀ ಬಸ್ರೂರು ಅಪ್ಪಣ್ಣ ಹೆಗ್ಡೆ**

ವಿಧಾನ ಪರಿಷತ್ತಿನ ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಬಸ್ರೂರು ಅಪ್ಪಣ್ಣ ಹೆಗ್ಡೆ ಅವರು ದಿನಾಂಕ 07.02.2026 ರಂದು ನಿಧನ ಹೊಂದಿರುತ್ತಾರೆ.

1935ರ ಡಿಸೆಂಬರ್ 24 ರಂದು ದಕ್ಷಿಣ ಕನ್ನಡ ಜಿಲ್ಲೆಯ ಬಸ್ರೂರು ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ವೃತ್ತಿಯಲ್ಲಿ ಕೃಷಿಕರಾಗಿದ್ದರು.

ಶ್ರೀಯುತರು 1960 ರಿಂದ 1968ರವರೆಗೆ ಗ್ರಾಮ ಪಂಚಾಯತಿಯ ಸದಸ್ಯರಾಗಿ, 1968 ರಿಂದ 1983ರವರೆಗೆ ಗ್ರಾಮ ಪಂಚಾಯತಿಯ ಅಧ್ಯಕ್ಷರಾಗಿ, ತಾಲ್ಲೂಕು ಅಭಿವೃದ್ಧಿ ಮಂಡಳಿಯ ಸದಸ್ಯರಾಗಿ, ತಾಲ್ಲೂಕು ಸಹಕಾರ ಮಾರುಕಟ್ಟೆ ಸಂಘದ ಉಪಾಧ್ಯಕ್ಷರಾಗಿ, ತಾಲ್ಲೂಕು ಭೂ ಅಭಿವೃದ್ಧಿ ಬ್ಯಾಂಕ್‌ನ ನಿರ್ದೇಶಕರಾಗಿ ಮತ್ತು 1962 ರಿಂದ 1977ರವರೆಗೆ ಬಸ್ರೂರು ಸ್ಥಳೀಯ ಮಹಾಲಿಂಗೇಶ್ವರ ದೇವಸ್ಥಾನದ ಮುಖ್ಯಸ್ಥರಾಗಿ ಹಾಗೂ ಕೊಲ್ಲೂರು ಮೂಕಾಂಬಿಕಾ ದೇವಳದ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು.

(ಮುಂದು)

(239) 09.03.2026 ವೈಎಲ್–ಕೆಎಸ್ 11.10 (ಸಭಾಪತಿಯವರ ಉಪಸ್ಥಿತಿ)

1983–1985ರ ಅವಧಿಯಲ್ಲಿ ಜನತಾ ಪಕ್ಷದಿಂದ ಉಡುಪಿ ಜಿಲ್ಲೆಯ ಬೈಂದೂರು ವಿಧಾನಸಭಾ ಕ್ಷೇತ್ರದ ಶಾಸಕರಾಗಿ ಹಾಗೂ 1988 ರಿಂದ 1994 ರವರೆಗೆ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನ ಪರಿಷತ್ತಿನ ಶಾಸಕರಾಗಿ ಚುನಾಯಿತರಾಗಿ ಸೇವೆ ಸಲ್ಲಿಸಿರುತ್ತಾರೆ. ಶ್ರೀಯುತರು ಧಾರ್ಮಿಕ, ಸಹಕಾರ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದು, ರಾಜಕೀಯ ಜೀವನದಲ್ಲಿ ಜನಸಾಮಾನ್ಯರ ಸಮಸ್ಯೆಗಳಿಗೆ ಧ್ವನಿಯಾಗಿದ್ದರು.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ಸರಳ ಸಜ್ಜನ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

**2. ಪಿ.ರಾಮಯ್ಯ**

ಹಿರಿಯ ಪತ್ರಕರ್ತ ಹಾಗೂ ವಿಧಾನ ಪರಿಷತ್ತಿನ ಮಾಜಿ ಶಾಸಕರಾಗಿದ್ದ ಶ್ರೀ ಪಿ.ರಾಮಯ್ಯ ಅವರು ದಿನಾಂಕ: 10.02.2026 ರಂದು ನಿಧನ ಹೊಂದಿರುತ್ತಾರೆ.

1933ರ ಸೆಪ್ಟೆಂಬರ್ 12 ರಂದು ಮಂಡ್ಯ ಜಿಲ್ಲೆಯ, ನಾಗಮಂಗಲ ತಾಲ್ಲೂಕಿನ ಬಿಂದೇನಹಳ್ಳಿಯಲ್ಲಿ ಜನಿಸಿದ್ದ ಶ್ರೀಯುತರು ಬಿ.ಎಸ್ಸಿ., ಪದವೀಧರರಾಗಿದ್ದು, ವೃತ್ತಿಯಲ್ಲಿ ಪತ್ರಕರ್ತರಾಗಿದ್ದರು. ಐದು ದಶಕಗಳ ಕಾಲ ಹಿಂದೂ ದಿನಪತ್ರಿಕೆಯಲ್ಲಿ ಕಾರ್ಯನಿರ್ವಹಿಸಿ, 'ಹಿಂದೂ ರಾಮಯ್ಯ' ಎಂದೇ ಹೆಸರಾಗಿದ್ದ ಶ್ರೀಯುತರು ಪತ್ರಿಕೋದ್ಯಮದಲ್ಲಿ ಸಲ್ಲಿಸಿರುವ ಗಣನೀಯ ಸೇವೆ ಮತ್ತು ಜನಪರ ಕಾಳಜಿಗಳನ್ನು ಪರಿಗಣಿಸಿ ಮಾನ್ಯರನ್ನು 1998 ರಿಂದ 2004ರ ಅವಧಿಗೆ ವಿಧಾನ ಪರಿಷತ್ತಿಗೆ ಶಾಸಕರನ್ನಾಗಿ ನಾಮನಿರ್ದೇಶನ ಮಾಡಲಾಗಿತ್ತು.

ಶ್ರೀ ರಾಮಮಂದಿರ ಟ್ರಸ್ಟ್, ಶ್ರೀ ರಾಮ ಕಲ್ಯಾಣ ಮಂಟಪ ಮತ್ತು ಶ್ರೀ ರಾಮ ವೃದ್ಧಾಶ್ರಮದ ಟ್ರಸ್ಟಿಯಾಗಿ, ರಾಜ್ಯ ಮಾನ್ಯತಾ ಸಮಿತಿ, ಟೆಲಿಕಾಂ ಸಲಹಾ ಸಮಿತಿ, ಸಂದರ್ಶಕರ ಮಂಡಳಿ ಹಾಗೂ ಕಿದ್ವಾಯಿ ಸ್ಮಾರಕ ಆಂಕೊಲಾಜಿ ಸಂಸ್ಥೆಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಲ್ಲದೇ, ಇವರು ಪತ್ರಿಕಾ ಅಕಾಡೆಮಿ ಹಾಗೂ ವಿವಿಧ ಪತ್ರಕರ್ತ ಕಲ್ಯಾಣ ಸಮಿತಿಗಳ ಸದಸ್ಯರಾಗಿ, ಸಣ್ಣ ಪತ್ರಿಕೆಗಳ ಸಮಸ್ಯೆಗಳ ಅಧ್ಯಯನಕ್ಕಾಗಿ ರಚಿಸಲಾಗಿದ್ದ ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಅವರ ನಿಷ್ಠಾವಂತ ಸೇವೆಯನ್ನು ಗುರುತಿಸಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಮಾಧ್ಯಮ ಅಕಾಡೆಮಿ ಪ್ರಶಸ್ತಿ ಹಾಗೂ ಕೆಂಪೇಗೌಡ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

ಮಾನವೀಯತೆ, ಪ್ರಾಮಾಣಿಕತೆ ಹಾಗೂ ಮೌಲ್ಯಾಧಾರಿತಾ ಪತ್ರಿಕಾ ಧರ್ಮದ ಶ್ರೇಷ್ಠ ಪ್ರತಿನಿಧಿಯಾಗಿದ್ದ ಇವರು ಸರಳ ಸಜ್ಜನಿಕೆಯ ಸಾಕಾರಮೂರ್ತಿ ಆಗಿದ್ದರು.

**ಶ್ರೀಯುತರ ನಿಧನದಿಂದಾಗಿ ರಾಜ್ಯವು ಸರಳ ಸಜ್ಜನ ರಾಜಕಾರಣಿ ಹಾಗೂ ಹಿರಿಯ ಪತ್ರಕರ್ತರೊಬ್ಬರನ್ನು ಕಳೆದುಕೊಂಡಂತಾಗಿದೆ.**

**ಡಾ॥ ಶರಣಪ್ರಕಾಶ್ ಆರ್.ಪಾಟೀಲ್ (ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ನಮ್ಮ ವಿಧಾನ ಪರಿಷತ್ತಿನ ಇಬ್ಬರೂ ಮಾಜಿ ಶಾಸಕರುಗಳನ್ನು ಕಳೆದುಕೊಂಡಿದ್ದೇವೆ. ವಿಶೇಷವಾಗಿ ಹಿರಿಯ ಸದಸ್ಯರಾಗಿದ್ದ ಶ್ರೀ ಬಸ್ರೂರು ಅಪ್ಪಣ್ಣ ಹೆಗ್ಡೆ ಅವರು ಹಿರಿಯ ರಾಜಕಾರಣಿಯಾಗಿದ್ದು, ಸರಳ ಜೀವನ ಶೈಲಿ ಹೊಂದಿದ್ದು, ಅಪಾರ ಜನ ಸೇವೆಯ ನಿಷ್ಠೆಯ ಮೂಲಕ ಜನಮನ ಗೆದ್ದವರಾಗಿದ್ದಾರೆ. ಶ್ರೀಯುತರ ರಾಜಕೀಯ ಗುರುತು ಗ್ರಾಮೀಣ ಆಡಳತದಿಂದಲೇ ಪ್ರಾರಂಭವಾಗಿದ್ದು, ಕೇವಲ ಪಂಚಾಯತ್ ಆಡಳತಕ್ಕಷ್ಟೇ ಸೀಮಿತವಾಗದೇ ತಾಲ್ಲೂಕು ಮಂಡಳಿ, ಸಹಕಾರ ಮಾರುಕಟ್ಟೆ ಸಂಘ ಹಾಗೂ ಭೂ ಅಭಿವೃದ್ಧಿ ಬ್ಯಾಂಕ್‌ಗಳಲ್ಲಿ ವಹಿಸಿದ ಜವಾಬ್ದಾರಿಯುತ ಪಾತ್ರ ಗ್ರಾಮೀಣ ಭಾಗದ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಿದೆ. ಇವರು ಜನ

ಸಾಮಾನ್ಯರ ಧ್ವನಿಯಾಗಿದ್ದವರಾಗಿದ್ದು, 1983 ರಿಂದ 1985 ರವರೆಗೆ ಬೈಂದೂರು ವಿಧಾನ ಸಭಾ ಕ್ಷೇತ್ರದ ಶಾಸಕರಾಗಿ ಹಾಗೂ 1988 ರಿಂದ 1994 ರವರೆಗೂ ವಿಧಾನ ಪರಿಷತ್ತಿನ ಸದಸ್ಯರಾಗಿ ರಾಜ್ಯ ಮಟ್ಟದಲ್ಲಿ ತಮ್ಮ ಸೇವೆಯನ್ನು ಸಲ್ಲಿಸಿದ್ದು, ರಾಜಕೀಯದ ಜೊತೆಗೆ ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯದಲ್ಲಿ ತೊಡಗಿದರು. ಶ್ರೀ ಬಸ್ರೂರು ಅಪ್ಪಣ್ಣ ಹೆಗ್ಡೆರವರು grassroots ನಿಂದ ಬಂದಿರುವಂಥ ಶಾಸಕರಾಗಿದ್ದು, ಸಮಾಜದೊಂದಿಗೆ ಒಳ್ಳೆಯ ಬಾಂಧವ್ಯವನ್ನಿಟ್ಟುಕೊಂಡಿದ್ದರು. ಯಾವಾಗಲೂ ಜನರು ಅವರನ್ನು ನೆನಪಿಟ್ಟುಕೊಳ್ಳುವ ಹಾಗೆ ಕಾರ್ಯಶೈಲಿಯ ರೀತಿ ಕೆಲಸ ಕಾರ್ಯವನ್ನು ಮಾಡಿರುವಂಥದ್ದನ್ನು ನಾವು ಮರೆಯುವಂತಿಲ್ಲ. ಹಾಗಾಗಿ, ಅವರ ಸಾರ್ಥಕ ಬದುಕು ಮತ್ತು ಸಾಮಾಜಿಕ ಕಾರ್ಯಗಳು ಸದಾ ಸ್ಮರಣೀಯವಾಗಿರುತ್ತದೆ.

ಹಾಗೆಯೇ ಮಾಜಿ ಶಾಸಕರಾಗಿದ್ದ ಶ್ರೀಯುತ ಪಿ.ರಾಮಯ್ಯರವರು ಪತ್ರಕರ್ತರಾಗಿದ್ದು, ಸದರಿಯವರನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ. ಹಿಂದೂ ದಿನಪತ್ರಿಕೆಯಲ್ಲಿ ಸತತವಾಗಿ ಐದು ದಶಕಗಳ ಕಾಲ ಸೇವೆ ಸಲ್ಲಿಸುವ ಮೂಲಕ 'ಹಿಂದೂ ರಾಮಯ್ಯ' ಎಂದೇ ಖ್ಯಾತಿ ಪಡೆದಿದ್ದಾರೆ. ಸತ್ಯ, ನ್ಯಾಯ ಮತ್ತು ಜನಪರ ಕಾಳಜಿಯೊಂದಿಗಿನ ಸೇವೆ ಅವಿಸ್ಮರಣೀಯವಾಗಿದೆ ಮತ್ತು ತೀಕ್ಷ್ಣಬರಹಗಳು, ಅಂಕಣಗಳು ಸಾರ್ವಜನಿಕ ಚರ್ಚೆಗೆ ಸರಿಯಾದ ದಿಕ್ಕು ತೋರಿಸುವಲ್ಲಿ ಪ್ರಮುಖ ಪಾತ್ರವಹಿಸಿದೆ ಎಂಬುದು ನನ್ನ ಅನಿಸಿಕೆಯಾಗಿದೆ. ಜೊತೆಗೆ ವಿಧಾನ ಪರಿಷತ್ತಿನ ಸದಸ್ಯರಾಗಿ 1998 ರಿಂದ 2004 ರವರೆಗೂ ನೇಮಕಗೊಂಡಿದ್ದರು. ಕೇವಲ ಪತ್ರಿಕೋದ್ಯಮಕಷ್ಟೇ ಸೇವೆ ಸಲ್ಲಿಸದೇ, ರಾಜಕಾರಣದಲ್ಲಿಯೂ ಅಪಾರವಾದ ಕೊಡುಗೆ ನೀಡಿದ್ದಾರೆ. ಅವರ ನಿಸ್ವಾರ್ಥ, ಪ್ರಾಮಾಣಿಕ, ಮೌಲ್ಯಾಧಾರಿತ ಸೇವೆ ಈ ರಾಜ್ಯಕ್ಕೆ ಸ್ಮರಣೀಯವಾಗಿದೆ. ಹಾಗಾಗಿ, ಅವರಿಬ್ಬರ ಅಗಲಿಕೆಯ ನಷ್ಟವನ್ನು ಅವರ ಕುಟುಂಬದ ಸದಸ್ಯರಿಗೆ ಸಹಿಸಿಕೊಳ್ಳುವ ಶಕ್ತಿಯನ್ನು ಆ ಭಗವಂತ ನೀಡಲಿ ಮತ್ತು ಮೃತರ ಆತ್ಮಕ್ಕೆ ಶಾಂತಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸುವುದರ ಮೂಲಕ ಈ ಸಂತಾಪ ಸೂಚನೆಗೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಶ್ರೀಯುತರುಗಳಾದ ಬಸ್ರೂರು ಅಪ್ಪಣ್ಣ ಹೆಗ್ಡೆರವರು ಹಾಗೂ 'ಹಿಂದೂ ರಾಮಯ್ಯ' ಎಂದೇ ಹೆಸರಾಗಿದ್ದ ಶ್ರೀ ಪಿ.ರಾಮಯ್ಯನವರು ಕೂಡ ನಮ್ಮಿಂದ ದೂರವಾಗಿದ್ದಾರೆ. ಶ್ರೀಯುತ ಬಸ್ರೂರು ಅಪ್ಪಣ್ಣ ಹೆಗ್ಡೆರವರು ಮೇಲ್ಮನೆ ಮತ್ತು ಕೆಳಮನೆ ಎರಡೂ ಕಡೆ ಕೆಲಸ ಮಾಡಿದ್ದು, ಅನೇಕ ಸಂಘ-ಸಂಸ್ಥೆಗಳಲ್ಲಿ ಸೇವೆ ಮಾಡುವುದರ ಮೂಲಕ ಸಮಾಜಕ್ಕೆ ತಮ್ಮನ್ನು ತಾವು ಅರ್ಪಿಸಿಕೊಂಡಿದ್ದು, ಇವತ್ತು ಸದರಿಯವರು ನಮ್ಮನ್ನೆಲ್ಲಾ ಅಗಲಿದ್ದಾರೆ. ಅದೇ ರೀತಿ ದಿವಂಗತ ಪಿ.ರಾಮಯ್ಯನವರು 'ಹಿಂದೂ ರಾಮಯ್ಯ' ಎಂದೇ ಹೆಸರಾಗಿದ್ದವರು. ಮಾನ್ಯರು ಬಹುಕಾಲ ಹಿಂದೂ ಪತ್ರಿಕೆಯಲ್ಲಿ ಕೆಲಸ ಮಾಡಿದ್ದು, ನನಗೂ ಅವರೊಂದಿಗೆ ಒಂದು ಸಂಬಂಧವೇ ಇತ್ತು. ಏಕೆಂದರೆ, ಈ ಹಿಂದೆ ಸಣ್ಣ ಪತ್ರಿಕೆಯಲ್ಲಿ ನಾನು ಕೆಲಸ ಮಾಡುತ್ತಿದ್ದು, ಆ ಸಂದರ್ಭದಲ್ಲಿ ಸದರಿಯವರು ಯುವಕರನ್ನು ಕಂಡರೆ ಅವರನ್ನು ಕರೆದು ಮಾತನಾಡಿಸಿ, ಯಾವ ರೀತಿ ನಡೆದುಕೊಳ್ಳಬೇಕು; ಪತ್ರಿಕೆಯನ್ನು ಯಾವ ರೀತಿ ಬರೆಯಬೇಕು; ಬೇರೆಯವರ ಜೊತೆ ಹೇಗೆ ನಡೆದುಕೊಳ್ಳಬೇಕು; ಪತ್ರಿಕೆಯಲ್ಲಿ ಬರೆಯುವಾಗ ಯಾವ ರೀತಿ ನಮೂದಿಸಬೇಕು; ಕೆಟ್ಟದಾಗಿ

ನಮೂದಿಸಬಾರದು; ಈ ರೀತಿಯಾಗಿ ಅನೇಕರಿಗೆ ಬುದ್ಧಿ ಹೇಳುವ ಕೆಲಸ ಮಾಡುತ್ತಿದ್ದರು. 3ನೇ ಅಂತಸ್ತಿನಲ್ಲಿ ಪತ್ರಿಕಾ ಮಾಧ್ಯಮದವರಿಗೆ ಒಂದು ಪ್ರತ್ಯೇಕವಾದ ಕೊಠಡಿ ಇದ್ದು, ಮಧ್ಯಾಹ್ನ 1–00 ಗಂಟೆ ಸಮಯಕ್ಕೆ ಆ ಕೊಠಡಿಯೊಳಗೆ ಬಂದು ಕುಳಿತುಕೊಳ್ಳುತ್ತಿದ್ದರು. ಯಾರೇ ಬಂದರೂ ಅವರಿಗೆ ಒಂದು ರೀತಿ ಪಾಠ ಮಾಡುವಂಥ ಕೆಲಸವನ್ನು ದಿವಂಗತ ಪಿ.ರಾಮಯ್ಯನವರು ಮಾಡುತ್ತಿದ್ದರು. ಹಾಗೆಯೇ ಪ್ರೆಸ್ ಕ್ಲಬ್ ಅಥವಾ ಎಲ್ಲಿಗೆ ಹೋದರೂ ಸಮಾಜವನ್ನು ತಿದ್ದುವಂಥದ್ದು ಮತ್ತು ಪತ್ರಕರ್ತರು ಯಾರೇ ಬರಲಿ, ಅವರು ಹೇಗೆ ನಡೆದುಕೊಳ್ಳಬೇಕು ಎಂಬುದನ್ನು ಹೇಳಿಕೊಡುವ ಮೂಲಕ ಮಾಸ್ಟರ್ ರೀತಿಯ ಕೆಲಸ ಮಾಡುತ್ತಿದ್ದರು. ಸದರಿಯವರಿಗೆ ವಿಧಾನ ಪರಿಷತ್ತಿನ ಸದನದೊಳಗೆ ಕೆಲಸ ಮಾಡುವಂತಹ ಅವಕಾಶ ಸಿಕ್ಕಿದ್ದು ಬಹಳ ಸಂತೋಷ. ಏಕೆಂದರೆ, ಸದರಿಯವರು ನೀತಿವಂತರಾಗಿದ್ದು, ನೀತಿಯ ಮೂಲಕ ಸರ್ವ ವಿಚಾರಗಳನ್ನು ಸಮಾಜಕ್ಕೆ ಮುಟ್ಟಿಸುವಂತಹ ಕೆಲಸ ಮಾಡುತ್ತಿದ್ದರು. ಈ ರೀತಿಯಾಗಿ ಅವರಿಂದ ಕಲಿಯುವಂತಹ ವಿಚಾರಗಳು ಬಹಳಷ್ಟು ಇತ್ತು. ಯಾರೇ ಒಬ್ಬರೂ ಈ ಸದನದ ಸದಸ್ಯರಾಗಬೇಕಾದರೆ, ಯಾವುದೋ ಒಂದು ಪಕ್ಷ ಅವರನ್ನು ನೇಮಕ ಮಾಡುತ್ತದೆ. ಏಕೆಂದರೆ, ಅವರು ಪತ್ರಕರ್ತರ ವೇದಿಕೆಯಿಂದ ಬಂದರೂ ಕೂಡಾ ಯಾವತ್ತು ಪಕ್ಷದ ಪರವಾಗಿ ಒಂದು ಮಾತನ್ನು ಮಾತನಾಡಿಲ್ಲ. ಅವರು ಸಮಾಜದ ಪರವಾಗಿ ಸದನದಲ್ಲಿ ಏನೇ ಮಾತನಾಡಿದ್ದರೂ ಕೂಡ ಅದು ಸಾಮಾಜಿಕವಾಗಿ ಇರುತ್ತಿತ್ತೇ ಹೊರತು ಪಕ್ಷದ ಪರವಾಗಿ ಇರುತ್ತಿರಲಿಲ್ಲ.

ಒಂದು ಸಂತೋಷದ ಸಂಗತಿಯೇನೆಂದರೆ, ಪತ್ರಕರ್ತರ ಮೂಲದಿಂದ ಬಂದಾಗ ಅದಕ್ಕೆ ನ್ಯಾಯ ಕೊಡಬೇಕಾಗುತ್ತದೆ. ನಮ್ಮ ಕಾಂಗ್ರೆಸ್ ಪಕ್ಷದ ಸದಸ್ಯರಾಗಿ ಮಾನ್ಯ ಕೆ. ಶಿವಕುಮಾರ್‌ರವರು ನೇಮಕಗೊಂಡಿದ್ದಾರೆ. ಸಾಮಾನ್ಯವಾಗಿ ಈ ಮನೆಯಲ್ಲಿ ಮಾತನಾಡಿದಂತಹ ಸಂದರ್ಭದಲ್ಲಿ ಪತ್ರಕರ್ತರು ಅನುಭವಿಸುವಂಥ ಮತ್ತು ಅವರಿಗೆ ಇರುವಂತಹ ಸಮಸ್ಯೆಗಳ ಪರವಾಗಿ ಮಾತನಾಡುವುದನ್ನು ಗಮನಿಸಿದ್ದೇನೆ, ಅದೇ ರೀತಿ ನಡೆದುಕೊಳ್ಳಬೇಕಾಗಿದೆ. ಆದರೆ, ನನಗೆ ಅನಿಸಿದ ವಿಚಾರವೇನೆಂದರೆ, ಮಾನ್ಯ ಕೆ.ಶಿವಕುಮಾರ್‌ರವರೊಬ್ಬರು ಪರಿಶಿಷ್ಟ ಜಾತಿಯವರಾಗಿದ್ದರೂ ಕೂಡ, ಆ ವೇದಿಕೆಯಿಂದ ಈ ಸದನಕ್ಕೆ ಬಂದಿರುವುದು ಬಹಳ ಸಂತೋಷದ ವಿಚಾರ. ಹಾಗೆಯೇ ಶ್ರೀಯುತ ಪಿ.ರಾಮಯ್ಯನವರ ನೀತಿ, ಸಿದ್ದಾಂತವನ್ನು ಮಾನ್ಯ ಕೆ.ಶಿವಕುಮಾರ್‌ರವರು ಮೈಗೂಡಿಸಿಕೊಂಡು ಸಮಾಜಕ್ಕೆ ಸೇವೆ ಮಾಡುತ್ತಾರೆ ಎಂದು ನಂಬುತ್ತೇನೆ. ಹಾಗೆಯೇ ಶ್ರೀಯುತರುಗಳಾದ ಶ್ರೀ ಬಸ್ರೂರು ಅಪ್ಪಣ್ಣ ಹೆಗ್ಡೆರವರು ಮತ್ತು ಪಿ.ರಾಮಯ್ಯನವರ ಅಗಲಿಕೆಯ ಕುರಿತು ತಂದಿರುವಂಥ ಸಂತಾಪ ಸೂಚನೆಗೆ ಧ್ವನಿಗೂಡಿಸುವುದರ ಮೂಲಕ ಶ್ರೀಯುತರುಗಳ ಆತ್ಮಕ್ಕೆ ಶಾಂತಿ ಸಿಗಲಿ ಮತ್ತು ಅವರ ಕುಟುಂಬದವರಿಗೆ ಅವರುಗಳ ಅಗಲಿಕೆಯ ನೋವನ್ನು ಭರಿಸುವ ಶಕ್ತಿಯನ್ನು ಭಗವಂತ ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ.

(ಮುಂದು)

**(240) 09.03.2026/11.20/ ಎಸ್‌ಕೆ.ಎಂಡಿ** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಶಿವಕುಮಾರ್ ಕೆ. (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ,ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಶ್ರೀ ಬಸ್ರೂರು ಅಪ್ಪಣ್ಣ ಹೆಗ್ಡೆ, ಹಾಗೂ ಶ್ರೀ ಪಿ. ರಾಮಯ್ಯ ಇವರಿಬ್ಬರು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ಶಾಸಕರಾಗಿದ್ದರು ಮತ್ತು ಬೇರೆ ಬೇರೆ ಕ್ಷೇತ್ರದಲ್ಲಿ ಕೆಲಸ ಮಾಡಿದಂತಹವರು. ಶ್ರೀಯುತರುಗಳು ದೈವಾಧೀನರಾದ ಮೇಲೆ ತಾವು ಸಂತಾಪ ಸೂಚನೆಯನ್ನು ಮಂಡಿಸಿರುವ ಬಗ್ಗೆ ನಾನು ಬೆಂಬಲವನ್ನು ವ್ಯಕ್ತಪಡಿಸುತ್ತೇನೆ. ಆ ದಿನಗಳಲ್ಲಿ ಪತ್ರಕರ್ತರಾಗಿ ಕೆಲಸ ಮಾಡುವುದು ಬಹಳ ಕಷ್ಟವಿತ್ತು. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ಶ್ರೀ ಪಿ. ರಾಮಯ್ಯನವರು ಗ್ರಾಮೀಣ ಪ್ರದೇಶದ ರೈತ ಕುಟುಂಬದಿಂದ ಬಂದಂತಹವರು. ಅವೊತ್ತಿನ ದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಶ್ರೀಯುತರು ಬಿ.ಎಸ್ಸಿ. ಪದವಿ ಮುಗಿದ ನಂತರ Teleprinter Operator ಆಗಿ ಸೇರಿಕೊಂಡಿದ್ದರು. ಮೊದಲು Teleprinter ಇತ್ತು. ಅದರ ಮೂಲಕ ಅವೊತ್ತಿನ ದಿನಗಳಲ್ಲಿ ಸುದ್ದಿ ಕಳುಹಿಸುವಂತಹ ಅವಕಾಶಗಳು ಇತ್ತು. ಅಂದಿನ ದಿನಗಳಲ್ಲಿ ತಂತ್ರಜ್ಞ ಇನ್ನೂ ಮುಂದುವರೆದಿರಲಿಲ್ಲ. ಆಗ ಪ್ರಾರಂಭವಾದಂತಹ ವೃತ್ತಿ ವರದಿಗಾರರು, ಕ್ರೀಡಾ ವರದಿಗಾರರು, ಕೋರ್ಟ್ ವರದಿಗಾರರಾಗಿ ಬಹಳಷ್ಟು ಕೆಲಸ ಮಾಡಿದ್ದು, ಇವತ್ತು Associate Editor rank ಗೆ ಹೋಗಿ, 'ಹಿಂದು' ದಿನಪತ್ರಿಕೆಯಲ್ಲಿ ಕಾರ್ಯನಿರ್ವಹಿಸಿದಂತಹವರು. ಕರ್ನಾಟಕ ರಾಜ್ಯಕ್ಕೆ ಒಬ್ಬ ಮಾದರಿ ಪತ್ರಕರ್ತರಾಗಿದ್ದನ್ನು ಇವತ್ತಿನ ದಿನ ನಾವು ಸ್ಮರಿಸಬೇಕಾಗಿದೆ.

ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳದಂತೆ, ಸಣ್ಣ ಪತ್ರಿಕೆಯವರು ಇವತ್ತಿನ ದಿನ ಶ್ರೀಯುತರಾದ ಪಿ. ರಾಮಯ್ಯನವರನ್ನು ಸ್ಮರಿಸುತ್ತಾರೆ. ಏಕೆಂದರೆ, ಅವರು ಸಣ್ಣ ಪತ್ರಿಕೆಗಳ ಸಮಸ್ಯೆಗಳ ಬಗ್ಗೆ ಅಧ್ಯಯನಕ್ಕಾಗಿ ರಚಿಸಲಾಗಿದ್ದ ಸಮಿತಿ ಅಧ್ಯಕ್ಷರಾಗಿ ರಾಜ್ಯ ಪ್ರವಾಸ ಮಾಡುವಾಗ, ಸಣ್ಣ ಪತ್ರಿಕೆಗಳಲ್ಲಿ PF (Provident Fund) ಇಲ್ಲ ಮತ್ತು weekly off ಇಲ್ಲ ಎಂದು ನಾನು ಕೂಡ ಅವರ ಮುಂದೆ ಅಹವಾಲುಗಳನ್ನು ತೆಗೆದುಕೊಂಡು ಹೋಗಿದ್ದೆ. ಶ್ರೀಯುತರು ಅದನ್ನು ಬಹಳ ಗಂಭೀರವಾಗಿ ತೆಗೆದುಕೊಂಡರು. ಇವತ್ತಿನ ದಿನ ಸಣ್ಣ ಪತ್ರಿಕೆಗಳಲ್ಲಿ P.F. ಮತ್ತು weekly off ಸಿಗುತ್ತಿದೆ ಎಂದರೆ ಅದರ ಕೀರ್ತಿ ಶ್ರೀ ಪಿ. ರಾಮಯ್ಯನವರಿಗೆ ತಲುಪಬೇಕಾಗಿದೆ. P.F. ಇರಬಹುದು ಮತ್ತು ಬಹಳಷ್ಟು ಸಹಾಯವನ್ನು ಮಾಡಿಕೊಟ್ಟರು. ಶ್ರೀಯುತರು ಮಂಡ್ಯ ಜಿಲ್ಲೆಯ, ನಾಗಮಂಗಲ ತಾಲ್ಲೂಕಿನ ದೇವಲಾಪುರ ಹೋಬಳಿಯ ಬಿಂಡೇನಹಳ್ಳಿಗೆ ಬಹಳಷ್ಟು ಸೇವೆಗಳನ್ನು ಸಲ್ಲಿಸಿದ್ದಾರೆ. ಹೇಮಾವತಿ ಬಲದಂಡೆ ಕಾಲುವೆಯಲ್ಲಿ ನೀರು ಬರುವುದಿಲ್ಲ ಎಂಬ ವಿಷಯದ ಬಗ್ಗೆ ಅವೊತ್ತಿನ ದಿನ ನೀರಾವರಿ ಸಚಿವರಾಗಿದ್ದಂತಹ ಮಾನ್ಯ ಎಚ್.ಕೆ. ಪಾಟೀಲರವರ ಗಮನಕ್ಕೆ ತಂದರು. ಆ ಹಳ್ಳಿಗೆ ನೀರು ಬರುವಂತೆ ಮಾಡಿದಲ್ಲದೇ ಬೆಟ್ಟದ ಮೇಲೆ ದೇವಸ್ಥಾನ ಇದೆ. ಅಲ್ಲಿ ಓಡಾಡುವಂತೆ ರಸ್ತೆಯನ್ನು ಮಾಡಿಕೊಟ್ಟರು. ಬಹಳಷ್ಟು ವೃದ್ಧಾಶ್ರಮಗಳು, ಗ್ರಾಮೀಣ ಭಾಗದಿಂದ ಬಂದಂತಹ ಬಡವರು ಯಾರೇ ಇರಲಿ,

ಅವರಿಗೆ ಶ್ರೀಯುತರ ಸಹಾಯ ಮಾಡುತ್ತಿದ್ದರು ಎಂದು ನಾವು ಇವತ್ತಿನ ದಿವಸ ಸ್ಮರಿಸಬಹುದು. ಹಳ್ಳಿ ಭಾಗದಿಂದ ಬೆಂಗಳೂರಿಗೆ ಬರುತ್ತಿದ್ದಂತೆಯೇ ಹಳ್ಳಿಯನ್ನೇ ಮರೆತು ಹೋಗಿ ಬಿಟ್ಟು ಬೆಂಗಳೂರು ನಗರದ ವಾಸಿಗಳಾಗಿ ಬಿಡುತ್ತಾರೆ. ಆದರೆ ಶ್ರೀಯುತರು ನಾಗಮಂಗಲವನ್ನು ತಮ್ಮ ನೋಡಲ್ ತಾಲ್ಲೂಕನ್ನಾಗಿ ಮಾಡಿಕೊಂಡಿದ್ದರು.

ಮಾನ್ಯ ಸಭಾಪತಿಯವರೇ, ಶ್ರೀಯುತರು ಸದಾಶಿವನಗರದ ಮನೆಯಲ್ಲಿದ್ದರು. ನಾನು ಎಂ.ಎಲ್.ಸಿ., ಆದಾಗ ಅವರ ಮನೆಗೆ ಹೋಗಿದ್ದೆ. ಐದೂವರೆ ಲಕ್ಷ ರೂಪಾಯಿಗಳಲ್ಲಿ ಈ ಮನೆಯನ್ನು ಕಟ್ಟಿದ್ದೇನೆ. ಶ್ರೀ ದೇವರಾಜ ಅರಸು ಹಾದಿಯಿಂದ ಹಿಡಿದು ಶ್ರೀ ರಾಮಕೃಷ್ಣ ಹೆಗ್ಡೆ, ಶ್ರೀ ಬಿ.ಎಸ್. ಯಡಿಯೂರಪ್ಪನವರ ಹಾದಿಯವರೆಗೂ ಎಲ್ಲರೂ ಕೂಡ ನೀನು ಬೇರೆ ಕಡೆ ಹೋಗಿ ಸೈಟು ತೆಗೆದುಕೊಂಡು ದೊಡ್ಡ ಮನೆಯನ್ನು ಕಟ್ಟಿಕೊಳ್ಳಿ ಎಂದು ನನ್ನ ಬಳಿ ಮೂರುವರೆ ಗಂಟೆಗಳ ಕಾಲ ಮಾತನಾಡಿದರು. ಶ್ರೀಯುತರು ೩೦X೪೦ ಅಡಿ ನಿವೇಶನದಲ್ಲಿ duplex ಮನೆ ಕಟ್ಟಿರುವುದನ್ನು ತಾವೆಲ್ಲರೂ ನೋಡಿದ್ದೀರಿ. ಶ್ರೀಯುತರು ಬಹಳ ಸರಳ ಜೀವನವನ್ನು ನಡೆಸಿದಂತಹವರು. ಒಂದೊಂದು ಇಟ್ಟಿಗೆ, ಕಬ್ಬಿಣ ಮತ್ತು ಮರಳಿನ ಬೆಲೆ ಮತ್ತು ಬಹಳ ಕಷ್ಟದಿಂದ ಕಟ್ಟಿರುವಂತಹ ಮನೆ ಇದು. ಹಾಗಾಗಿ ನನ್ನ ಮಕ್ಕಳು ಕೂಡ ಬಹಳ ಚೆನ್ನಾಗಿ ಆಗಿದ್ದಾರೆ. ನಾವು ಪತ್ರಕರ್ತರಾಗಿ ಸರಳವಾಗಿ ಹೇಗೆ ಇರಬೇಕು ಮತ್ತು ಸದನದಲ್ಲಿ ಯಾವ ರೀತಿ ನಡೆದುಕೊಳ್ಳಬೇಕೆಂಬ ಬಗ್ಗೆ ನನಗೆ ಅವೊತ್ತಿನ ದಿನ ಬಹಳಷ್ಟು ಸಲಹೆ ನೀಡಿದರು.

ಮಾನ್ಯ ಸಭಾಪತಿಯವರೇ, ಶ್ರೀಯುತರು ಇತ್ತೀಚೆಗೆ 'ಮಲ್ಲಿಗೆ' ಆಸ್ಪತ್ರೆಯಲ್ಲಿದ್ದಾಗ ನಾನು ಅಲ್ಲಿಗೆ ಹೋಗಿ ಭೇಟಿ ಮಾಡಿದ್ದೆ. ಶ್ರೀಯುತರು ಮತ್ತು ನನ್ನ ಸಂಬಂಧ ಹೇಗಿತ್ತು ಎಂದರೆ, ನಾನು ಎಂ.ಎ., ಪತ್ರಿಕೋದ್ಯಮ ಮುಗಿಸಿ 'ಹಿಂದು' ದಿನಪತ್ರಿಕೆಯಲ್ಲಿ internship ಅನ್ನು ಮೂರು ತಿಂಗಳು ಕೆಲಸ ಮಾಡುತ್ತಿರುವಾಗ, ಶ್ರೀಯುತರು ಸಾಯಂಕಾಲ ಆರು ಗಂಟೆಗೆ ಬರುವುದಕ್ಕೆ ನನಗೆ ಹೇಳಿದ್ದರು. ನಾನು ಆರು ಗಂಟೆಗೆ ಹೋದಾಗ, ನನ್ನೊಬ್ಬರನ್ನೇ ಕೂರಿಸಿ, ನಾನು ಬರೆದಿದ್ದನ್ನೆಲ್ಲಾ ತಿದ್ದಿಪಡಿ ಮಾಡಿ, ಈ ತರಹ ಬರೆಯಬೇಕು. ಈ ರೀತಿ ಇರಬೇಕು. ಯಾವ ತರಹ Assignment ಗೆ ಹೋದರೆ, ಯಾವ ತರಹ ಪ್ರಶ್ನೆ ಮಾಡಬೇಕು? ನಾಳೆ ಸಿ.ಎಂ. ಅವರನ್ನು ಭೇಟಿ ಮಾಡುವುದಕ್ಕೆ ನೀನು ಹೋಗುತ್ತಿದ್ದೀಯಾ. ನೀನು ಏನು ಕೇಳಬೇಕೆಂಬುದರ ಬಗ್ಗೆ ಕೇಳುತ್ತಿದ್ದರು. ನಾನು ಒಬ್ಬ ಗ್ರಾಮೀಣ ಪ್ರದೇಶದ ಸಾಮಾಜಿಕ ಕುಬ್ಜ ಹಿನ್ನೆಲೆಯಿಂದ ಬಂದಿರುವುದರಿಂದ ನಮ್ಮಂತಹವರನ್ನು ಪ್ರೋತ್ಸಾಹಿಸುತ್ತಿದ್ದರು. ನೀವು ಧೈರ್ಯವಾಗಿರಬೇಕು ಮತ್ತು ಯಾವುದೇ ಕಾರಣಕ್ಕೆ ಧೃತಿಗೇಡಬಾರದು ಹಾಗೂ ಮೌಲ್ಯಧಾರಿತವಾಗಿ ಬದುಕನ್ನು ನಡೆಸಬೇಕೆಂದರೆ, ನಿಮಗೆ ಭವಿಷ್ಯ ಇರುತ್ತದೆ ಎಂದು ಹೇಳಿದ್ದರು. ಹಾಗಾಗಿ ಅವರು ನನಗೆ 'ಹಿಂದು' ದಿನಪತ್ರಿಕೆಯಲ್ಲಿ ತುಮಕೂರಿಗೆ ಹೋಗಿ ಕೆಲಸ ಮಾಡುತ್ತೀಯಾ ಎಂದು ಕೇಳಿದ್ದರು. ಅವೊತ್ತಿನ ದಿನಗಳ ಪರಿಸ್ಥಿತಿಯಲ್ಲಿ Indian Express ಈ ಪತ್ರಿಕೆಯಲ್ಲಿ Bofors ವಿಚಾರಗಳನ್ನೆಲ್ಲಾ ಓದಿಕೊಂಡು ivestigative journalism ಆ inspiration ನಿಂದ ನಾನು ಅವರ ಮಾತು ಕೇಳದೇ Indian Express ದಿನಪತ್ರಿಕೆಗೆ ಹೋಗಿದ್ದೆನು. ಶ್ರೀಯುತರು 'ಹಿಂದು' ದಿನಪತ್ರಿಕೆಯಲ್ಲಿ ಕಾರ್ಯನಿರ್ವಹಿಸಿ

'ಹಿಂದು ರಾಮಯ್ಯ' ಎಂದೇ ಹೆಸರಾಗಿದ್ದರೋ, ಹಾಗೆಯೇ ಮೈಸೂರಿಗೆ ಬಂದು ಶಿವಕುಮಾರ್ ಎಂದರೆ 'ಎಂ.ಎಲ್.ಸಿ. ಶಿವಕುಮಾರ್' ಎಂಬ ಹೆಸರು ಯಾರಿಗೂ ಗೊತ್ತಾಗುವುದಿಲ್ಲ. 'Indian Express Shivakumar' ಎಂದು ಹೆಸರು ಹೇಳಿದರೆ ಯಾರಾದರೂ ಹೇಳುತ್ತಾರೆ. ಅಲ್ಲಿ ನನ್ನ ಮೂವತ್ತೈದು ವರ್ಷಗಳಿಂದ ಸೇವೆ ಸಲ್ಲಿಸಿದ್ದರಿಂದ, ಯಾವುದೇ ಸಂಸ್ಥೆಯಲ್ಲಿ long term ಇದ್ದರೆ, ಆ ತರಹ ಹೆಸರು ಬರುತ್ತದೆ. 1998 ರ ಸಮಯದಲ್ಲಿ ಮಾನ್ಯ ದೇವೇಗೌಡರು ಮತ್ತು ಅಂದಿನ ಮುಖ್ಯಮಂತ್ರಿಗಳು ಹಾಗೂ ಆ ಸರ್ಕಾರ ಅವರನ್ನು ನಾಮನಿರ್ದೇಶನ ಮಾಡಿತ್ತು. ಆದಾದ ನಂತರ ಬಹಳ ವರ್ಷಗಳ ಕಾಲ ಅಂದರೆ 29 ರಿಂದ 30 ವರ್ಷಗಳ ಕಾಲ ಪತ್ರಕರ್ತರಿಗೆ ಅವಕಾಶ ಇರಲಿಲ್ಲ. ಇವತ್ತಿನ ಮಾನ್ಯ ಮುಖ್ಯಮಂತ್ರಿಗಳು, ಹಿರಿಯರಾದಂತಹ ಶ್ರೀ ಮಲ್ಲಿಕಾರ್ಜುನ ಖರ್ಗೆ ಹಾಗೂ ಎಲ್ಲರೂ ಸೇರಿ ನನಗೆ ಇಲ್ಲಿ ಸೇವೆ ಸಲ್ಲಿಸಲು ಅವಕಾಶ ಮಾಡಿಕೊಟ್ಟಿದ್ದಾರೆ. ಶ್ರೀಯುತರು ನಮ್ಮ ಗುರುಗಳಾದ ನಂತರ ನನಗೊಂದು ಅವಕಾಶ ಇಲ್ಲಿ ಸಿಕ್ಕಿರುವುದು ಬಹಳ ಸಂತೋಷ. ಅವರಿಗೆ ಬಂದಂತಹ ಕಷ್ಟಕರ ದಿನಗಳ ಘಟನೆಯ ಬಗ್ಗೆ ಹೇಳುತ್ತೇನೆ. ಕಾವೇರಿ ಗಲಾಟೆ ತಾರಕಕ್ಕೆ ಏರಿಬಿಟ್ಟಿತ್ತು. ಅವರು 'ಹಿಂದು' ದಿನಪತ್ರಿಕೆ ಮಿಳುನಾಡು ಸಂಸ್ಥೆ ಎಂದು ಕಾವೇರಿ ಗಲಾಟೆಯಲ್ಲಿ ಆ Newspaper Van ಅನ್ನು ಸುಟ್ಟು ಹಾಕಿಬಿಟ್ಟರು. ಪತ್ರಿಕೆಗಳ ಬಗ್ಗೆ ಅವರು ಕರ್ನಾಟಕವನ್ನು ಬಿಡುವುದಕ್ಕಾಗುತ್ತಿಲ್ಲ. ಕಾವೇರಿಯನ್ನು ಬಿಡುವುದಕ್ಕಾಗುತ್ತಿಲ್ಲ. ಆ ಸಂಸ್ಥೆಯನ್ನು ಬಿಡುವುದಕ್ಕಾಗಿರಲಿಲ್ಲ. ಅಂತಹ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಶ್ರೀಯುತರಾದ ಪಿ. ರಾಮಯ್ಯನವರು ಬಹಳ ಒಳ್ಳೆಯ ಕೆಲಸ ಮಾಡಿದರು. ಅವರ balanced state of mind ಅನ್ನು ನಾವು ಆಗ ನೋಡಿದ್ದೇವೆ. ಯಾವುದೇ ಕಾರಣಕ್ಕೂ ರಾಜ್ಯದ ಪರವಾಗಿ ನ್ಯಾಯಯುತವಾದಂತಹ ಲೇಖನಗಳನ್ನು ಬರೆದರು ಹೊರತು ಯಾವುದೇ ಮ್ಯಾನೇಜ್‌ಮೆಂಟ್‌ನ ಒತ್ತಡಕ್ಕಾಗಲೀ ಇನ್ಯಾವುದೋ ಒತ್ತಡಕ್ಕಾಗಲೀ ಮಣಿಯದೇ ನಿಷ್ಪಕ್ಷಪಾತವಾಗಿ ಲೇಖನಗಳನ್ನು ಬರೆದರು. ಅದೇ ತರಹ ಕೃಷ್ಣಾ ಮೇಲ್ದಂಡೆ ಈ ಭಾಗದಲ್ಲಿ ಕಾವೇರಿ ಬಗ್ಗೆ ಅವರು ಬರೆದಿರುವ ಲೇಖನಗಳನ್ನು ನಾವು ಏನು ಓದಿ ತಿಳಿದುಕೊಂಡಿದ್ದೇವೆ. ಇಡೀ ಕರ್ನಾಟಕಕ್ಕೆ ಕೃಷ್ಣ ಮೇಲ್ದಂಡೆ ಬಗ್ಗೆ ಹುಬ್ಬಳ್ಳಿಯಿಂದ ಮದನ್ ಮೋಹನ್‌ರವರು ಪರಿಚಯಿಸಿದಂತಹವರು. ಈ ವರ್ಷ ಶ್ರೀ ಮದನ್ ಮೋಹನ್, ಶ್ರೀ ಟಿ.ಜೆ.ಎಸ್. ಜಾರ್ಜ್, ಶ್ರೀ ಪಿ. ರಾಮಯ್ಯನವರು ಇರಬಹುದು. ಈ ಮೂರು ಜನ ದೊಡ್ಡ ದಿಗ್ಗಜರನ್ನು ಪತ್ರಿಕೋದ್ಯಮ ಕ್ಷೇತ್ರದಿಂದ ನಾವು ಕಳೆದುಕೊಂಡಿದ್ದೇವೆ. ಅವೊತ್ತಿನ ಕಾಲಕ್ಕೆ ಮಾಧ್ಯಮ ಮತ್ತು ಸರ್ಕಾರದ ಮಧ್ಯೆ ಕೊಂಡಿಯಾಗಿದ್ದಂತಹವರು ಶ್ರೀ ಪಿ. ರಾಮಯ್ಯನವರು. ಯಾರಾದರೂ ಮಾನ್ಯ ಮುಖ್ಯಮಂತ್ರಿಗಳನ್ನು ನೋಡಬೇಕೆಂದರೆ ಯಾವುದೇ policy matter or discussion ಇರಬಹುದು. ಅವರನ್ನು ಬಿಟ್ಟು ನಾವು ಹೋಗುವುದಕ್ಕಾಗುತ್ತಿರಲಿಲ್ಲ. ಇವರು ಸದನದಲ್ಲಿ ಇರಬೇಕಾದರೆ, ರೂಲ್ಸ್, ಬೇರೆ ವಿಚಾರಗಳು, ಕಠಿಣ ಪರಿಸ್ಥಿತಿ ಇದಕ್ಕೆಲ್ಲಾ intervene ಆಗುತ್ತಿದ್ದರು ಎಂಬುದು ನಿಮ್ಮಗೆಲ್ಲರಿಗೂ ಗೊತ್ತಿದೆ. ನನಗಿಂತಲೂ ತಮಗೆಲ್ಲರಿಗೂ ಜಾಸ್ತಿ ಗೊತ್ತಿದೆ. ಅವರು ಬಹಳ ವರ್ಷಗಳ ಕಾಲ ಕೆಳಮನೆ ಮತ್ತು ಮೇಲ್ಮನೆ news cover ಮಾಡಿದ್ದರಿಂದ *"Rules of Procedure and Conduct of Business"* ಬಗ್ಗೆ ಅಪಾರವಾದ ಜ್ಞಾನ ಇತ್ತು. ಅದನ್ನು ಕೂಡ

ಪಾಲಿಸುತ್ತಿದ್ದರು. ಹಾಗಾಗಿ ಬಹಳಷ್ಟು contribute ಮಾಡುತ್ತಿದ್ದರು. ಯಾವುದೇ black spot ಇಲ್ಲದೇ ಈ ತರಹದ ಒಂದು ವ್ಯಕ್ತಿತ್ವವನ್ನು ಇಟ್ಟುಕೊಂಡು ಸರಳತೆಯಿಂದ ತನ್ನ ಪತ್ರಿಕೋದ್ಯಮದಲ್ಲಿ ಬಹಳಷ್ಟು ಪ್ರಾಮಾಣಿಕವಾಗಿ ಬದುಕಿದರು. ನಾಡಿನ ಪತ್ರಿಕರ್ತರಿಗೆ ಮತ್ತು ಸಮಾಜಕ್ಕೆ ಮಾದರಿಯಾದಂತಹ ಪಿ. ರಾಮಯ್ಯನವರು ಇರಬಹುದು. ಇನ್ನುಳಿದ ಪತ್ರಕರ್ತರಾದ ಶ್ರೀ ಟಿ.ಜೆ.ಎಸ್. ಜಾರ್ಜ್, ಶ್ರೀ ಮದನ್ ಮೋಹನ್‌ರವರ ನಿಧನ ಇಡೀ ಪತ್ರಿಕೋದ್ಯಮ ಕ್ಷೇತ್ರಕ್ಕೆ ದೊಡ್ಡ ನಷ್ಟವನ್ನುಂಟು ಮಾಡಿದೆ. ಅವರು ಹಾಕಿಕೊಟ್ಟ ಮಾರ್ಗವನ್ನು ಪಾಲಿಸುವಂತಹ ಪ್ರಯತ್ನವನ್ನು ನಾನು ಮಾಡುತ್ತೇನೆ. ಶ್ರೀ ಪಿ. ರಾಮಯ್ಯನವರು ಎಲ್ಲರಿಗೂ ಬಹಳಷ್ಟು ಸ್ಫೂರ್ತಿಯಾಗಿದ್ದಾರೆ. ನಮ್ಮಂಥ ಗ್ರಾಮೀಣ ಪ್ರದೇಶದಿಂದ ಬಂದಂತಹ ನೂರಾರು ಜನ ಪತ್ರಕರ್ತರಿಗೆ ಅವರು ಸ್ಫೂರ್ತಿಯಾಗಿದ್ದಾರೆ ಎಂದು ಹೇಳುತ್ತಾ, ತಾವು ತಂದಿರುವ ಸಂತಾಪ ಸೂಚನೆಯನ್ನು ಮಂಡಿಸಿರುವ ಬಗ್ಗೆ ನಾನು ಬೆಂಬಲವನ್ನು ವ್ಯಕ್ತಪಡಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ಮೃತರುಗಳ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

ಮೃತರುಗಳ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು, ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)**

**ಸಭಾಪತಿಯವರು:–** ಈ ಸದನದಲ್ಲಿ ಪ್ರಸ್ತಾಪಿಸಿದ ಮತ್ತು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಗಣ್ಯರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

**(ಮುಂದು)**

(241) 09.03.2026 11.30 ಟಿಸಿಹೆಚ್‌ಎಂ.ಡಿ (ಸಭಾಪತಿಯವರ ಉಪಸ್ಥಿತಿ)

**2. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**ಪ್ರಶ್ನೆ ಸಂಖ್ಯೆ.575**

**(ಉತ್ತರ ಲಗತ್ತಿಸಿದೆ)**

**ಶ್ರೀ ಡಿ.ಟಿ.ಶ್ರೀನಿವಾಸ್(ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ. ನಾನು ಕೇಳಿರತಕ್ಕಂಥ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಒದಗಿಸಿದ್ದಾರೆ. ಆದರೆ ಶಾಲಾ ಶಿಕ್ಷಣ ಇಲಾಖೆಯಲ್ಲಿ ಬುನಾದಿಯನ್ನು ಭದ್ರಪಡಿಸುವುದಕ್ಕೆ ಸತತವಾಗಿ ಎರಡೂವರೆ ವರ್ಷಗಳಿಂದ ಸಾಕಷ್ಟು ವಿಚಾರಗಳೊಂದಿಗೆ ರಾಜಿಯಾಗದೇ ಗಟ್ಟಿಗೊಳಿಸುತ್ತಾ ಬರುತ್ತಿರುವ ಮಾನ್ಯ ಸಚಿವರು, ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರಿಂದ ಪ್ರಾಚಾರ್ಯರ ಹುದ್ದೆಗೆ ಬಡ್ತಿಗೆ ಸ್ವಲ್ಪ ಹೆಚ್ಚಿನ ಗಮನ ವಹಿಸಬೇಕಾಗಿತ್ತು ಎಂದು ಭಾವಿಸುತ್ತೇನೆ. ಏಕೆಂದರೆ ನಿಖರವಾಗಿ ಯಾವ ದಿನಾಂಕಕ್ಕೆ ಅವರ ಬಡ್ತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸುತ್ತೇವೆ ಎಂಬ ಮಾಹಿತಿಯನ್ನು ಕೊಟ್ಟಿಲ್ಲ. ಅದನ್ನು ದಯವಿಟ್ಟು ಮಾನ್ಯ ಸಚಿವರು ಹೇಳಬೇಕೆಂದು ಬಯಸುತ್ತೇನೆ.

**ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):-** ಮಾನ್ಯ ಸಭಾಪತಿಯವರೇ, ಈಗ ನಾವು promotional activities ಎಲ್ಲಾ ಸ್ವೀಕೃತ ಮಾಡಿದ್ದೇವೆ. ಅದಕ್ಕೆ ಸಾಕಷ್ಟು complaints ಕೂಡ ಬಂದಿವೆ. ಅದನ್ನೆಲ್ಲಾ ಪರಿಶೀಲನೆ ಮಾಡಿ ಅವರಿಗೆ promotion ಕೊಡಕತಕ್ಕಂಥ ವ್ಯವಸ್ಥೆಯನ್ನು ನಾವು ಮಾಡುತ್ತೇವೆ. ಮಾನ್ಯ ಸದಸ್ಯರು ಏನು ಅದರ ನಂಬರ್ ಕೇಳಿದ್ದಾರೆ ಅದರಲ್ಲಿ ಪ್ರಾಂಶುಪಾಲರ ಹುದ್ದೆಗೆ ಒಟ್ಟು presently 255 posts are vacant. ಕಲ್ಯಾಣ ಕರ್ನಾಟಕದಲ್ಲೇ ಸುಮಾರು 45 ಪ್ರಾಂಶುಪಾಲರ ಹುದ್ದೆಗಳಿವೆ. ನನಗೆ details ಬಂದಿದೆ. ಇದು process ಆಗಿರುವುದರಿಂದ ಇದನ್ನು ನಾವು ವೇಗವಾಗಿ ಮುಗಿಸುತ್ತೇವೆ. ತುಂಬಾ ವರ್ಷದಿಂದಲೂ ಕೂಡ promotions held up ಆಗಿತ್ತು. ಅದನ್ನು ಮಾಡಿಸಿ ಕೊಡತಕ್ಕಂಥದ್ದನ್ನು ಆದಷ್ಟು ಬೇಗ ನಾವು ಮಾಡುತ್ತೇವೆ.

**ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದರಲ್ಲಿ ನಾನು 4 ಉಪ ಪ್ರಶ್ನೆಗಳನ್ನು ಕೇಳಿದ್ದೇನೆ. ಆದರೆ ಮೊದಲನೆಯದಾಗಿ ಈಗಾಗಲೇ ಕಳೆದ ವರ್ಷ ಡಿಸೆಂಬರ್ 31ಕ್ಕೆ ಇಲಾಖೆ ವತಿಯಿಂದ ದಿನಾಂಕ 18.12.2025ಕ್ಕೆ ಕಳುಹಿಸಿ, ಖಾಲಿ ಇರುವ ಹುದ್ದೆಗಳನ್ನು ತುಂಬುವುದಕ್ಕೆ ಎಲ್ಲಾ ಮಾಹಿತಿಯನ್ನು ಪಡೆಯಲಾಗಿದೆ. ಆದರೆ ಇನ್ನೊಂದು ಉಪ ಪ್ರಶ್ನೆ ಕೇಳಿದ್ದೆನು. ಅದಕ್ಕೆ ನಾವು ಈಗಾಗಲೇ ಪ್ರಭಾರದಲ್ಲಿಸಿದ್ದೇವೆಂದು ಹೇಳಿದ್ದಾರೆ. ಅವರ ಮೂಲ ಹುದ್ದೆಯಲ್ಲಿ ಅವರು ಏನು ಪಾಠ ಮಾಡಬೇಕಾಗಿತ್ತೋ ಅದಕ್ಕೆ

ಖಂಡಿತವಾಗಿಯು ತೊಂದರೆಯಾಗುತ್ತಿದೆಯೆಂದು ಪ್ರಭಾರದಲ್ಲಿ ಇಟ್ಟಿದ್ದಾರೆ. ಎರಡನೆಯ ವಿಚಾರ ಏನೆಂದರೆ, ಅನೇಕ ಉಪನ್ಯಾಸಕರು ಒಂದೇ ಹುದ್ದೆಯಲ್ಲಿ ಸುಮಾರು 29 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಆದರೆ ಇದುವರೆಗೂ ಯಾವುದೇ ಬಡ್ತಿ ಇಲ್ಲದೇ ನಿವೃತ್ತಿಯಾಗುತ್ತಿದ್ದಾರೆ. ಮೂರನೆಯದಾಗಿ ಈಗಾಗಲೇ ಸುಮಾರು 20 ಜನ ಉಪನ್ಯಾಸಕರು ಇದೇ ಜೂನ್‌ನಲ್ಲಿ ನಿವೃತ್ತಿಯಾಗುತ್ತಿದ್ದಾರೆ. ಇನ್ನೂ ಸುಮಾರು 43 ಜನ ಪ್ರಸ್ತುತ ನಿವೃತ್ತಿ ಅಂಚಿನಲ್ಲಿದ್ದಾರೆ. ಅಂದರೆ ತಡ ಮಾಡಿದಷ್ಟು ಅವರು ಬಡ್ತಿಯಿಂದ ವಂಚಿತರಾಗುತ್ತಾರೆ. ಅವರು ಸುಮಾರು 29 ವರ್ಷಗಳ ಕಾಲ ಸೇವೆ ಸಲ್ಲಿಸಿದರೂ ಕೂಡ ಕೊನೆಯಲ್ಲಿ ಅಂದರೆ ನಿವೃತ್ತಿ ಅಂಚಿನಲ್ಲಿ ನನಗೊಂದು ಬಡ್ತಿ ಸಿಗುತ್ತದೆಂದು ಆಸೆಯಿಂದ ಇರುತ್ತಾರೆ. ಅಂತಹ ಸಂದರ್ಭದಲ್ಲಿ ತಮ್ಮ ಇಲಾಖೆ ವತಿಯಿಂದ ಆಗುತ್ತಿರತಕ್ಕಂಥ ನಿಧಾನಗತಿಯಿಂದಾಗಿ ನಿವೃತ್ತಿ ಅಂಚಿನಲ್ಲಿರತಕ್ಕಂಥವರು ಬಡ್ತಿಯಿಂದ ಖಂಡಿತವಾಗಿಯು ವಂಚಿತರಾಗಿ ಕೊನೆಯಲ್ಲಿ ಬಡ್ತಿ ಸಂದರ್ಭದಲ್ಲೂ ಕೂಡ ಅವರ ಮನಸ್ಸಿನಲ್ಲಿ ಅದು ಉಳಿದುಹೋಗುತ್ತದೆ. ಅಯ್ಯೋ! ಇನ್ನೊಂದು 3 ತಿಂಗಳು ಅಥವಾ 6 ಆಗಿದ್ದರೆ ನನಗೊಂದು ಬಡ್ತಿ ಸಿಗುತ್ತಿತ್ತು ಎಂದು ಏನು ಕಾಯ್ದುಕೊಂಡಿದ್ದಾರೆ. ಖಂಡಿತವಾಗಿಯು ಅಂತಹವರು ವಂಚಿತರಾಗುತ್ತಾರೆ. ಆ ನಿಟ್ಟಿನಲ್ಲಿ ಇವತ್ತು D.P.C. (Departmental Promotion Committee) ಯನ್ನು ಕರೆದು ಪ್ರಕ್ರಿಯೆಯಲ್ಲಿ ಮಾನ್ಯ ಸಚಿವರು ತೊಡಗಿದ್ದಾರೆ. ಅದನ್ನು ಆದಷ್ಟು ಬೇಗ ಒಂದೆರಡು ತಿಂಗಳಿನಲ್ಲಿ ಈ ಪ್ರಕ್ರಿಯೆ ಮುಗಿಸಿಬಿಟ್ಟರೆ ಖಂಡಿತವಾಗಿಯು ಶಾಲಾ ಶಿಕ್ಷಣ ಇಲಾಖೆಯಲ್ಲಿ ನೀವು ಬುನಾದಿಯನ್ನು ಗಟ್ಟಿಗೊಳಿಸಲು ಹೋಗುತ್ತಿದ್ದೀರಿ. ಅದೇ ನಿಟ್ಟಿನಲ್ಲಿ ವಿದ್ಯಾರ್ಥಿಗಳ ತಿರುವು ಇದು. ಈಗ ಪಿ.ಯು.ಸಿ ಪರೀಕ್ಷೆ ನಡೆಯುತ್ತಿದೆ. ಅವರು ತಮ್ಮ ಭವಿಷ್ಯಗಳನ್ನು ರೂಪಿಸಿಕೊಳ್ಳತಕ್ಕಂಥ ತಿರುವು. ಇಂತಹ ಸಂದರ್ಭದಲ್ಲಿ ಎಚ್ಚರಿಕೆಯಿಂದ ಖಂಡಿತವಾಗಿ ಕೂಡ ತಾವು ಸಾಕಷ್ಟು ಕೆಲಸಗಳನ್ನು ಮಾಡಿ ಇದನ್ನು ಅತಿ ಶೀಘ್ರವಾಗಿ ಪೂರೈಸುತ್ತೀರಿ ಎಂದು ಭಾವಿಸುತ್ತಿದ್ದೇನೆ. ಖಂಡಿತವಾಗಿ ಅದರ ಬಗ್ಗೆ ಎಷ್ಟು ದಿವಸದೊಳಗೆ ಮುಗಿಸುತ್ತೀರಿ ಎಂದು ಹೇಳಬೇಕೆಂದು ನಾನು ಕೇಳುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ಡಿ.ಟಿ.ಶ್ರೀನಿವಾಸ್ ರವರೇ, ತಾವು ನೇರವಾಗಿ ಪ್ರಶ್ನೆ ಕೇಳಿ?

**ಶ್ರೀ ಎಸ್.ಮಧು ಬಂಗಾರಪ್ಪ:–** ಮಾನ್ಯ ಸಭಾಪತಿಯವರೇ, ಪ್ರಭಾರದಲ್ಲಿರತಕ್ಕಂಥವರನ್ನು ಯಾರು ಅವರ ಕಾಲೇಜ್‌ನಲ್ಲಿ senior ಇರುತ್ತಾರೋ ಅವರನ್ನು ಪ್ರಾಂಶುಪಾಲರನ್ನಾಗಿ ಮಾಡಿರುತ್ತೇವೆ. ಮಾನ್ಯ ಸದಸ್ಯರು ಹೇಳಿದ್ದು ಸರಿಯಿದೆ. ಏಕೆಂದರೆ ಕೆಲವರೆಲ್ಲಾ ಪ್ರಮೋಷನ್ ಸಿಗದೇ ನಿವೃತ್ತಿಯಾಗುತ್ತಾರೆ. ಮಾನ್ಯ ಸದಸ್ಯರ ಕಾಳಜಿ ಏನಿದೆ, ಬೇಗ ಮಾಡತಕ್ಕಂಥದ್ದು. ಏಕೆಂದರೆ ಆಕ್ಷೇಪಣೆಯನ್ನು ಕರೆಯಲೇಬೇಕು. ಆಕ್ಷೇಪಣೆ ಬಂದಾಗ ಅದನ್ನು ಪರಿಶೀಲನೆ ಮಾಡಬೇಕು. ಅದನ್ನು speedup ಮಾಡಿ ಅವರಿಗೆ promotion ಕೊಡತಕ್ಕಂಥ ವ್ಯವಸ್ಥೆಯನ್ನು ಆದಷ್ಟು ಬೇಗನೆ ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ.557**
**(ಉತ್ತರ ಲಗತ್ತಿಸಿದೆ)**

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನಾನು ಕೇಳಿರತಕ್ಕಂಥ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ. ಇಂಧನ ಇಲಾಖೆಯು 2024-25ನೇ ಸಾಲಿನಲ್ಲಿ ಎಷ್ಟು ವಿದ್ಯುತ್ ಪರಿವರ್ತಕ (ಟ್ರಾನ್ಸ್‌ಫಾರ್ಮರ್)ಗಳನ್ನು ಖರೀದಿಗಾಗಿ ಎಷ್ಟು ಮೊತ್ತ ಹಾಗೂ ಯಾವ ಸಂಸ್ಥೆಯ ಪರವಾಗಿ 4-ಜಿ ವಿನಾಯಿತಿ ಪಡೆಯಲಾಗಿತ್ತು ಎಂದು ಪ್ರಶ್ನೆ ಕೇಳಿದ್ದೆನು. ಅದಕ್ಕೆ ಮಾನ್ಯ ಸಚಿವರು ಅನುಬಂಧ-1ರಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಎರಡನೆಯದಾಗಿ ಕ.ವಿ.ಕ (ಕರ್ನಾಟಕ ವಿದ್ಯುತ್ ಕಾರ್ಖಾನೆ) ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆಯಿಂದ ಸುಮಾರು 11,721 ವಿದ್ಯುತ್ ಪರಿವರ್ತಕ (ಟ್ರಾನ್ಸ್‌ಫಾರ್ಮರ್) ಗಳನ್ನು ಖರೀದಿಸದೇ ರೂ. 174.73 ಕೋಟಿಗಳನ್ನು ನೀಡಿ ಕೇರಳ ಸರ್ಕಾರದ ಅಧೀನ ಸಂಸ್ಥೆಯಾದ ಕೇರಳ ಎಲೆಕ್ಟ್ರಿಕಲ್ ಮತ್ತು ಅಲೈಡ್ ಇಂಜಿನಿಯರಿಂಗ್ ಕೊ. ಲಿಮಿಟೆಡ್‌ನಿಂದ ಖರೀದಿಸುವ ಸಲುವಾಗಿ 4-ಜಿ ವಿನಾಯಿತಿ ಪಡೆಯಲು ಅನುಸರಿಸುವ ಕ್ರಮಗಳೇನು ಎಂದು ಪ್ರಶ್ನೆ ಕೇಳಿದ್ದೆನು. ಇದಕ್ಕೆ ಕೊಟ್ಟಿರತಕ್ಕಂಥ ಉತ್ತರ ನನಗೆ ಸಮಾಧಾನ ತಂದಿಲ್ಲ. ಏಕೆ ಸಮಾಧಾನ ತಂದಿಲ್ಲವೆಂದರೆ, ಈ ಪ್ರಶ್ನೆಯನ್ನು ಸರ್ಕಾರದ ಇಲಾಖೆಯೇ ಮಾನ್ಯ ಸಚಿವರಿಗೆ ಸರ್ಕಾರದ ಅಧೀನ ಕಾರ್ಯದರ್ಶಿಯವರು ಕೇಳಿದ್ದಾರೆ. ಏನೆಂದು ಕೇಳಿದ್ದಾರೆಂದರೆ, 25 K.V.A ಪರಿವರ್ತಕಗಳನ್ನು Star-2 250 K.V.A, Star-1 ಹಾಗೂ 250 K.V.A...

**ಸಭಾಪತಿಯವರು:-** ಮಾನ್ಯ ರವಿಕುಮಾರ್ ರವರೇ, ಅವರು ನಿಮಗೆ ಏನು ಹೇಳಬೇಕು ನೇರವಾಗಿ ಹೇಳಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಅವರು ಹೇಳಿರುವುದನ್ನೇ ಹೇಳಿಬಿಡುತ್ತೇನೆ.

**ಸಭಾಪತಿಯವರು:-** ಮಾನ್ಯ ರವಿಕುಮಾರ್ ರವರೇ, ಇದು ಪ್ರಶ್ನೋತ್ತರ ಅವಧಿ. ಅದನ್ನು short ಆಗಿ ಹೇಳಿ ಮುಗಿಸಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಆಯಿತು short ಆಗಿ ಹೇಳಿ ಮುಗಿಸುತ್ತೇನೆ. ತನ್ನ ಸ್ವಂತ ಸಂಪನ್ಮೂಲಗಳಿಂದಲೇ ತಯಾರಿಸಿ ಸರಬರಾಜು ಮಾಡುತ್ತದೆಯೇ ಎಂದು Kerala Electrical and Allied Engineering Company Limited ಸಂಸ್ಥೆಯವರನ್ನು ಕೇಳಿದ್ದಾರೆ. Kerala Electrical and Allied Engineering Company Limited ಎಂಬ ಕೇರಳದ ಸಂಸ್ಥೆ ತನ್ನ ಸ್ವಂತ ಸಂಪನ್ಮೂಲಗಳಿಂದಲೇ ತಯಾರಿಸಿ ಸರಬರಾಜು ಮಾಡುತ್ತದೆಯೇ ಅಥವಾ ಬಾಹ್ಯ ಮೂಲಗಳಿಂದ ಸಂಗ್ರಹಣೆ ಮಾಡಿಕೊಂಡು ಸರಬರಾಜು ಮಾಡುತ್ತದೆಯೇ ಎಂಬ ಸಂಕ್ಷಿಪ್ತ ಮಾಹಿತಿಯನ್ನು ಒದಗಿಸಿ. ಮಾನ್ಯ ಸಚಿವರಿಗೆ ಕೇಳಿದ್ದಾರೆ.

**ಶ್ರೀ ಕೆ.ಜೆ.ಜಾರ್ಜ್ (ಇಂಧನ ಸಚಿವರು):-** ಮಾನ್ಯ ಸಭಾಪತಿಯವರೇ, ಯಾರು ಕೇಳಿರುವುದು?

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಅವರ ಇಲಾಖೆಯಲ್ಲೇ ಕೇಳಿದ್ದಾರೆ.

**ಶ್ರೀ ಕೆ.ಜೆ.ಜಾರ್ಜ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಯಾವ ಪ್ರಶ್ನೆ ಕೇಳಿದ್ದಾರೋ ಆ

ಪ್ರಶ್ನೆಗೆ ನಾನು ಉತ್ತರ ಕೊಡುತ್ತೇನೆ. ನಮ್ಮ ಇಲಾಖೆಯಿಂದ ಪ್ರಶ್ನೆ ಕೇಳಿರುವುದು ಇಲ್ಲಿಗೆ ಸಂಬಂಧ ಬರುವುದಿಲ್ಲ. ಮಾನ್ಯ ಸದಸ್ಯರು ಏನು ಪ್ರಶ್ನೆ ಕೇಳಿದ್ದಾರೋ ಅದಕ್ಕೆ ಉತ್ತರ ಕೊಟ್ಟಿದ್ದೇನೆ. ಒಂದುವೇಳೆ ಅದರಲ್ಲಿ ಏನಾದರೂ ಸಂಶಯಗಳಿದ್ದರೆ ಅವರು ಕೇಳಬಹುದು.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ನನಗೆ ಏನು ಸಂಶಯ ಇರುವುದು.. . ಉದಾಹರಣೆಗೆ ಹೇಳುತ್ತೇನೆ. ಈಗ ಕರ್ನಾಟಕ ರಾಜ್ಯದಲ್ಲಿ ಕರ್ನಾಟಕ ವಿದ್ಯುತ್ ಕಾರ್ಖಾನೆ ಇದೆ. ಅಲ್ಲಿಂದ ಇದನ್ನು ಖರೀದಿಸಬಹುದಾಗಿತ್ತು. ಮಾನ್ಯ ಸಚಿವರು ಕೇರಳದ ಕೊಚ್ಚಿಯ ಒಂದು ಸಂಸ್ಥೆಯಿಂದ ಖರೀದಿ ಮಾಡಿದ್ದಾರೆ. OK, ಅಲ್ಲಿ ಸ್ವಲ್ಪ ರೇಟ್ ಕಡಿಮೆ ಇದೆ. ಕರ್ನಾಟಕ ರಾಜ್ಯದ ರೇಟ್ ಸ್ವಲ್ಪ ಜಾಸ್ತಿ ಇದೆ. ಅದಕ್ಕೆ ನಾವು ಖರೀದಿ ಮಾಡಿದ್ದೇವೆಂದು ಅವರು ಹೇಳಬಹುದು. ಉದಾಹರಣೆಗೆ comparatively ಹೇಳುವುದಾದರೆ, ಅವರು tender ಅನ್ನು ಕೂಡ ಕರೆದಿಲ್ಲ. Tender ಕರೆಯದೇ 4G Exemption ತೆಗೆದುಕೊಂಡು ಖರೀದಿ ಮಾಡಿದ್ದಾರೆ.

**ಸಭಾಪತಿಯವರು:–** ಮಾನ್ಯ ಜಾರ್ಜ್‌ರವರೇ ತಾವು ಉತ್ತರ ಹೇಳಿ.

**ಶ್ರೀ ಕೆ.ಜೆ.ಜಾರ್ಜ್:–** ಮಾನ್ಯ ಸಭಾಪತಿಯವರೇ. . .

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. . .

**ಸಭಾಪತಿಯವರು:–** ಮಾನ್ಯ ಜಾರ್ಜ್‌ರವರೇ, ಒಂದು ನಿಮಿಷ ಕುಳಿತುಕೊಳ್ಳಿ. ಮಾನ್ಯ ಎನ್.ರವಿಕುಮಾರ್‌ರವರೇ, ಇದು Question Hour ಇದೆ. ತಾವು ಭಾಷಣ ಮಾಡಿದರೆ ಹೇಗೆ?

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ನಾನು ಒಂದು ನಿಮಿಷ ನಿಂತುಕೊಂಡಿದ್ದೇನೆ.

**ಸಭಾಪತಿಯವರು:–** ಮಾನ್ಯ ಎನ್.ರವಿಕುಮಾರ್ ರವರೇ, ನೀವು ಪ್ರಶ್ನೆ ಕೇಳುವುದಕ್ಕೆ ಎದ್ದು 4 ನಿಮಿಷ ಆಯಿತು.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ನಾನು ಬೇರೆಬೇರೆ States ದು ಹೇಳುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ಎನ್.ರವಿಕುಮಾರ್ ರವರೇ, ಇದು Question Hour.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಹೌದು.

**ಸಭಾಪತಿಯವರು:–** ಮಾನ್ಯ ಎನ್.ರವಿಕುಮಾರ್ ರವರೇ, ಹಾಗಾದರೆ ತಾವು ಬೇಕಾದಂತೆ ಮಾತನಾಡುವುದಕ್ಕೆ ಪೂರ್ತಿ ಬಿಟ್ಟುಬಿಡಬೇಕೇ? ಆಯಿತು ಬೇಗ ಹೇಳಿ ಮುಗಿಸಿ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಬೇರೆ ಎರಡು–ಮೂರು States ದು ಹೇಳುತ್ತೇನೆ. ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಡಲಿ.

**ಶ್ರೀ ಕೆ.ಜೆ.ಜಾರ್ಜ್:–** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸದಸ್ಯರಿಗೆ ಉತ್ತರ ಕೊಡುತ್ತೇನೆ. ಅದಾದನಂತರ ಇದರ ಬಗ್ಗೆ ಉಪ ಪ್ರಶ್ನೆ ಕೇಳಲಿ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ನಾನು ಹೇಳಿದ ನಂತರ ಮಾನ್ಯ ಸಚಿವರು ಉತ್ತರ

ಕೊಡಲಿ. ಕೇರಳದ್ದು 25 K.V.A. ಗೆ ರೂ.1,02,722 ಗಳು ಇದೆ, ಕರ್ನಾಟಕದ್ದು ರೂ.1,15,000 ಗಳು ಇರುವುದನ್ನು ನಾನು ಒಪ್ಪುತ್ತೇನೆ. ನೀವು ಕೇರಳದಿಂದ ಖರೀದಿ ಮಾಡಿ. ಆದರೆ ಅದೇ Transformer ಗೆ ದೆಹಲಿಯಲ್ಲಿ ರೂ.40,000 ಗಳು ಇದೆ, ಮಹಾರಾಷ್ಟ್ರದಲ್ಲಿ ರೂ.60,000 ಗಳು ಇದೆ, ಉತ್ತರ ಪ್ರದೇಶದಲ್ಲಿ ರೂ.50,000 ಗಳು ಇದೆ, ಮದ್ಯಪ್ರದೇಶದಲ್ಲಿ ರೂ.38,500 ಗಳು ಇದೆ, ಉತ್ತರ ಪ್ರದೇಶದಲ್ಲಿ ರೂ. ರೂ.85,000ಗಳು ಇದೆ ಮತ್ತು ಮಹಾರಾಷ್ಟ್ರದಲ್ಲಿ rate ಜಾಸ್ತಿ ಇದೆ. ಈ ರೀತಿ ಬೇರೆ ಬೇರೆ ರಾಜ್ಯಗಳಲ್ಲಿ ಕಡಿಮೆ rate ಇದೆ. ಅಲ್ಲೇ ಖರೀದಿ ಮಾಡಿ ಟೆಂಡರ್ ಕರೆಯಬಹುದಾಗಿತ್ತು ಅಲ್ಲವೇ? ಏಕೆ 4-G Exemption ಮಾಡಿಕೊಂಡು ಮಾಡುತ್ತಿದ್ದೀರಿ? ಕರ್ನಾಟಕ ವಿದ್ಯುತ್ ಕಂಪನಿಗೆ ಲಾಭ ಮಾಡಿಕೊಡಬಹುದಿತ್ತಲ್ಲವೇ? ಉದಾಹರಣೆಗೆ ಕರ್ನಾಟಕದಿಂದ ಖರೀದಿ ಮಾಡಿದ್ದರೆ ನಮ್ಮ ರಾಜ್ಯದ ಕಂಪನಿಗಳಲ್ಲಿ ಜಾಸ್ತಿ ಜನಕ್ಕೆ ಉದ್ಯೋಗ ಸಿಗುತ್ತಿತ್ತು. ಕರ್ನಾಟಕವನ್ನು ಬಿಟ್ಟು ಕೇರಳದಿಂದ ಏಕೆ ಖರೀದಿ ಮಾಡಿದ್ದೀರಿ ಎನ್ನುವುದು ನನ್ನ ಪ್ರಶ್ನೆ.

**ಶ್ರೀ ಕೆ.ಜೆ.ಜಾರ್ಜ್:-** ಮಾನ್ಯ ಸಭಾಪತಿಯವರೇ, ಕರ್ನಾಟಕದ ಕರ್ನಾಟಕ ವಿದ್ಯುತ್ ಕಂಪನಿಯು ನಮ್ಮದೇ Public Sector Industry. ಅಲ್ಲಿಯ ತನಕ ಅವರು ಸುಮಾರು ರೂ.15,000 ಗಳವರೆಗೂ manufacture ಮಾಡುತ್ತಿದ್ದರು. ಅವರಿಗೆ ಹಣದ ಕುಂದುಕೊರತೆ ಇತ್ತು. Working capital ಕಡಿಮೆ ಇತ್ತು. ನಾನು ಇಂಧನ ಸಚಿವನಾಗಿ ಬಂದಮೇಲೆ ಎಲ್ಲಾ ಎಸ್ಕಾಂನವರನ್ನು, ನಮ್ಮ ಇಲಾಖೆಯ Additional Chief Secretary ಮತ್ತು ನಾವೆಲ್ಲಾ ಕುಳಿತುಕೊಂಡು ಅವರಿಗೆ ಎಷ್ಟು ದುಡ್ಡು ಬೇಕು? ಅವರು ಎಷ್ಟು production ಮಾಡುವುದಕ್ಕೆ ಆಗುತ್ತದೆ. ಅವರು ಈಗ 30,000 ಯುನಿಟ್‌ಗಳನ್ನು ಉತ್ಪಾದನೆ ಮಾಡುತ್ತಿದ್ದಾರೆ.

**(ಮುಂದು)**

(242)9.3.2026/11.40/ಎಂ.ಎಂ-ಎ.ಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಜೆ. ಜಾರ್ಜ್ (ಮುಂದು):-**

ಸಂಪೂರ್ಣವಾದ capacity ಇರುವುದನ್ನು ಖರೀದಿ ಮಾಡುತ್ತಿದ್ದೇವೆ. 'ಹೆಸ್ಕಾಂ'ಗೆ ನಾವು ಆದೇಶ ಕೊಟ್ಟಿದ್ದು, ಸುಮಾರು 30,000 ಟ್ರಾನ್ಸ್‌ಫಾರ್ಮರ್‌ಗಳನ್ನು ಖರೀದಿ ಮಾಡುತ್ತಿದ್ದೇವೆ. ನಮಗೆ ಸುಮಾರು 50,000 ಟ್ರಾನ್ಸ್‌ಫಾರ್ಮರ್‌ಗಳು ಬೇಕಾಗಿತ್ತು. ಇದು ಹೊಸದಾಗಿ ಬಂದಿರುವುದಲ್ಲ. ಇದು ಹಳೆಯ ಕಾಲದಿಂದಲೂ ಸಹ K.E.L. (Kerala Electrical & Allied Engineering Company Ltd.) ಮತ್ತು ಕೇಂದ್ರ ಸರ್ಕಾರದಲ್ಲಿರುವ ಒಂದು ಸಂಸ್ಥೆಯಿಂದಲೂ ಸಹ ತೆಗೆದುಕೊಳ್ಳುತ್ತಿದ್ದೇವೆ. ಯಾವುದೇ public sector ಮಾಡಬೇಕಾದರೆ 4ಜಿ ವಿನಾಯಿತಿ ಪಡೆಯಲು ನಾವು ಆರ್ಥಿಕ ಇಲಾಖೆಗೆ ಪತ್ರ ಬರೆದು ಅವರಿಂದ ಅನುಮತಿ ಪಡೆದುಕೊಳ್ಳಬೇಕು. ಅವರು ಅನುಮತಿ ಕೊಟ್ಟಾಗ ಮಾತ್ರ ನಾವು 4ಜಿ ವಿನಾಯಿತಿ ಇಲ್ಲದೇ ಅಲ್ಲಿಂದ ತೆಗೆಯುವುದಕ್ಕಾಗುತ್ತದೆ. ನಮ್ಮ 'ಕವಿಕಾ'ಗೆ ಸಂಪೂರ್ಣವಾದ ಉತ್ಪಾದನೆಯನ್ನು ನಾವೇ ಮಾಡುತ್ತಿರುವ ಬಗ್ಗೆ ಹೇಳುತ್ತಿದ್ದು, ಅಕ್ರಮ-ಸಕ್ರಮ 2004ರಿಂದ ಬಂದ ಮೇಲೆ ಒಂದು ಟ್ರಾನ್ಸ್‌ಫಾರ್ಮರ್‌ಗೆ 2 ಅಥವಾ 3 I.P. Set

ಕೊಡಬಹುದು. ಈಗ ಅಕ್ರಮ-ಸಕ್ರಮ ಬಂದ ಮೇಲೆ hook ಹಾಕಿ ತೆಗೆಯುತ್ತಾರೆ. ಒಂದು ಟ್ರಾನ್ಸ್‌ಫಾರ್ಮರ್‌ಗೆ 10 ಬಂದರೆ ಆ ಟ್ರಾನ್ಸ್ಫಾರ್ಮರ್ ಸುಟ್ಟು ಹೋಗುತ್ತದೆ. ನಮಗಿರುವ ದೊಡ್ಡ ಕೆಲಸವೇನೆಂದರೆ ಅಕ್ರಮ-ಸಕ್ರಮದಿಂದ ಸುಡುವ ಟ್ರಾನ್ಸ್ಫಾರ್ಮರ್‌ಗಳನ್ನು ರಿಪೇರಿ ಮಾಡಲು ಸೆಂಟರ್‌ಗಳನ್ನು ಮಾಡುವುದು ಮತ್ತು ಬದಲಾವಣೆ ಮಾಡುವುದೇ ಕೆಲಸವಾಗಿದೆ. ಅದಕ್ಕೆ ಈಗಾಗಲೇ ಕ್ಯಾಬಿನೆಟ್‌ನಲ್ಲಿ ತೀರ್ಮಾನ ತೆಗೆದುಕೊಂಡು, ಅದಕ್ಕೆ ಒಂದು cut-off date ಕೊಟ್ಟಿದ್ದೇವೆ. ಸುಮಾರು 4.50 ಲಕ್ಷ ಪೆಂಡಿಂಗ್ ಇದ್ದುದನ್ನು ಮಾಡುವುದಕ್ಕೆ ಈಗ ಪ್ರಯತ್ನಗಳನ್ನು ಮಾಡಿ, ಸುಮಾರು 2.75 ಲಕ್ಷ ರೂಪಾಯಿಗಳನ್ನು 500 ಮೀಟರ್ ಒಳಗಡೆ ಇರುವುದಕ್ಕೆ ಕೊಟ್ಟಿದ್ದೇವೆ. ಈಗ ಸುಮಾರು 50 ರೂಪಾಯಿ ಕಟ್ಟಿದವರಿಗೂ ಸಹ ಕೊಡುತ್ತೇವೆ ಎಂದು ಹೇಳಿದ್ದೇವೆ. 4.50 ಲಕ್ಷದಲ್ಲಿ 50 ರೂಪಾಯಿಗಳನ್ನು ಕಟ್ಟಿದವರಿಗೂ ಸಹ ಸಕ್ರಮ ಮಾಡುತ್ತೇವೆ. ಆದರೆ ಸುಮಾರು 25,000 ರಿಂದ 30,000 ರೂಪಾಯಿಗಳನ್ನು ಕಟ್ಟಬೇಕಾಗುತ್ತದೆ. ಬೇರೆಯವರೆಲ್ಲಾ ಕಟ್ಟಿ ತೆಗೆದುಕೊಂಡಿದ್ದು, ಈಗ ಅಕ್ರಮ-ಸಕ್ರಮ ನಡೆಯುತ್ತಿರುವುದರಿಂದ ಇನ್ನೂ ಹೆಚ್ಚಾಗುತ್ತಿದೆ. ಅದಕ್ಕೆ ನಾನು ಎಲ್ಲರಿಗೂ ಮೂರು ತಿಂಗಳ ಒಳಗಡೆ ಅದನ್ನು ಸಕ್ರಮ ಮಾಡದಿದ್ದರೆ disconnect ಮಾಡಬೇಕಾಗುತ್ತದೆ ಎಂದು ಹೇಳಿದ್ದೇನೆ. ಬಹುಶಃ ಅದನ್ನು ಮಾಡದಿದ್ದರೆ ನಾವು ಇನ್ನು ನಾಲ್ಕು ಫ್ಯಾಕ್ಟರಿಗಳಿಗೆ ಟ್ರಾನ್ಸ್‌ಫಾರ್ಮರ್ ಅನ್ನು ಕೊಡಬೇಕಾಗಿದೆ. ಅವರು ಹೇಳಿದಂತೆ 4ಜಿ ವಿನಾಯಿತಿ ಕಂಟ್ರೋಲ್‌ಗೆ ಇನ್ನೂ ಹೆಚ್ಚಿನ ಬೇಡಿಕೆ ಬರಲಿಲ್ಲ.

**ಶ್ರೀ ಎನ್. ರವಿಕುಮಾರ್:-** ಆರ್ಥಿಕ ಇಲಾಖೆಯೇ ಹೇಳಿದೆ.

**ಶ್ರೀ ಕೆ.ಜೆ. ಜಾರ್ಜ್:-** ಮಾನ್ಯ ಸಭಾಪತಿಯವರೇ, ಆರ್ಥಿಕ ಇಲಾಖೆಯು ಅನುಮತಿ ಕೊಡದಿದ್ದರೆ ನಾವು ಖರೀದಿ ಮಾಡುವ ಹಾಗಿಲ್ಲ. 4ಜಿ ವಿನಾಯಿತಿ ಕೊಡಬೇಕಾಗಿರುವುದು ಎಫ್.ಡಿ. ಆಗಿದ್ದು, ಅವರು ಇನ್ನೂ ಕೊಡಲಿಲ್ಲ, ನೀವು ಹೇಳಿದ ಕಾರಣಕ್ಕೆ ಇರಬಹುದು. ಅದು ಬರದಿದ್ದರೆ ನಾವು 4ಜಿ ವಿನಾಯಿತಿ ಮಾಡುವುದಕ್ಕಾಗುವುದಿಲ್ಲ. 4ಜಿ ಮಾಡದಿದ್ದರೆ ಟೆಂಡರ್ ಕರೆದು ಕೊಡುತ್ತೇವೆ. ಸುಮಾರು ಟ್ರಾನ್ಸ್‌ಫಾರ್ಮರ್‌ಗಳನ್ನು ನಾವು ಟೆಂಡರ್‌ನಲ್ಲಿಯೇ ಖರೀದಿ ಮಾಡಿದ್ದೇವೆ. ಅವರು ಹೇಳಿದ ಹಾಗೆ ಇನ್ನೂ ಕಡಿಮೆ ಬೆಲೆಯಲ್ಲಿಯೇ ಸಿಗುವುದಾದರೆ ತೆಗೆದುಕೊಳ್ಳುವುದಕ್ಕೆ ನಾವು ತಯಾರಿದ್ದೇವೆ ಅದನ್ನು ಸಹ ನಾನು ಪರಿಶೀಲನೆ ಮಾಡಿ, 4ಜಿ ವಿನಾಯಿತಿಗೆ ದರ ಹೆಚ್ಚಾಗುತ್ತಿದ್ದರೆ ಟೆಂಡರ್ ಕರೆಯುವಂತಹ ಕ್ರಮವನ್ನು ಸಹ ನಾವು ತೆಗೆದುಕೊಳ್ಳುತ್ತೇವೆ. ಅವರು ಒಂದು ವಿಚಾರವನ್ನು ಹೇಳಿದ್ದು, ಕೇರಳದಿಂದ ತೆಗೆದುಕೊಳ್ಳುವುದನ್ನು ನಾನು ಬಂದ ಮೇಲೆ ಪ್ರಾರಂಭ ಮಾಡಿದ್ದಲ್ಲ. ಅದನ್ನು ಮೊದಲಿನಿಂದಲೂ ತೆಗೆದುಕೊಂಡು ಬಂದಿದ್ದಾರೆ, ಅವರ ಸರ್ಕಾರ ಇರುವಾಗಲೂ ತೆಗೆದುಕೊಂಡಿದ್ದಾರೆ. ನಮಗೆ ಟ್ರಾನ್ಸ್‌ಫಾರ್ಮರ್‌ಗಳು ಬೇಕಾದರೆ public sector ಗೆ ಆದ್ಯತೆ ಕೊಡುತ್ತೇವೆ. ಅದು ಕೇರಳ ಇರಬಹುದು ಅಥವಾ ಕೇಂದ್ರ ಸರ್ಕಾರ ಇರಬಹುದು ಆ ತರಹ ಮಾಡುತ್ತೇವೆ. ಮತ್ತೆ ನಾವು ಯಾವುದೇ ಖಾಸಗಿಯವರಿಂದ ತೆಗೆದುಕೊಳ್ಳಬೇಕಾದರೆ ಟೆಂಡರ್ ಕರೆದೇ ಕೊಡುತ್ತಿದ್ದೇವೆ. ಅದನ್ನು ಸಹ ನಮ್ಮ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇನೆ.

**ಶ್ರೀ ಎನ್. ರವಿಕುಮಾರ್ (ವಿರೋಧಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಅದು ಒಳ್ಳೆಯದು. ಇವರು public sector ನಿಂದಲೇ ಮಾಡಲಿ. ಕರ್ನಾಟಕ ರಾಜ್ಯದಲ್ಲಿ ಬಹಳ ಒಳ್ಳೆಯ ಗುಣಮಟ್ಟದ ಟ್ರಾನ್ಸ್‌ಫಾರ್ಮರ್‌ಗಳನ್ನು ಕ.ವಿ.ಕಾ ಮೊದಲಿನಿಂದಲೂ ಕೊಡುತ್ತಿದೆ. ಅವರು ಸಮಯ ಕೊಟ್ಟು ಇಷ್ಟು ಬೇಕು ಎಂದು ಮುಂಗಡವಾಗಿಯೇ ತಿಳಿಸಿ ನಮ್ಮ ರಾಜ್ಯಕ್ಕೆ ಲಾಭವಾಗುವ ಹಾಗೆ ಮಾಡಬಹುದೇ ಎಂದು ನನ್ನ ಒಂದು ಪ್ರಶ್ನೆ. ಎರಡನೇ ಪ್ರಶ್ನೆಯೇನೆಂದರೆ, ಉದಾಹರಣೆಗೆ ಹೇಳುತ್ತೇನೆ, ಆಗ ಬಿಟ್ಟು ಹೋಗಿತ್ತು. 63 ಕೆ.ವಿ.ಎ. ಟ್ರಾನ್ಸ್‌ಫಾರ್ಮರ್ ಕೇರಳದಲ್ಲಿ 1,86,875 ರೂಪಾಯಿಗಳಿದ್ದು, ಕರ್ನಾಟಕದಲ್ಲಿ 2,24,000 ರೂಪಾಯಿಗಳಿತ್ತು. ಕರ್ನಾಟಕದಲ್ಲಿ ಜಾಸ್ತಿ ಇರುವುದನ್ನು ನಾನು ಒಪ್ಪಿಕೊಂಡೆ. ಆದರೆ ರಾಜಸ್ಥಾನದಲ್ಲಿ ಕಡಿಮೆ ಇದೆ ಮತ್ತು ಒಡಿಸ್ಸಾದಲ್ಲಿ 85,000 ರೂಪಾಯಿಗಳಿಗಿಂತ ಇನ್ನೂ ಕಡಿಮೆ ಇದೆ.

**ಶ್ರೀ ಕೆ.ಜೆ. ಜಾರ್ಜ್:–** ಮಾನ್ಯ ಸಭಾಪತಿಯವರೇ, ಮಾನ್ಯ ರವಿಕುಮಾರ್‌ರವರು ಆ ತರಹದ ಪ್ರಶ್ನೆ ಕೇಳಿದ್ದರೆ ನಾನು ಉತ್ತರ ಕೊಡುತ್ತಿದ್ದೆ. ಆದರೆ ಅವರು ಕೇಳಿರುವ ಪ್ರಶ್ನೆಯಲ್ಲಿ ಅದಿಲ್ಲ. ಮಾನ್ಯ ರವಿಕುಮಾರ್‌ರವರು ಹಿರಿಯ ಸದಸ್ಯರಾಗಿದ್ದು, ಅವರು ಕೇಳಿದ ಪ್ರಶ್ನೆಯಲ್ಲಿ ಅದಿಲ್ಲ. ರಾಜಸ್ಥಾನದಲ್ಲಿ ಮತ್ತು ಮಹಾರಾಷ್ಟ್ರದಲ್ಲಿ ಎಷ್ಟಿದೆ? ಏತಕ್ಕೆ ತೆಗೆದುಕೊಳ್ಳಲಿಲ್ಲ ಎಂದು ಕೇಳಿದ್ದರೆ ನಾನು ಹೇಳುತ್ತಿದ್ದೆನು.

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಚಿವರೆ, ಟೆಂಡರ್ ಕರೆದಿದ್ದರೆ ಕಡಿಮೆ ಇರುವುದಕ್ಕೆ ಕೊಡಬಹುದಾಗಿತ್ತು.

**ಶ್ರೀ ಕೆ.ಜೆ. ಜಾರ್ಜ್:–** ಮಾನ್ಯ ಸಭಾಪತಿಯವರೇ, ನಾನು ಅದಕ್ಕೆ ಸರಿಯಾದ ಉತ್ತರವನ್ನು ಕೊಟ್ಟಿದ್ದೇನೆ. ಅವರ ಮೊದಲ ಪ್ರಶ್ನೆಯೇನೆಂದರೆ ‘ಕವಿಕಾ’ಗೆ ನೀವು ಸಾಮರ್ಥ್ಯಕ್ಕನುಸಾರವಾಗಿ;

**ಶ್ರೀ ಎನ್. ರವಿಕುಮಾರ್:–** ನಿರಂತರವಾಗಿ ಮೂರು ವರ್ಷದಿಂದ ಕೇರಳದಿಂದ ಖರೀದಿ ಮಾಡುತ್ತಿದ್ದಾರೆ.

**ಸಭಾಪತಿಯವರು:–** ಮಾನ್ಯ ರವಿಕುಮಾರ್‌ರವರೇ, ಮಾನ್ಯ ಸಚಿವರು ಉತ್ತರ ಹೇಳಲಿ.

**ಶ್ರೀ ಕೆ.ಜೆ. ಜಾರ್ಜ್:–** ನಾನು ಮಂತ್ರಿಯಾದ ಮೇಲೆ 15,000 ಟ್ರಾನ್ಸ್‌ಫಾರ್ಮರ್‌ಗಳ ಉತ್ಪಾದನೆ ಮಾಡುತ್ತಿದ್ದ ಕವಿಕಾ ಗರಿಷ್ಠ 30,000 ಟ್ರಾನ್ಸ್‌ಫಾರ್ಮರ್‌ಗಳನ್ನು ಉತ್ಪಾದನೆ ಮಾಡುತ್ತಿದ್ದು, ಸಂಪೂರ್ಣವಾಗಿ ಎಷ್ಟು ಉತ್ಪಾದನೆ ಮಾಡುತ್ತೇವೆಯೋ ಅದಕ್ಕೆ ನಾವು ಹಣಕಾಸಿನ ಸೌಕರ್ಯ ಕೊಟ್ಟು ತೆಗೆದುಕೊಳ್ಳುತ್ತಿದ್ದೇವೆ. ನಮಗೆ ಒಂದು ವರ್ಷಕ್ಕೆ 50,000 ಟ್ರಾನ್ಸ್‌ಫಾರ್ಮರ್‌ಗಳು ಬೇಕು. ಉಳಿದ 20,000 ಟ್ರಾನ್ಸ್‌ಫಾರ್ಮರ್‌ಗಳನ್ನು ನಾವು ತೆಗೆದುಕೊಳ್ಳಬೇಕಲ್ಲವೇ.

**ಶ್ರೀ ಎನ್. ರವಿಕುಮಾರ್:–** ಅಂದರೆ ಕವಿಕ ಗೆ ಆ ಸಾಮರ್ಥ್ಯವಿಲ್ಲವೇ?

**ಶ್ರೀ ಕೆ.ಜೆ. ಜಾರ್ಜ್:–** ಉತ್ಪಾದನಾ ಕೆಪಾಸಿಟಿಯನ್ನು 15,000 ದಿಂದ 30,000ಕ್ಕೆ ಮಾಡಿ, ಅವುಗಳನ್ನು ಸಂಪೂರ್ಣವಾಗಿ ತೆಗೆದುಕೊಳ್ಳುತ್ತಿದ್ದೇವೆ. ನಾನು ಹೇಳುವುದೇನೆಂದರೆ, ಅಕ್ರಮ–ಸಕ್ರಮ ನಿಂತರೆ ಒಂದು ಟ್ರಾನ್ಸ್‌ಫಾರ್ಮರ್‌ನ life 20–25 ವರ್ಷ ಇರಬೇಕು. ನಮ್ಮಲ್ಲಿ overload ಮಾಡುವುದರಿಂದ, ಅಕ್ರಮ–ಸಕ್ರಮ

ಎಂಬುದು ಗೊತ್ತಾಗಿ overload ಮಾಡಿದಾಗ ಎಲ್ಲವೂ ಸುಟ್ಟು ಹೋಗುತ್ತಿದೆ. ಅದನ್ನು ನಿಲ್ಲಿಸಿದರೆ ಮಾತ್ರ ಬಹುಶಃ ಕಡಿಮೆ ಟ್ರಾನ್ಸ್‌ಫಾರ್ಮರ್‌ಗಳು ಸಾಕು. ಕವಿಕಾ ಎಷ್ಟು ಉತ್ಪಾದನೆ ಮಾಡುತ್ತದೆಯೋ ಅಷ್ಟು ಸಾಕಾಗುತ್ತದೆ. ಈ ಅಕ್ರಮ-ಸಕ್ರಮದಲ್ಲಿ ಟ್ರಾನ್ಸ್‌ಫಾರ್ಮರ್ ಸುಟ್ಟು ಹೋಗುತ್ತಿರುವುದರಿಂದ ಇವತ್ತು ಜಾಸ್ತಿ ಬೇಕಾಗಿದೆ. ಅದಕ್ಕೆ ಸಹ ಕ್ರಮ ತೆಗೆದುಕೊಂಡಿದ್ದೇವೆ. ಅವರು ಬೇರೆ ಕಡೆ ಕಡಿಮೆ ಬೆಲೆ ಇದೆಯೆಂದು ಹೇಳುತ್ತಿದ್ದು, ನಾವು ಈಗ ಬೇರೆ ಕಡೆಯಿಂದಲೂ ಟೆಂಡರ್ ಕರೆದಿದ್ದೇವೆ. ರಾಜಸ್ಥಾನ ಅಥವಾ ಬೇರೆ ರಾಜ್ಯದಲ್ಲಿ ಕಡಿಮೆ ಇದ್ದರೆ ಅವರ ಹತ್ತಿರ ತೆಗೆದುಕೊಳ್ಳುತ್ತಿದ್ದೆವು. ನಾವು ತೆರೆದ ಟೆಂಡರ್ ಸಹ ಕರೆದಿದ್ದೇವೆ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಚಿವರೆ, ಕರೆದಿಲ್ಲ.

**ಶ್ರೀ ಕೆ.ಜೆ. ಜಾರ್ಜ್:-** ಕರೆದಿದ್ದೇವೆ, ಖಾಸಗಿಯವರಿಗೂ ಸಹ ಕೊಟ್ಟಿದ್ದೇವೆ. ಆದ್ದರಿಂದ ನೀವು ಆ ಪ್ರಶ್ನೆ ಕೇಳಿದ್ದರೆ ನಾನು ಸಂಪೂರ್ಣವಾಗಿ ಉತ್ತರ ಕೊಡುತ್ತಿದ್ದೆ. ಇನ್ನೊಂದು ಪ್ರಶ್ನೆ ಕೇಳಿದ್ದೀರಿ ಅದಕ್ಕೆ ಸಂಪೂರ್ಣವಾಗಿ ಉತ್ತರ ಕೊಟ್ಟಿದ್ದೇನೆ.

**ಪ್ರಶ್ನೆ ಸಂಖ್ಯೆ: 624**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಕೆ. ವಿವೇಕಾನಂದ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಉತ್ತರ ನೀಡಿದ್ದಾರೆ, ಧನ್ಯವಾದಗಳು. ಪದವಿಪೂರ್ವ ಶಿಕ್ಷಣ ಸಿ.ಬಿ.ಎಸ್.ಇ ನಿಯಮಾವಳಿ ಅಳವಡಿಸಿಕೊಂಡಿರುವ, ಆದರೆ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಉಪನ್ಯಾಸಕರ ಸಂಖ್ಯೆ ಇಂತಿಷ್ಟೇ ಇರಬೇಕೆಂಬ ಸಿ.ಬಿ.ಎಸ್.ಇ ಮಾದರಿ ನಿಯಮವನ್ನು ಪಾಲಿಸುವುದು ಎಷ್ಟು ಸರಿ? ಅಲ್ಲದೇ ಈ ಬಾರಿ ಎಸ್.ಎಸ್.ಎಲ್.ಸಿ. ಪರೀಕ್ಷೆ ಫಲಿತಾಂಶ ಇಲಾಖೆ ಮತ್ತು ಶಿಕ್ಷಕರ ಶ್ರಮದಿಂದ ಉತ್ತಮ ರೀತಿಯಲ್ಲಿ ಬರುವುದಕ್ಕೆ ಸಾಧ್ಯವಾಗಿದೆ. ಇದರಿಂದ 2026–27ನೇ ಸಾಲಿನ ಪ್ರಥಮ ಪಿ.ಯು.ಸಿ.ಗೆ ಹೆಚ್ಚಿನ ವಿದ್ಯಾರ್ಥಿಗಳು ದಾಖಲಾತಿಯಾಗುತ್ತಿರುವುದರಿಂದ ಹೆಚ್ಚುವರಿ ವರ್ಗಾವಣೆ ಪ್ರಕ್ರಿಯೆಯನ್ನು ದಾಖಲಾತಿ ಪೂರ್ಣಗೊಳಿಸಿದ ನಂತರ ಕೈಗೊಳ್ಳಬೇಕು ಎಂದು ಮಾನ್ಯ ಸಚಿವರಲ್ಲಿ ಆಗ್ರಹಿಸುತ್ತೇನೆ.

**ಶ್ರೀ ಎಸ್. ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):–** ಮಾನ್ಯ ಸಭಾಪತಿಯವರೇ, ಉತ್ತರವನ್ನು ಕೊಟ್ಟಿದ್ದೇನೆ. ಸಿ.ಬಿ.ಎಸ್.ಇ. ತರಹ ನಾವು ಮಾಡುವುದಕ್ಕಾಗುವುದಿಲ್ಲ. ಯಾವಾಗಲೂ every two years ಗೆ ಹೆಚ್ಚುವರಿ ಮಾಡುವಂಥದ್ದು ಕೂಡ ನಿಯಮಗಳಲ್ಲಿದೆ. ಈ ವರ್ಷ ನಾವು ಕಡ್ಡಾಯವಾಗಿ ಮಾಡಲೇಬೇಕಾಗುತ್ತದೆ. ಹೆಚ್ಚುವರಿಯನ್ನು ಸಂಖ್ಯೆಯನ್ನು ಕಡಿಮೆ ಮಾಡಿ ಅದರ ಮೇಲೆ ಇನ್ನೂ ಹೆಚ್ಚು ಮಾಡಿ ಎಂದು ಹೇಳುತ್ತಿದ್ದಾರೆ, ಈಗ ಸದ್ಯಕ್ಕೆ ನಾವು workload ಶೂನ್ಯವಿರುವ ಕಡೆ ಹೆಚ್ಚುವರಿಯಾಗಿ ಪರಿಗಣಿಸಿ ಅವರಿಗೆ ಮಾತ್ರ ನಾವು ಮಾಡುತ್ತಿದ್ದೇವೆ. ಕಳೆದ ಬಾರಿ 40 ಶಿಕ್ಷಕರಿದ್ದು ಈ ಬಾರಿ ಸುಮಾರು 100ಕ್ಕೂ ಹೆಚ್ಚು ಶಿಕ್ಷಕರು ಆಗುತ್ತಾರೆ. ಸದ್ಯಕ್ಕೆ ನಂಬರ್ ಅನ್ನು ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ ಸಿ.ಬಿ.ಎಸ್.ಇ. ಯವರ ನಿಯಮಗಳು ಬೇರೆ ಇದ್ದು, ನಮ್ಮ ನಿಯಮಗಳೇ ಬೇರೆ ಇರುತ್ತದೆ. ಹೊಸ ನಿಯಮಗಳು ಬಂದ ಮೇಲೆ ಎರಡನೇ ಬಾರಿ rationalize ಮಾಡುತ್ತಿರುವುದು. ಎಸ್.ಎಸ್.ಎಲ್.ಸಿ. ಯಲ್ಲಿ ಬದಲಾವಣೆಯಾಗಿದ್ದು, ಕೆಲವು ನಿಯಮಗಳನ್ನು ಬದಲಾವಣೆ ಮಾಡಿದ್ದೇವೆ. ಈಗ ನೇಮಕಾತಿ ನಡೆಯುತ್ತಿದ್ದು, ಪಿ.ಯು.ಸಿ.ಗೆ ಉಪನ್ಯಾಸಕರ ನೇಮಕಾತಿ ಮುಗಿದ ನಂತರ ಮುಂದೆ ಯೋಚನೆ ಮಾಡುತ್ತೇವೆ. ಸದ್ಯಕ್ಕೆ ಶೂನ್ಯ ಇರುವಾಗ ಮಕ್ಕಳೇ ಇಲ್ಲವೆಂದರೆ ಶಿಕ್ಷಕರನ್ನು ಅಲ್ಲಿಗೆ ಕೊಡುವುದಕ್ಕಾಗುವುದಿಲ್ಲ. ಆದರೆ ಶಿಕ್ಷಣಕ್ಕೆ ಯಾವುದೇ ರೀತಿಯ ಕೊರತೆಯಾಗದೇ ಇರುವಂತಹ ರೀತಿಯಲ್ಲಿ ಮಕ್ಕಳಿಗೆ ಪಾಠ ಹೇಳಿಕೊಡುವಂತಹ ವ್ಯವಸ್ಥೆಯನ್ನು ಹದ್ದುಬಸ್ತಿನಲ್ಲಿಟ್ಟು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ. ಈಗ ನಾವು ಶೂನ್ಯವಿರುವಲ್ಲಿ ಮಾತ್ರ disturb ಮಾಡುತ್ತಿದ್ದೇವೆ. ಬೇರೆಯವರಿಗೆ ಯಾವುದೇ ಕಾರಣಕ್ಕೂ ನಾವು disturb ಮಾಡುವುದಿಲ್ಲ.

**ಶ್ರೀ ಕೆ.ವಿವೇಕಾನಂದ:–** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಒಟ್ಟಾರೆ 1,317 ಪಿ.ಯು. ಕಾಲೇಜುಗಳಿದ್ದು, ಅಲ್ಲಿ ಒಟ್ಟಾರೆ 12,918 ಶಿಕ್ಷಕರಿದ್ದಾರೆ. ನೇಮಕಾತಿ ಮಾಡಿಕೊಂಡಿರುವ 7,711 ಕಾಲೇಜುಗಳಲ್ಲಿ ಶಿಕ್ಷಕರಿದ್ದಾರೆ. ಖಾಲಿ

ಹುದ್ದೆಗಳು 5200 ಇವೆ. ಸಿ.ಬಿ.ಎಸ್.ಇ, ಮತ್ತು ಐ.ಸಿ.ಎಸ್.ಇ. ಯಲ್ಲಿ 45 ವಿದ್ಯಾರ್ಥಿಗಳಿಗೆ ಒಬ್ಬರು ಶಿಕ್ಷಕರನ್ನು ತೆಗೆದುಕೊಳ್ಳುತ್ತಾರೆ. ನಮ್ಮಲ್ಲಿ ವಿಜ್ಞಾನಕ್ಕೆ 150 ವಿದ್ಯಾರ್ಥಿಗಳಿಗೆ ಒಬ್ಬರು ಶಿಕ್ಷಕರು, 321 ವಿದ್ಯಾರ್ಥಿಗಳಿಗೆ ಒಬ್ಬರು ಶಿಕ್ಷಕರನ್ನು ಕರೆದಿದ್ದಾರೆ.

(ಮುಂದು)

(243) 09-03-2026 11-50 KH/AK (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ವಿವೇಕಾನಂದ (ಮುಂದು):-**

ಹಾಗಾಗಿ ಈಗ 320 ವಿದ್ಯಾರ್ಥಿಗಳಿಗೆ ಒಬ್ಬರು ಶಿಕ್ಷಕರನ್ನು ತೆಗೆದುಕೊಂಡರೆ ಗುಣಮಟ್ಟದ ಶಿಕ್ಷಣವನ್ನು ಕೊಡುವುದಕ್ಕೆ ಆಗುವುದಿಲ್ಲ. 45 ಜನರಿಗೆ ಒಬ್ಬರು ಶಿಕ್ಷಕರನ್ನು ತೆಗೆದುಕೊಳ್ಳುತ್ತಾರೆ. ತಾವು 321 ವಿದ್ಯಾರ್ಥಿಗಳಿಗೆ ಒಬ್ಬರು ಶಿಕ್ಷಕರನ್ನು ತೆಗೆದುಕೊಂಡರೆ ಅಷ್ಟು ಜನರನ್ನು ಹೇಗೆ ಕವರ್ ಮಾಡುವುದಕ್ಕೆ ಆಗುತ್ತದೆ. ದಯಮಾಡಿ ಕಡಿಮೆ ಮಾಡಿ. ಈಗ ರಾಜ್ಯದಲ್ಲಿ ಹೆಚ್ಚುವರಿಯಾಗಿ 180 ಜನ ಉಪನ್ಯಾಸಕರ ಹುದ್ದೆಗಳು ಖಾಲಿ ಇದೆ.

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಕೆ.ವಿವೇಕಾನಂದರವರೇ, ಪ್ರಶ್ನೆಯನ್ನು ಕೇಳಿ.

**ಶ್ರೀ ಕೆ.ವಿವೇಕಾನಂದ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಹಾಗಾಗಿ ಕಡಿಮೆ ಮಾಡಿಕೊಡಿ ಎಂದು ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಉತ್ತರವನ್ನು ಹೇಳಿ.

**ಶ್ರೀ ಎಸ್. ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):-** ಮಾನ್ಯ ಸಭಾಪತಿಯವರೇ, ಕಡಿಮೆ ಮಾಡುವ ಬಗ್ಗೆ ಸದ್ಯಕ್ಕೆ ಪ್ರಸ್ತಾವನೆ ನಮ್ಮ ಹತ್ತಿರ ಇಲ್ಲ. ಕಡಿಮೆ ಮಾಡುವ ಬಗ್ಗೆ ಯೋಚನೆ ಮಾಡೋಣ. ಆದರೆ, ಅವರ ಕಲಿಕೆಗೆ ಯಾವುದೇ ತೊಂದರೆಯಾಗುವುದಿಲ್ಲ. Workload ಮೇಲೆ ಅವರಿಗೆ teaching ಸಮಯವನ್ನು ಸಂಪೂರ್ಣವಾಗಿ ಕೊಡುತ್ತಿದ್ದೇವೆ.

**ಶ್ರೀ ಕೆ.ವಿವೇಕಾನಂದ:-** ಮಾನ್ಯ ಸಭಾಪತಿವರೇ, ಒಬ್ಬರು ಶಿಕ್ಷಕರು 321 ವಿದ್ಯಾರ್ಥಿಗಳನ್ನು ಹೇಗೆ ಕವರ್ ಮಾಡುವುದಕ್ಕೆ ಆಗುತ್ತದೆ.

**ಶ್ರೀ ಎಸ್. ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೇ, ಸೆಕ್ಷನ್‌ಗಳು ಇರುತ್ತವೆ. Workload ಬೇರೆ.

**ಶ್ರೀ ಕೆ.ವಿವೇಕಾನಂದ:–** ಮಾನ್ಯ ಸಚಿವರೇ, ಇರಲಿ. ಈಗ ಸಿ.ಬಿ.ಎಸ್.ಇ., ಐ.ಸಿ.ಎಸ್.ಇ. ಮಕ್ಕಳು ಎಷ್ಟು ಮುಂದಕ್ಕೆ ಹಾಕುತ್ತಾರೆ. 45 ಜನರಿಗೆ ಒಬ್ಬರು ಶಿಕ್ಷಕರನ್ನು ನೇಮಿಸಿದರೆ ಹೇಗೆ? ನಮ್ಮಲ್ಲಿರುವ ಸರ್ಕಾರಿ ಶಾಲೆಯ ಮಕ್ಕಳು ಬರುವುದೇ ಕಷ್ಟವಾಗುತ್ತದೆ. ದಯಮಾಡಿ ಸ್ವಲ್ಪ ಕಡಿಮೆ ಮಾಡಿಕೊಡಿ.

**ಶ್ರೀ ಎಸ್. ಮಧು ಬಂಗಾರಪ್ಪ:–** ಮಾನ್ಯ ಸಭಾಪತಿಯವರೇ, ಕಡಿಮೆ ಮಾಡೋಣ. ಇವರು 300 ಜನರಿಗೂ ಒಟ್ಟಿಗೆ ಪಾಠವನ್ನು ಹೇಳಿಕೊಡುವುದಿಲ್ಲ. ಅವರಿಗೆ ಬೇರೆ ಬೇರೆ ಸೆಕ್ಷನ್‌ಗಳು ಮತ್ತು ವರ್ಕ್‌ಲೋಡ್‌ಗಳು ಇರುತ್ತವೆ.

**ಶ್ರೀ ಕೆ.ವಿವೇಕಾನಂದ:–** ಮಾನ್ಯ ಸಭಾಪತಿಯವರೇ, ಅಲ್ಲಿಯೂ ವರ್ಕ್‌ಲೋಡ್ ಇರುತ್ತದೆಯಲ್ಲವೇ? ಅಲ್ಲಿಯೂ ಒಟ್ಟಿಗೆ ಮಾಡುವುದಿಲ್ಲ.

**ಶ್ರೀ ಎಸ್. ಮಧು ಬಂಗಾರಪ್ಪ:–** ಮಾನ್ಯ ಸಭಾಪತಿಯವರೇ, ಕಡಿಮೆ ಮಾಡುವಂತಹದ್ದು ಈಗ ಸದ್ಯಕ್ಕೆ ಇಲ್ಲ.

**ಸಭಾಪತಿಯವರು:–** ಮಾನ್ಯ ಸಚಿವರೇ, ಪರಿಶೀಲನೆ ಮಾಡಿ, ಚರ್ಚೆ ಮಾಡಿ ತೀರ್ಮಾನ ಮಾಡಿ.

**ಶ್ರೀ ಎಸ್. ಮಧು ಬಂಗಾರಪ್ಪ:–** ಮಾನ್ಯ ಸಭಾಪತಿಯವರೇ, ಪರಿಶೀಲನೆ ಮಾಡೋಣ. ಆಮೇಲೆ recruitment ಆದ ಮೇಲೆ...

**ಶ್ರೀ ಕೆ.ವಿವೇಕಾನಂದ:–** ಮಾನ್ಯ ಸಭಾಪತಿಯವರೇ, ನಾನು ಮತ್ತು ಮಾನ್ಯ ಸದಸ್ಯರಾದ ಪುಟ್ಟಣ್ಣನವರು . . .

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಕೆ.ವಿವೇಕಾನಂದರವರೇ, ಸಾಕು ಬಿಡಪ್ಪ.

**ಶ್ರೀ ಕೆ.ವಿವೇಕಾನಂದ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಮಗೆ ಅವಕಾಶ ಸಿಗುವುದೇ . . .

**ಸಭಾಪತಿಯವರು:–** ಇದು ಪ್ರಶ್ನೋತ್ತರ ಅವಧಿ. ಆಯಿತು. ಮಾನ್ಯ ಸಚಿವರಿಗೆ ಈಗಾಗಲೇ ಹೇಳಿದ್ದೇನೆ. ಪರಿಶೀಲನೆ ಮಾಡಿ ತಮ್ಮನ್ನು ಕರೆದು ಮಾತನಾಡುತ್ತಾರೆ.

**ಶ್ರೀ ಕೆ.ವಿವೇಕಾನಂದ:–** ಮಾನ್ಯ ಸಚಿವರೇ, ದಯಮಾಡಿ, ಮಾನ್ಯ ಸದಸ್ಯರಾದ ಪುಟ್ಟಣ್ಣನವರು, ನಾನು ಮತ್ತು ಮಾನ್ಯ ಸದಸ್ಯರಾದ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್) ರವರು, ಮಾನ್ಯ ಸದಸ್ಯರಾದ ಎಸ್.

ಎಲ್.ಭೋಜೇಗೌಡರವರು ಎಲ್ಲರೂ ಮನವಿ ಕೊಟ್ಟಿದ್ದೇವೆ. ಇದನ್ನು ಪರಿಗಣಿಸಿ, ಕಡಿಮೆ ಮಾಡಿಕೊಡಿ ಎಂದು ನಾನು ಮನವಿ ಮಾಡುತ್ತೇನೆ.

**ಶ್ರೀ ಎಸ್. ಮಧು ಬಂಗಾರಪ್ಪ:–** ಮಾನ್ಯ ಸಭಾಪತಿಯವರೇ, Practical ಆಗಿ ಏನು ತೊಂದರೆ ಇದೆಯೋ, ಇದರ ಬಗ್ಗೆ ಮಾನ್ಯ ಸದಸ್ಯರ ಜೊತೆಗೆ ಕುಳಿತುಕೊಂಡು ಚರ್ಚೆ ಕೂಡ ಮಾಡುತ್ತೇವೆ. ನೇಮಕಾತಿ ಆದ ಮೇಲೆ ಇದನ್ನು ಸಡಿಲ ಮಾಡುವುದಕ್ಕೆ ತಮ್ಮ ಜೊತೆ ಚರ್ಚೆ ಮಾಡಿ ಮುಂದೆ ಮಾಡುವಂತಹದ್ದರ ಬಗ್ಗೆ ಪರಿಶೀಲನೆ ಮಾಡುತ್ತೇವೆ.

**ಶ್ರೀ ಕೆ.ವಿವೇಕಾನಂದ:–** ಮಾನ್ಯ ಸಚಿವರೇ, ಧನ್ಯವಾದಗಳು.

**ಪ್ರಶ್ನೆ ಸಂಖ್ಯೆ: 605**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. 'ಗ್ರಂಥಾಲಯಗಳಲ್ಲಿ ಕೈ ರಸೀದಿ ಆಧಾರದ ಮೇಲೆ ಕೆಲಸಗಳನ್ನು ಮಾಡುತ್ತಿರುವ ಸಿಬ್ಬಂದಿಗಳಿಗೆ ನೀಡಲಾಗುತ್ತಿರುವ ವೇತನ ಎಷ್ಟು; ಹಾಗೂ ನೀಡಲಾಗಿರುವ ಸೌಲಭ್ಯಗಳೇನು' ಎನ್ನುವ ಪ್ರಶ್ನೆಯನ್ನು ಮಾನ್ಯ ಸಚಿವರಲ್ಲಿ ಕೇಳಿದ್ದೇನೆ. ಇದಕ್ಕೆ ಮಾನ್ಯ ಸಚಿವರು ಕೈ ರಸೀದಿ ಆಧಾರದ ಮೇಲೆ ಕೆಲಸ ಮಾಡುತ್ತಿರುವವರಿಗೆ ಇಲಾಖೆಯಿಂದ ಯಾವುದೇ ಕೆಲಸದ ಅವಧಿಯನ್ನು ನಿಗದಿಪಡಿಸಿರುವುದಿಲ್ಲ ಎಂದು ಉತ್ತರವನ್ನು ನೀಡಿದ್ದಾರೆ. ಹಾಗಾದರೆ ಅವಧಿ ನಿಗದಿಪಡಿಸದೇ ಹೇಗೆ ಕೆಲಸ ಮಾಡುತ್ತಾರೆ ಎನ್ನುವುದು ನನಗೆ ಅನುಮಾನ ಇದೆ. ಎರಡನೇ ಉಪ ಪ್ರಶ್ನೆ ಏನೇಂದರೆ, ಕೈ ರಸೀದಿ ಆಧಾರದ ನೌಕರರಿಗೆ ಕನಿಷ್ಟ ವೇತನ ನೀಡಬೇಕೆಂದು ಸರ್ಕಾರದ ಆದೇಶವಿದೆಯೇ; ಇದ್ದಲ್ಲಿ ಇವರಿಗೆ ಕನಿಷ್ಟ ವೇತನ ನೀಡಲಾಗುತ್ತಿದೆಯೇ? ಎಂದು ಪ್ರಶ್ನೆಯನ್ನು ಕೇಳಿದ್ದೇನೆ. ಮಾನ್ಯ ಸಚಿವರು ಕೈ ರಸೀದಿ ಆಧಾರದ ಮೇಲಿನ ನೌಕರರಿಗೆ ಕನಿಷ್ಟ ವೇತನ ನೀಡಬೇಕೆನ್ನುವ ಬಗ್ಗೆ ಸರ್ಕಾರದ ಯಾವುದೇ ಆದೇಶ ಇಲ್ಲ ಎಂದು ಹೇಳಿದ್ದಾರೆ. ಇದರ ಬಗ್ಗೆ ಸ್ಪಷ್ಟವಾಗಿ ಸರ್ಕಾರದ ಆದೇಶಗಳು ಇವೆ. ಯಾವುದೇ ಒಬ್ಬ ನೌಕರ ಕೆಲಸ ಮಾಡಿದರೆ ಕನಿಷ್ಟ ವೇತನ ಕೊಡಬೇಕೆಂದು ಇದೆ. ಹಾಗಾಗಿ, ನನಗೆ ಈ ಎರಡು ಪ್ರಶ್ನೆಗಳ ಮೇಲೆ ಸ್ವಲ್ಪ ಗೊಂದಲ ಇದೆ. ಟೈಮ್ ಟೇಬಲ್ ಇಲ್ಲದೇ ಅವರು ಹೇಗೆ ಕೆಲಸ ಮಾಡುತ್ತಾರೆ. ಅವರು ಕೆಲಸ ಮಾಡಿದ ಮೇಲೆ ವೇತನ ಇಲ್ಲ ಎಂದರೆ ಹೇಗೆ? 1984 ರ ಮುಂಚೆ ಗ್ರಂಥಾಲಯಗಳಲ್ಲಿ ಕೆಲಸ ಮಾಡುವವರನ್ನು ಖಾಯಂ ಮಾಡಿದ್ದಾರೆ. 1984 ರಿಂದ 1996 ರವರೆಗೂ ಯಾರು ಕೆಲಸ ಮಾಡಿದ್ದಾರೋ, ಅವರಲ್ಲಿ ಕೆಲವರನ್ನು ಖಾಯಂ ಮಾಡಿದ್ದಾರೆ, ಕೆಲವರಿಗೆ ಮಾಸಿಕ ವೇತನ ಕೊಡುತ್ತಿದ್ದಾರೆ. 1997ರ ನಂತರ ಯಾರೆಲ್ಲಾ ನೇಮಕಾತಿ ಆಗಿದ್ದಾರೆ, ಅವರಿಗೆ ಏನು ಮಾಡಿದ್ದಾರೆ ಎಂದರೆ, ಅವರಿಗೆ ಕನಿಷ್ಟ ವೇತನವನ್ನು ಕೊಡಲಿಲ್ಲ ಮತ್ತು ಖಾಯಂ ಮಾಡಲಿಲ್ಲ ಎಂದು ಇವರು ಕಾರ್ಮಿಕ ಇಲಾಖೆಯ ನ್ಯಾಯಾಲಯಕ್ಕೆ ಹೋಗಿದ್ದಾರೆ. ಅವರಿಗೆ ಕಡ್ಡಾಯವಾಗಿ ಕನಿಷ್ಟ ವೇತನ ಕೊಡಬೇಕೆಂದು ನ್ಯಾಯಾಲಯ ಆದೇಶ ಮಾಡಿದೆ. ನ್ಯಾಯಾಲಯದಿಂದ ಆದೇಶ ಬಂದ ಮೇಲೆ ಕೆಲವು ಜಿಲ್ಲೆಗಳಲ್ಲಿ ಕೆಲವರಿಗೆ ಕನಿಷ್ಟ ವೇತನವನ್ನು ನಿಗದಿ ಮಾಡಿದ್ದಾರೆ. ಆದರೆ, ಇನ್ನು ಅರ್ಧ ಜಿಲ್ಲೆಗಳಲ್ಲಿ . . . ನನ್ನ ಹತ್ತಿರ ನ್ಯಾಯಾಲಯ ಆದೇಶ ಕೂಡ ಇದೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಆದೇಶ . . . ನ್ಯಾಯಾಲಯದಿಂದ ಆದೇಶ ಬಂದ ಮೇಲೆ ಅವರಿಗೆ ಕನಿಷ್ಟ ವೇತನ ಕೊಡುತ್ತಿದ್ದಾರೆ. ಕೆಲವು ಜಿಲ್ಲೆಗಳಲ್ಲಿ ಕನಿಷ್ಟ ವೇತನ ಕೊಡುತ್ತಿಲ್ಲ. ಗ್ರಂಥಾಲಯಗಳಲ್ಲಿ 1,183 ಜನರು ಕೆಲಸ ನಿರ್ವಹಿಸುತ್ತಿದ್ದಾರೆ. ನನ್ನ ಪ್ರಶ್ನೆಯೇನೆಂದರೆ, ಕನಿಷ್ಟ ಪಕ್ಷ ಅವರನ್ನು

ಖಾಯಂ ಮಾಡಿ. ಈಗ ಹುದ್ದೆಗಳು ಖಾಲಿ ಇವೆ. ಇಲ್ಲದಿದ್ದರೆ, ನ್ಯಾಯಾಲಯದ ಆದೇಶದಂತೆ ಕನಿಷ್ಠ ವೇತನವನ್ನಾದರೂ ಕೊಡಬೇಕೆಂದು ನನ್ನ ಮನವಿಯಾಗಿದೆ.

**ಶ್ರೀ ಎಸ್. ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):–** ಮಾನ್ಯ ಸಭಾಪತಿಯವರೇ, ಗ್ರಂಥಾಲಯಗಳಲ್ಲಿ ಶುಚಿಗಾರರು ಏನಿದ್ದಾರೆ? ಅವರಿಗೆ 8 ತಾಸು ಕೆಲಸ ಪೂರ್ಣ ಪ್ರಮಾಣದಲ್ಲಿ ಇರುವುದಿಲ್ಲ ಎನ್ನುವ ಮಾತನ್ನು ಮಾನ್ಯ ಸದಸ್ಯರಲ್ಲಿ ಮನವಿ ಮಾಡುತ್ತೇನೆ. ಇವರನ್ನು ಖಾಯಂ ಆಗಿ ತೆಗೆದುಕೊಳ್ಳುವುದಕ್ಕೆ ನ್ಯಾಯಾಲಯದ ಆದೇಶ ಏನಿದೆ, ಅದನ್ನು ಪರಿಶೀಲನೆ ಮಾಡಬಹುದು. ಆದರೆ, ಕನಿಷ್ಠ ವೇತನವನ್ನು ಕೊಡುವಂತಹದ್ದು ಇಲ್ಲ. ಅವರು ಕೂಡ ಸುಮಾರು ಬಾರಿ ನಮ್ಮ ಹತ್ತಿರ ಕೆಲವರು ಅಸೋಸಿಯೇಷನ್ ಮೂಲಕ ಬಂದಿದ್ದಾರೆ. ಹೊರಗುತ್ತಿಗೆ ರೀತಿಯಲ್ಲಿಯೇ ಆ ಗ್ರಂಥಾಲಯದವರೇ ಅವರನ್ನು ತೆಗೆದುಕೊಳ್ಳುತ್ತಾರೆ. ನಾವು ನೇರವಾಗಿ ಯಾವುದೇ ಕಾರಣಕ್ಕೂ ಇಲಾಖೆಯಿಂದ ತಾವು ಇಂತಹವರನ್ನೇ ತೆಗೆದುಕೊಳ್ಳಬೇಕೆಂದು ಹೇಳುವುದಿಲ್ಲ.

**ಸಭಾಪತಿಯವರು:–** ಮಾನ್ಯ ಸಚಿವರೇ, ಅವರಿಗೆ ಸಂಬಳ ಬಹಳ ಕಡಿಮೆ ಇದೆ.

**ಶ್ರೀ ಎಸ್. ಮಧು ಬಂಗಾರಪ್ಪ:–** ಮಾನ್ಯ ಸಭಾಪತಿಯವರೇ, ಹೌದು. ಅದೇನೆಂದರೆ, ಅಲ್ಲಿ ಎಷ್ಟು revenue ಬರುತ್ತಿತ್ತು. ಅದನ್ನು ನೋಡಿಕೊಂಡು ಅಲ್ಲಿಯೇ ಕಾರ್ಯನಿರ್ವಹಿಸುತ್ತಿದ್ದಾರೆ. ಇದರ ಬಗ್ಗೆ ದೊಡ್ಡ ಮಟ್ಟದಲ್ಲಿಯೇ ಚರ್ಚೆ ಮಾಡಬೇಕಾಗುತ್ತದೆ. ಅದನ್ನು ನೋಡಿಕೊಂಡು ಮಾಡುತ್ತೇನೆ. ಮಾನ್ಯ ಸದಸ್ಯರು ನ್ಯಾಯಾಲಯದ ಆದೇಶದ ಬಗ್ಗೆ ಹೇಳಿದ್ದಾರೆ. ಅದನ್ನು ಮುಂದಿನ ದಿನಗಳಲ್ಲಿ ಪರಿಶೀಲನೆ ಮಾಡುತ್ತೇನೆ. ಇವತ್ತಿನವರೆಗೂ ಕೂಡ ಈ ವಿಚಾರದಲ್ಲಿ ಚೀಟಿ ಅರೆದು 8 ತಾಸು ಕೆಲಸ ಇಲ್ಲದೇ ಇರುವಾಗ ಚಿಕ್ಕ ಪುಟ್ಟ ಕೆಲಸಗಳು ಮಾಡುತ್ತಾರೆ. ನಾವು ಮತ್ತೆ ಇಲಾಖೆಯವರ ಜೊತೆಗೆ ಮಾತನಾಡಿ, ಅದನ್ನು ಯಾವ ರೀತಿ ಮುಂದುವರೆಸುವಂತಹ ಕೆಲಸವನ್ನು ಮಾಡುತ್ತೇವೆ. ನ್ಯಾಯಾಲಯದ ಆದೇಶವನ್ನು ನನಗೆ ಕೊಟ್ಟರೆ ಅದನ್ನು ನಾನು ನೋಡಿಕೊಂಡು ಇಲಾಖೆಯಲ್ಲಿ ಚರ್ಚೆ ಮಾಡುವುದಕ್ಕೆ ಅನುಕೂಲವಾಗುತ್ತದೆ.

**ಶ್ರೀ ರಾಮೋಜಿಗೌಡ:–** ಮಾನ್ಯ ಸಭಾಪತಿಯವರೇ, ನನಗೆ ಒಂದು ವೇಳಾಪಟ್ಟಿ ಇಲ್ಲವೆಂದರೆ, ಸರ್ಕಾರ 8 ಗಂಟೆಗಳ ಕಾಲ ಏನು ಸಮಯ ನಿಗದಿ ಮಾಡಿದೆ, ಆ ವೇಳಾಪಟ್ಟಿ ನನ್ನ ಹತ್ತಿರ ಇದೆ. ಅವರು ಬೆಳಗ್ಗೆ 10 ಗಂಟೆಗೆ ಹೋಗುತ್ತಾರೆ. ಸಂಜೆ 5.30 ವರೆಗೂ ಇರುತ್ತಾರೆ. ಮಧ್ಯದಲ್ಲಿ 2–3 ಗಂಟೆಗಳು ಇದೆ. ಅವರೇ ಸಮಯವನ್ನು ನಿಗದಿ ಮಾಡಿರುವ ವೇಳಾಪಟ್ಟಿ ಇದೆ. ಇದರ ಬಗ್ಗೆ ನ್ಯಾಯಾಲಯದ ಆದೇಶ ಇದೆ, ಅದನ್ನು ಮಾನ್ಯ ಸಚಿವರಿಗೆ ಕೊಡುತ್ತೇನೆ. ಮಾನ್ಯ ಸಚಿವರು ಬಂದ ಮೇಲೆ ನಮ್ಮ ಶಿಕ್ಷಣ ಇಲಾಖೆಯ ಹಲವಾರು ಸಮಸ್ಯೆಗಳನ್ನು ಬಗೆಹರಿಸಿದ್ದಾರೆ. ಇವರು ಇಲ್ಲಿ ಕೆಲಸ ಬಿಟ್ಟು ಬೇರೆ ಕಡೆ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ತಾವು ಕನಿಷ್ಠ 15 ರಿಂದ

16 ಸಾವಿರ ರೂಪಾಯಿಗಳ ಸಂಬಳ ಕೊಡಲಿಲ್ಲವೆಂದರೆ ಹೇಗೆ ಜೀವನ ಮಾಡುತ್ತಾರೆ. ಹಾಗಾಗಿ, ಕನಿಷ್ಟ ಪಕ್ಷ ಆಯಾಯ ಜಿಲ್ಲೆಗಳಲ್ಲಿಯೇ ಜವಾಬ್ದಾರಿ ಕೊಟ್ಟು ಮಾಡಬೇಕು. ಅಲ್ಲಿ ಸೆಸ್ ಸಂಗ್ರಹವಾಗುತ್ತಿದೆ. ಸರ್ಕಾರದಿಂದ ಸಂಬಳ ಕೊಡದಿದ್ದರೂ ಪರವಾಗಿಲ್ಲ, ತಾವು ನಿಧಾನವಾಗಿ ನಿರ್ಧಾರ ತೆಗೆದುಕೊಳ್ಳಿ. ಆಯಾಯಾ ಜಿಲ್ಲೆಗಳಲ್ಲಿ ಸೆಸ್‌ನಲ್ಲಿ ಸಂಗ್ರಹವಾಗಿರುವಂತಹ ಹಣ ಇದೆ. ಅದರ ಬಗ್ಗೆ ಆದೇಶ ಮಾಡಿ, ಅವರಿಗೆ ಕನಿಷ್ಟ ವೇತನ ಕೊಡಿ. ಇವರನ್ನು ಮುಂದಿನ ದಿನಗಳಲ್ಲಿ ಖಾಯಂ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

**ಸಭಾಪತಿಯವರು:–** ಮಾನ್ಯ ಸಚಿವರೇ, ಉತ್ತರ ಕೊಡಿ. ಮಾನ್ಯ ಸದಸ್ಯರು ಹೇಳಿರುವುದು ಸರಿಯಾಗಿದೆ.

**ಶ್ರೀ ರಾಮೋಜಿಗೌಡ:–** ಮಾನ್ಯ ಸಭಾಪತಿಯವರೇ, ಸುಮಾರು ಜನರಿಗೆ ೮ ರಿಂದ ೯ ಸಾವಿರ ರೂಪಾಯಿಗಳ ಸಂಬಳ ಕೊಟ್ಟರೆ, ಅವರು ಜೀವನ ಹೇಗೆ ಮಾಡುತ್ತಾರೆ?

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಆಯಿತು. ಮಾನ್ಯ ಸಚಿವರು ಉತ್ತರ ಹೇಳುತ್ತಾರೆ ಬಿಡಿ.

**ಶ್ರೀ ರಾಮೋಜಿಗೌಡ:–** ಮಾನ್ಯ ಸಭಾಪತಿಯವರೇ, ಅವರು ಈ ಕೆಲಸ ಬಿಟ್ಟು ಬೇರೆ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಪ್ರತಿದಿನ ಅವರೇ ಕಸ ಗುಡಿಸಬೇಕು. ಅವರೇ ಬುಕ್ಸ್ ಕೊಡಬೇಕು, stock maintain ಮಾಡಬೇಕು.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಇದು ಪ್ರಶ್ನೋತ್ತರ ಅವಧಿ. ಮಾನ್ಯ ಸಚಿವರಿಗೆ ಉತ್ತರ ಹೇಳುವುದಕ್ಕೆ ಬಿಡಿ.

**ಶ್ರೀ ರಾಮೋಜಿಗೌಡ:–** ಮಾನ್ಯ ಸಭಾಪತಿಯವರೇ, ಅವರು ಎಲ್ಲಾ ಕೆಲಸ ಮಾಡುವುದರಿಂದ, ದಯಮಾಡಿ ಅವರಿಗೆ ಕನಿಷ್ಟ ವೇತನವನ್ನು ಕೊಡುವ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ಎಸ್. ಮಧು ಬಂಗಾರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಏನು ಹೇಳಿದ್ದಾರೆ. ಅದನ್ನು ಸಂಪೂರ್ಣವಾಗಿ ರಾಜ್ಯ ಮಟ್ಟದಲ್ಲಿ ಯಾವ ರೀತಿ ನಮಗೆ collections ಬರುತ್ತಿದೆ. ಅವರಿಗೆ ಯಾವ ರೀತಿ ಸಹಕಾರ ಮಾಡಬಹುದೆನ್ನುವ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಂಡು ನ್ಯಾಯಾಲಯದ ಆದೇಶದಲ್ಲಿ ಏನು ನಿರ್ದೇಶನ ಕೊಟ್ಟಿದ್ದಾರೆ ಎನ್ನುವುದನ್ನು ನೋಡಿ, ಇದರ ಬಗ್ಗೆ ಇಲಾಖೆಯವರ ಜೊತೆಗೆ ದೊಡ್ಡ ಮಟ್ಟದಲ್ಲಿ ಚರ್ಚೆ ಮಾಡುತ್ತೇವೆ. ಸಂಬಳ ಕಡಿಮೆ ಇರುವುದು ನಿಜ. ನಾನು ಇಲ್ಲವೆಂದು ಹೇಳುವುದಿಲ್ಲ. ಇದನ್ನು ಒಳ್ಳೆಯ ರೀತಿಯಲ್ಲಿ ಅವರಿಗೆ ಸಹಕಾರ ಕೊಡಬೇಕೆಂದು ನೋಡಿಕೊಂಡು ತೀರ್ಮಾನ ತೆಗೆದುಕೊಂಡು ಆದಷ್ಟು ಬೇಗ ಮಾಡುತ್ತೇನೆ.

**(ಈ ಹಂತದಲ್ಲಿ ವೈಸ್ ಛೇರ್ಮನ್‌ರವರಾದ ಮಾನ್ಯ ಮಂಜುನಾಥ ಭಂಡಾರಿಯವರು ಪೀಠವನ್ನು ಅಲಂಕರಿಸಿದರು)**

**ಪ್ರಶ್ನೆ ಸಂಖ್ಯೆ: 648**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಜಾಗತಿಕ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಉನ್ನತ ಶಿಕ್ಷಣ ಇಲಾಖೆಯಲ್ಲಿ ಕೈಗೊಂಡಿರುವಂತಹ ಬದಲಾವಣೆಗೆ ಸಂಬಂಧಪಟ್ಟಂತೆ ಮಾನ್ಯ ಸಚಿವರಿಗೆ ಪ್ರಶ್ನೆಯನ್ನು ಕೇಳಿದ್ದೇನೆ. ಮಾನ್ಯ ಸಚಿವರು ಬಹಳ ಸುದೀರ್ಘವಾದಂತಹ ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ಸಚಿವರು ಸುದೀರ್ಘವಾದಂತಹ ಉತ್ತಮ ಕೆಲಸವನ್ನು ಮಾಡಿದ್ದಾರೆ. ಇದರ ಬಗ್ಗೆ ಎರಡನೇ ಪ್ರಶ್ನೆ ಇಲ್ಲ. ಉನ್ನತ ಶಿಕ್ಷಣ ಇಲಾಖೆ ಇರಬಹುದು, ತಾಂತ್ರಿಕ ಶಿಕ್ಷಣ ಇಲಾಖೆ ಇರಬಹುದು, ವಿಶ್ವವಿದ್ಯಾನಿಲಯಗಳು ಇರಬಹುದು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಇರಬಹುದು, ಕಾಲೇಜು ಶಿಕ್ಷಣ ಇಲಾಖೆ ಇರಬಹುದು, ಎಲ್ಲಾ ವಿಭಾಗಗಳಲ್ಲಿ ಒಂದು ಜಾಗತಿಕ ಬೆಳವಣಿಗೆಗೆ ಸಂಬಂಧಪಟ್ಟಂತೆ ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಬಹಳ ವಿಶೇಷವಾಗಿ ನಮ್ಮ ರಾಜ್ಯದ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ದೃಷ್ಟಿಯಲ್ಲಿ ಬೇರೆ ಬೇರೆ ವಿಶ್ವವಿದ್ಯಾನಿಲಯಗಳು ಬ್ರಿಟನ್ ಇರಬಹುದು, ಅಮೇರಿಕಾ ಇರಬಹುದು, ಆಸ್ಟ್ರೇಲಿಯಾ ಇರಬಹುದು, ಕೆನಡಾ ಇರಬಹುದು, ಆ ವಿಶ್ವವಿದ್ಯಾನಿಲಯಗಳ ಜೊತೆಗೆ ಒಪ್ಪಂದಗಳನ್ನು ಮಾಡಿಕೊಂಡು ನಮ್ಮ ರಾಜ್ಯದ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತಹ ಯೋಜನೆಗಳನ್ನು ಕೊಟ್ಟಿದ್ದಾರೆ. ನನಗೆ ಪ್ರಮುಖವಾಗಿ ಇಲ್ಲಿರುವಂತಹ ಪ್ರಶ್ನೆಯೇನೆಂದರೆ, ರಾಜ್ಯದಲ್ಲಿ ಸರ್ಕಾರಿ ವಿಶ್ವವಿದ್ಯಾನಿಲಯಗಳು Higher Education Department, Higher Education Council ಏನು ಮಾಡುತ್ತಿದ್ದೀರಿ? ಇದೇ ರೀತಿ ಖಾಸಗಿಯವರು ಮಾಡುವುದರ ಮೇಲೆ ನಿಯಂತ್ರಣವನ್ನು ಹಾಕಬೇಕಾಗುತ್ತದೆ. ಉದಾಹರಣೆಗೆ, ಎಲ್ಲೋ private university ಗಳು ಬ್ರಿಟನ್, ಅಮೇರಿಕಾದವರ ಜೊತೆಯಲ್ಲಿ ಒಪ್ಪಂದವನ್ನು ಮಾಡಿಕೊಂಡು, ನಮ್ಮ ರಾಜ್ಯದ ಮಕ್ಕಳಿಗೆ exploitation ಮಾಡುವಂತಹದ್ದು ಇದೆ. ಹೆಚ್ಚು ಹಣ ವಸೂಲಿ ಮಾಡುವಂತಹದ್ದು ಇದೆ. ಹಾಗಾಗಿ ನಾನು ಮಾನ್ಯ ಸಚಿವರಿಗೆ ವಿನಂತಿಯನ್ನು ಮಾಡುತ್ತೇನೆ. ಮಾನ್ಯ ಸಚಿವರು ಎರಡು ಕೆಲಸವನ್ನು ಮಾಡಬೇಕು. ಮೊದಲನೆಯದು ಸರ್ಕಾರಿ ಮಟ್ಟದಲ್ಲಿ Higher Education Council ಇರಬಹುದು. ಕಾಲೇಜು ಶಿಕ್ಷಣ ಇಲಾಖೆ ಇರಬಹುದು. ತಾವು ಏನು ಮಾಡುತ್ತಿದ್ದೀರಿ. ಇದನ್ನು ಅಲ್ಲಿ ಜಾಸ್ತಿ ಮಾಡುವಂತಹದ್ದು. ಒಂದು ಸಾವಿರ ವಿದ್ಯಾರ್ಥಿಗಳಿಗೆ ಪ್ರಯೋಜನ ಸಿಗುತ್ತಿದೆ ಎಂದರೆ, ಬರುವಂತಹ ಶೈಕ್ಷಣಿಕ ವರ್ಷದಲ್ಲಿ ಕನಿಷ್ಟ 5 ರಿಂದ 10 ಸಾವಿರ ವಿದ್ಯಾರ್ಥಿಗಳಿಗೆ ಅನುಕೂಲ ಸಿಗುವಂತಹದ್ದು

ಆಗಬೇಕು. Fee Structure ಕಡಿಮೆ ಮಾಡುವಂತಹದ್ದು ಆಗಬೇಕು. At the same time, ಖಾಸಗಿಯವರು ಇದನ್ನು ದುರುಪಯೋಗ ಮಾಡಿಕೊಳ್ಳದೇ ಇರುವಂತಹ ರೀತಿಯಲ್ಲಿ . . . ನಮ್ಮಲ್ಲಿ Deemed University, Private University ಗಳು ಸಾಕಷ್ಟು ಇವೆ. ಅವರು ಇದನ್ನೇ ಬಂಡವಾಳ ಮಾಡಿಕೊಂಡು, ಇದನ್ನು ದುರುಪಯೋಗಪಡಿಸಿಕೊಳ್ಳಬಾರದು. ನಮ್ಮ ರಾಜ್ಯದ ವಿದ್ಯಾರ್ಥಿಗಳಿಗೆ ಅನಾನುಕೂಲವಾಗಬಾರದು. ಇವತ್ತು ತಾಂತ್ರಿಕ ಇಲಾಖೆಗೆ ಸಂಬಂಧಪಟ್ಟಂತೆ ಸುಮಾರು 43 ಡಿಪ್ಲೋಮಾ ಕಾಲೇಜುಗಳಿಗೆ ಅವರು ವರದಿಯನ್ನು ಕೊಟ್ಟಿದ್ದಾರೆ. ಕೌಶಲ್ಯಾಭಿವೃದ್ಧಿ ಇಲಾಖೆಯ ಸಚಿವರು ಇಲ್ಲಿಯೇ ಇದ್ದಾರೆ. ಅವರಿಬ್ಬರು ಜೊತೆಯಲ್ಲಿ ಪ್ರವಾಸವನ್ನು ಮಾಡಿದರು. ಅದರಿಂದ ರಾಜ್ಯಕ್ಕೆ ಅನುಕೂಲವಾಗಿದೆ. ಒಳ್ಳೆಒಳ್ಳೆಯ ಕಾರ್ಯಕ್ರಮಗಳನ್ನು ಮಾಡುತ್ತಿದ್ದಾರೆ. ನಾನು ಅದನ್ನು ಸ್ವಾಗತ ಮಾಡುತ್ತೇನೆ. ಖಾಸಗಿ ವಿಶ್ವವಿದ್ಯಾನಿಲಯಗಳಿಗೆ ಸಂಬಂಧಪಟ್ಟಂತೆ ಕೆಲವು ನಿಯಾಮವಳಿಗಳನ್ನು ಮಾಡಬೇಕು. ತಾವು ಇವತ್ತು ಏನು ಯೋಜನೆಯನ್ನು ಕೈಗೊಂಡಿದ್ದೀರಾ, ಆ ಯೋಜನೆಗಳು ವಿದ್ಯಾರ್ಥಿಗಳಿಗೆ ಹೆಚ್ಚು ಪ್ರಯೋಜನಕಾರಿಯಾಗಬೇಕು ಎನ್ನುವಂತಹ ನಿಟ್ಟಿನಲ್ಲಿ ಮಾನ್ಯ ಸಚಿವರಲ್ಲಿ ನಾನು ವಿನಂತಿ ಮಾಡುತ್ತೇನೆ.

(ಮುಂದು)

(244) 9.3.2026 12.00 ಪಿಕೆ:ಆರ್‌ಎನ್ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ರಮೇಶ್ ಬಾಬು (ಮುಂದು)**

ವಿಶೇಷವಾಗಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಮೂಲಕ ಏನೇನು ಒಡಂಬಡಿಕೆ ಮಾಡಿಕೊಂಡಿದ್ದೀರೋ ಅವು ಅನುಷ್ಠಾನವಾಗಬೇಕು. ಈಗಾಗಲೇ British Council and State Higher Education Council ಜೊತೆ ಆಗಿರುವ ಒಪ್ಪಂದ ಇರಬಹುದು, Rajarshi University ಜೊತೆ ಆಗಿರುವ ಒಪ್ಪಂದಗಳಿರಬಹುದು . . .

**ವೈಸ್ ಛೇರ್ಮೆನ್:-** ಮಾನ್ಯ ಸದಸ್ಯರೇ, ಮೊದಲು ಮಾನ್ಯ ಸಚಿವರು ಉತ್ತರ ಕೊಡಲಿ, ಮತ್ತೆ ನೀವು ಮಾತನಾಡಿ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಗಳೆ, ಮಾನ್ಯ ಸಚಿವರು ಸುದೀರ್ಘ ಉತ್ತರ ಕೊಟ್ಟಿದ್ದಾರೆ. ಸುಮಾರು 60-70 ಪುಟಗಳ ಉತ್ತರವನ್ನು ಕೊಟ್ಟಿದ್ದಾರೆ; ಅದನ್ನು ನಾನು ಸ್ವಾಗತ ಮಾಡುತ್ತೇನೆ. ಅವರು ಕೊಟ್ಟಿರುವ ಉತ್ತರದ ಬಗ್ಗೆ ತಕರಾರು ಮಾಡುತ್ತಿಲ್ಲ. ಆಗಬೇಕಾದ ಕೆಲಸಗಳಿಗೆ ಸಂಬಂಧಪಟ್ಟಂತೆ ಮಾತ್ರ ನಾನು ಹೇಳುತ್ತಿದ್ದೇನೆ. ಮಾನ್ಯ ಸಚಿವರು ಮತ್ತು ಮಾನ್ಯ ಕೌಶಲ್ಯಾಭಿವೃದ್ಧಿ ಸಚಿವರು ಒಟ್ಟಾಗಿ ವಿದೇಶ ಪ್ರವಾಸ ಮಾಡಿ ಬಂದಿದ್ದಾರೆ. ಅದರಿಂದ ರಾಜ್ಯಕ್ಕೆ ಅನುಕೂಲವಾಗಿದೆ. VTU ಅವರು Aschaffenburg University of Applied Sciences ಅವರ ಜೊತೆ ಒಪ್ಪಂದ ಮಾಡಿಕೊಂಡಿದ್ದಾರೆ. Karnataka University ಅವರು

Harrisburg University of Science and Technology ಅವರ ಜೊತೆ ಒಪ್ಪಂದ ಮಾಡಿಕೊಂಡಿದ್ದಾರೆ. ಇದರ ಬಗ್ಗೆ ನನಗೆ ಭಿನ್ನಾಭಿಪ್ರಾಯವಿಲ್ಲ. ಅದನ್ನು ನಾನು ಸ್ವಾಗತಿಸುತ್ತೇನೆ, ಅಭಿನಂದನೆ ಸಲ್ಲಿಸುತ್ತೇನೆ. ನನ್ನ ತಕಾರಾರು ಏನೆಂದರೆ, Deemed University and Private University ಗಳಿಗೆ ಸಂಬಂಧಪಟ್ಟಂತೆ ಈ ನಿಟ್ಟಿನಲ್ಲಿ restriction ಹಾಕಬೇಕು. ಏಕೆಂದರೆ ಅವರು exploitation ಮಾಡುವ ರೀತಿಯಲ್ಲಿ ಅವಕಾಶ ಮಾಡಿಕೊಡಬಾರದು, ವಿದ್ಯಾರ್ಥಿಗಳಿಗೆ ತೊಂದರೆ ಆಗಬಾರದು. ಆ ನಿಟ್ಟಿನಲ್ಲಿ ನಾನು ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಮಾಹಿತಿ ಕೇಳಬಯಸುತ್ತೇನೆ.

**ಡಾ: ಎಂ.ಸಿ. ಸುಧಾಕರ್ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಕೇಳಿದ ಮಾಹಿತಿಗಳನ್ನು ವಿವರವಾಗಿ ಕೊಟ್ಟಿದ್ದೇನೆ. ಮಾನ್ಯ ಸದಸ್ಯರು, ಈ ದಿಸೆಯಲ್ಲಿ ಒಳ್ಳೆಯ ಕೆಲಸ ಆಗುತ್ತಿದೆ ಎಂದು ಹೇಳುತ್ತಿದ್ದಾರೆ. ಈಗ ಖಾಸಗಿ ವಿಶ್ವವಿದ್ಯಾಲಯಗಳೂ ಸಹ ವಿದೇಶಿ ವಿಶ್ವವಿದ್ಯಾಲಯಗಳ ಜೊತೆ ಒಡಂಬಡಿಕೆ ಮಾಡಿಕೊಳ್ಳುತ್ತಿರುವುದರಿಂದ, ನಾವು ಉತ್ಕೃಷ್ಟವಾದ ಶಿಕ್ಷಣವನ್ನು ಕೊಡುತೇವೆ ಎಂದು ಹೇಳಿ ಬಹುಶಃ ವಿದ್ಯಾರ್ಥಿಗಳಿಂದ ಹೆಚ್ಚು ಶುಲ್ಕ ಪಡೆಯುವ ಕೆಲಸ ಆಗಬಹುದು ಎನ್ನುವ ವಿಚಾರವನ್ನು ಹೇಳಿದರು. ಆ ಕಾರಣಕ್ಕಾಗಿ ನಾವು ಇವತ್ತು ದೊಡ್ಡ ಮಟ್ಟದಲ್ಲಿ United Kingdom ಇರಬಹುದು, Australia ಇರಬಹುದು, New Zealand ಇರಬಹುದು, ಮತ್ತಿತರ ವಿಶ್ವವಿದ್ಯಾಲಯಗಳ ಜೊತೆ ನಮ್ಮ ವಿಶ್ವವಿದ್ಯಾಲಯಗಳು ಒಡಂಬಡಿಕೆ ಮಾಡಿಕೊಂಡು, ನಿರಂತರವಾಗಿ ನಮ್ಮ ಶಿಕ್ಷಣದಲ್ಲಿ ಬದಲಾವಣೆ ತರುವಂತಹ ಪ್ರಯತ್ನ ಮಾಡುತ್ತಿದ್ದೇವೆ. ಖಾಸಗಿ ವಿಶ್ವವಿದ್ಯಾಲಯಗಳು they are independent Universities. ಅವರಿಗೆ ಎಲ್ಲಾ ರೀತಿಯ ಸ್ವಾತಂತ್ರ್ಯ ಇದೆ, ಅವರು ಯಾವುದೇ ರೀತಿಯ ಒಡಂಬಡಿಕೆ ಮಾಡಿಕೊಳ್ಳುವುದಕ್ಕೆ ನಿರ್ಬಂಧ ಇಲ್ಲ. ಆದರೆ, ಮಕ್ಕಳಿಂದ ಹೆಚ್ಚು ಶುಲ್ಕ ಪಡೆಯುತ್ತಿದ್ದಾರೆ ಎನ್ನುವಂತಹ ದೂರು ಬಂದರೆ ಖಂಡಿತಾ ನಾವು ಅದರ ಬಗ್ಗೆ ಪರಿಶೀಲನೆ ಮಾಡಿ, ಅವರಿಗೆ ಕಟ್ಟುನಿಟ್ಟಾಗಿ ಸೂಚನೆ ಕೊಡುವ ಕೆಲಸ ಮಾಡುತ್ತೇವೆ. ಈ ಸಮಸ್ಯೆ ಉದ್ಭವ ಆಗಬಾರದು ಎನ್ನುವ ದೃಷ್ಟಿಯಿಂದ ನಾವೇ Centre of Excellence ಗಳನ್ನು ನಮ್ಮ ಸರ್ಕಾರಿ ಕಾಲೇಜುಗಳಲ್ಲಿ ಮಾಡುತ್ತಿದ್ದೇವೆ. ಬಹಳ ದೊಡ್ಡ ಮಟ್ಟದಲ್ಲಿ HP ಯಿಂದ Artificial Intelligence and Gaming Hub ಮಾಡಿದ್ದೇವೆ. ಇತ್ತೀಚಿಗೆ 1M1B ಎನ್ನುವ ಒಂದು ಸಂಸ್ಥೆಯನ್ನು Microsoft ಮುಖಾಂತರ Green Energy ಸಂಬಂಧಪಟ್ಟಂತೆ Centre of Excellence ನಮ್ಮ SKSJTI ಯಲ್ಲಿ ಪ್ರಾರಂಭ ಮಾಡಿದ್ದೇವೆ. Toyota Kirloskar ಅವರು ಸುಮಾರು Centre of Excellence ಗಳನ್ನು ನಮ್ಮ Engineering College ಗಳಲ್ಲಿ ಮಾಡಿದ್ದಾರೆ. Suzlon ಜೊತೆಯಲ್ಲಿ ಒಂದು MoU ಮಾಡಿಕೊಂಡಿದ್ದೇವೆ. Schneider Company ಜೊತೆ ಮಾಡಿಕೊಂಡಿದ್ದೇವೆ. Samsung ಅವರ ಜೊತೆ ಸೇರಿಕೊಂಡು ನಮ್ಮ ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ ಸ್ಥಾಪನೆ ಮಾಡುವಂತಹ ಕೆಲಸ ಮಾಡುತ್ತಿದ್ದೇವೆ. ಇದು ಇನ್ನೂ ದೊಡ್ಡ ಮಟ್ಟದಲ್ಲಿ ಆಗಬೇಕು. ನಮ್ಮ ADB Loan ನಲ್ಲಿ Centre of Excellence ಮಾಡಬೇಕು ಎನ್ನುವ ಒಂದು ಪ್ರಯತ್ನವನ್ನು ಮಾಡುತ್ತಿದ್ದೇವೆ. ಈಗಾಗಲೇ ಇದು ಅಂತಿಮ

ಹಂತಕ್ಕೆ ಬಂದಿದೆ. ಈ ಒಂದು ಶೈಕ್ಷಣಿಕ ವರ್ಷದಲ್ಲಿ ನಾವು ಅನುಷ್ಠಾನ ಮಾಡುತ್ತಿದ್ದೇವೆ. ಉನ್ನತ ಶಿಕ್ಷಣ ಇಲಾಖೆಯಲ್ಲಿ ಸಾಕಷ್ಟು ಬದಲಾವಣೆ ತರುವಂತಹ ಪ್ರಯತ್ನವನ್ನು ಮಾಡಿದ್ದೇವೆ. Skout Programme ಸಂಬಂಧಪಟ್ಟಂತೆ 2024ರ ಅವಧಿಯಲ್ಲಿ 6 ವಿಶ್ವವಿದ್ಯಾಲಯಗಳಿಂದ 30 ಜನರು 15 ದಿವಸಗಳ ಕಾಲ University of East London ಗೆ ಹೋಗಿ ಶೈಕ್ಷಣಿಕ ಪ್ರವಾಸವನ್ನು ಮುಗಿಸಿಕೊಂಡು ಬಂದಿದ್ದಾರೆ. ಈಗ Skout 2.0 Programme ಮುಂದಿನ ತಿಂಗಳಲ್ಲಿ ಮತ್ತೆ 30 ಜನ ಮಕ್ಕಳನ್ನು ಕಳುಹಿಸುವಂತಹ ಕೆಲಸ ಮಾಡುತ್ತಿದ್ದೇವೆ. ನಮ್ಮ ವಿಶ್ವವಿದ್ಯಾಲಯಗಳಲ್ಲಿ ಓದುತ್ತಿರುವ ಮಕ್ಕಳನ್ನು ಆಯ್ಕೆ ಮಾಡಿ ಕಳುಹಿಸಿ ಕೊಡಲಾಗುತ್ತಿದೆ. Chevening Programme ಗೆ ಸಂಬಂಧಪಟ್ಟಂತೆ, ಸ್ನಾತಕೋತ್ತರ ಪದವಿಯನ್ನು ಮಾಡಲು ಹೋದವರ್ಷ 3 ಜನರನ್ನು ಆಯ್ಕೆ ಮಾಡಿ ಕಳುಹಿಸಿಕೊಟ್ಟಿದ್ದೇವೆ. ಈ ವರ್ಷ ಆಯ್ಕೆ ಮಾಡುವಂತಹ ಪ್ರಕ್ರಿಯೆ ನಡೆಯುತ್ತಿದೆ. ಈ ರೀತಿ ಸುಧಾರಣೆ ಆಗುವಂತಹ ಹಲವಾರು ಕಾರ್ಯಕ್ರಮಗಳನ್ನು ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು, ಇಲಾಖೆಗಳಲ್ಲಿ ಆಗುತ್ತಿರುವಂತಹ ಬದಲಾವಣೆ ಬಗ್ಗೆ ಪ್ರಶ್ನೆ ಕೇಳಿದ್ದಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ. ಉನ್ನತ ಶಿಕ್ಷಣ ಇಲಾಖೆಯಲ್ಲಿ ಯಾವರೀತಿ ಬದಲಾವಣೆ ಆಗುತ್ತಿದೆ ಎನ್ನುವ ಎಲ್ಲಾ ಮಾಹಿತಿಗಳನ್ನು ರಾಜ್ಯದ ಮೂಲೆ ಮೂಲೆಗಳಿಗೆ ಕೊಡುವುದಕ್ಕೆ ಆಗುವುದಿಲ್ಲ. ಆದರೆ, ಇವತ್ತು ಸದನದಲ್ಲಿ ಕೊಡುತ್ತಿರುವ ಉತ್ತರದ ಮುಖಾಂತರ ಈ ಮಾಹಿತಿ ಹೋಗುತ್ತಿರುವುದು ಜನರಲ್ಲಿ ಸರ್ಕಾರದ ವ್ಯವಸ್ಥೆಯ ಮೇಲೆ ನಂಬಿಕೆ ಬರುವಂಥದ್ದಾಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಗಳೆ, ಇನ್ನೊಂದು ವಿಷಯ ಇದೆ.

**ವೈಸ್ ಛೇರ್ಮನ್:-** ಈಗಾಗಲೇ ನಿಮ್ಮ ಪ್ರಶ್ನೋತ್ತರಕ್ಕೆ 10 ನಿಮಿಷ ಸಮಯ ಹಿಡಿದಿದೆ. ನಿಮಗೆ ಇನ್ನೂ ಹೆಚ್ಚಿನ ಮಾಹಿತಿ ಬೇಕಾದರೆ ಮಾನ್ಯ ಸಚಿವರನ್ನು ಅವರ ಕಚೇರಿಯಲ್ಲಿ ಭೇಟಿ ಮಾಡಿ ಪಡೆದುಕೊಳ್ಳಿ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಗಳೆ, ಮಾನ್ಯ ಸಚಿವರು Artificial Intelligence ಗೆ ಸಂಬಂಧಪಟ್ಟಂತೆ ಕೆಲವು ಕೋರ್ಸ್‌ಗಳನ್ನು ಮಾಡುತ್ತೇವೆ ಎನ್ನುವ ಮಾಹಿತಿ ಕೊಟ್ಟಿದ್ದಾರೆ. ಐಟಿ-ಬಿಟಿ ಮಂತ್ರಿಗಳೂ ಸಹ ಸದನದಲ್ಲೇ ಇದ್ದಾರೆ. ಹಾಗಾಗಿ ನಾನು ವಿನಂತಿ ಮಾಡಬಯಸುತ್ತೇನೆ. ಮಾನ್ಯ ಉನ್ನತ ಶಿಕ್ಷಣ ಸಚಿವರು, ಅದರದೇ ಆದ ಒಂದು ವಿಶ್ವವಿದ್ಯಾಲಯ ಮಾಡುವುದಕ್ಕೆ ಅವಕಾಶ ಇದ್ದರೆ, ರಾಜ್ಯದ ಹಿತದೃಷ್ಟಿಯಿಂದ, ಇಲ್ಲಿನ ಯುವಕರ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ Artificial Intelligence ಸಂಬಂಧಪಟ್ಟಂತೆ ಒಂದು ವಿಶ್ವವಿದ್ಯಾಲಯ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

**ಪ್ರಶ್ನೆ ಸಂಖ್ಯೆ: 581**

**(ಉತ್ತರ ಲಗತ್ತಿಸಲಾಗಿದೆ)**

**ಶ್ರೀ ಕೆ. ಶಿವಕಮಾರ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಗಳೆ, ಮಾನ್ಯ ಸಚಿವರು ಸುದೀರ್ಘ ಉತ್ತರ ಕೊಟ್ಟಿದ್ದಾರೆ. ಮೈಸೂರು ಕೆ.ಆರ್.ಆಸ್ಪತ್ರೆಯಲ್ಲಿ ಎಷ್ಟೆಷ್ಟು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿತ್ತು; ಯಾವಾಗ ನವೀಕರಣ ಮಾಡಿದ್ದೀರಿ ಎಂದು ಕೇಳಿದ್ದೆ. ಇವತ್ತು 37 ಇಲಾಖೆಗಳು ಕೆಲಸ ಮಾಡುತ್ತಿವೆ. ಆದರೆ, ಮಂಡ್ಯ, ಮೈಸೂರು, ಚಾಮರಾಜ ನಗರ, ಹೊಳೆನರಸೀಪುರ, ಕೆ.ಆರ್ ಪೇಟೆ ಈ ಭಾಗಗಳಿಂದ ನಮ್ಮ ಕೆ.ಆರ್.ಆಸ್ಪತ್ರೆಗೆ ರೋಗಿಗಳು ಬರುತ್ತಾರೆ. ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ 117 ಹುದ್ದೆಗಳು ಖಾಲಿ ಇವೆ ಎಂದು ಹೇಳಿದ್ದಾರೆ. ಇತ್ತೀಚಿನ ದಿನಗಳಲ್ಲಿ ಕ್ರಮ ತೆಗೆದುಕೊಂಡು ಇಂತಹ ಹುದ್ದೆಗಳನ್ನು ತುಂಬಿಸುತ್ತಿದ್ದಾರೆ, ಬಹಳಷ್ಟು ಕೆಲಸಗಳನ್ನು ಮಾಡುತ್ತಿದ್ದಾರೆ. ನಾನು ಅವರನ್ನು ಅಭಿನಂದಿಸುತ್ತೇನೆ. ಆದರೆ, ಕೆ.ಆರ್.ಆಸ್ಪತ್ರೆಯಲ್ಲಿ 10 ಐ.ಸಿ.ಯು. ಬೆಡ್‌ಗಳಿತ್ತು, ಕೋವಿಡ್ ಬಂದನಂತರ 50 ಬೆಡ್ ಆಯಿತು. ಇವತ್ತು ಮಂತ್ರಿಗಳ ಹತ್ತಿರ ಹೇಳಿಸಿದರೂ, ಮುಖ್ಯಮಂತ್ರಿಗಳ ಹತ್ತಿರ ಹೇಳಿಸಿದರೂ ಒಂದು ಐ.ಸಿ.ಯು. ಬೆಡ್ ಸಿಗುವಂತಹ ಸ್ಥಿತಿ ಇಲ್ಲ. ಏಕೆಂದರೆ, ಅಷ್ಟು ರೋಗಿಗಳ ಒತ್ತಡ ಇದೆ.

**ವೈಸ್ ಛೇರ್ಮನ್:-** ಮಾನ್ಯ ಶಿವಕುಮಾರ್‌ರವರೇ, ನಿಮ್ಮ ನೇರ ಪ್ರಶ್ನೆಯನ್ನು ಕೇಳಿ. ವಿವರ ಹೇಳುವುದಕ್ಕೆ ಹೋಗಬೇಡಿ. ಏಕೆಂದರೆ ಇನ್ನೂ ಬೇರೆ ಪ್ರಶ್ನೆಗಳನ್ನು ಕೈಗೆತ್ತಿಕೊಳ್ಳಬೇಕಿದೆ. ಮಾನ್ಯ ಸಚಿವರು ಉತ್ತರ ಕೊಟ್ಟ ನಂತರ ಮತ್ತೆ ಕೇಳಿ.

**ಶ್ರೀ ಕೆ.ಶಿವಕುಮಾರ್:-** ಮಾನ್ಯ ಸಭಾಪತಿಗಳೆ, 117 ಖಾಲಿ ಹುದ್ದೆಗಳನ್ನು ಯಾವಾಗ ತುಂಬುತ್ತಾರೆ ಹೇಳಬೇಕು. Sanatorium ಇರಬಹುದು District Hospital ಇರಬಹುದು ಇವೆಲ್ಲವನ್ನೂ ಮಾನ್ಯ ಮುಖ್ಯಮಂತ್ರಿಗಳು ಕಟ್ಟಿಸಿಕೊಟ್ಟಿದ್ದಾರೆ. ಅಲ್ಲಿ ಓ.ಪಿ.ಡಿ. ಮಾತ್ರ ನಡೆಯುತ್ತಿದೆ. ಆದರೆ ಅಲ್ಲಿ I.C.U., Beds ಇಲ್ಲ Surgery ನಡೆಯುತ್ತಿಲ್ಲ. ಕೆ.ಆರ್.ಆಸ್ಪತ್ರೆಯ ರೋಗಿಗಳ ಒತ್ತಡವನ್ನು ಆ ಆಸ್ಪತ್ರೆಗಳು ತೆಗೆದುಕೊಳ್ಳುತ್ತಿಲ್ಲ. ಯಾವಾಗ ಅದು full-fledged ಆಗಿ ಕೆಲಸ ಮಾಡುತ್ತವೆ ಎನ್ನುವುದನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ.

**ಡಾ: ಶರಣಪ್ರಕಾಶ್ ಆರ್.ಪಾಟೀಲ್ (ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಮೈಸೂರಿನವರಾಗಿರುವುದರಿಂದ ಕಾಳಜಿ ವಹಿಸಿ ಕೇಳುತ್ತಿದ್ದಾರೆ. 117 ಹುದ್ದೆಗಳನ್ನು ಭರ್ತಿ ಮಾಡಬೇಕಿದೆ. ಇತ್ತೀಚಿನ ದಿನಗಳಲ್ಲಿ ಒಳಮೀಸಲಾತಿ ನಿರ್ವಹಣೆ ಆದಮೇಲೆ ಸಚಿವ ಸಂಪುಟವು ಸದರಿ ಹುದ್ದೆಗಳನ್ನು ಭರ್ತಿ ಮಾಡಬೇಕೆಂದು ನಿರ್ಧಾರ ಮಾಡಿದೆ. ಶೀಘ್ರದಲ್ಲೇ ಈ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ. ಐ.ಸಿ.ಯು.ನಲ್ಲಿ ಬೆಡ್‌ನ ಕೊರತೆ ಇದೆ ಎಂದು ಹೇಳಿದ್ದಾರೆ. ಕೆ.ಆರ್.ಆಸ್ಪತ್ರೆಯಲ್ಲಿ ಇರುವಂತಹ ಸಾಮರ್ಥ್ಯವನ್ನು ಮೀರುತ್ತಿರುವುದರಿಂದ ನಾವು ಬೇರೆ ಬೇರೆ ಕಡೆ ಅಂದರೆ, Super specialty Hospitals, Trauma

Centre ಗಳಲ್ಲಿ ಐ.ಸಿ.ಯುಗಳನ್ನು ಮಾಡಿದ್ದೇವೆ. ಎಲ್ಲಿ ಅವಕಾಶಗಳು ಇವೆಯೋ, ಅವಶ್ಯಕತೆ ಇದೆಯೋ ಅಲ್ಲಿ ಹೆಚ್ಚಿನ ಬೆಡ್ ಮಾಡುವಂತಹ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುತ್ತೇವೆ.

**ಶ್ರೀ ಕೆ.ಶಿವಕುಮಾರ್:–** ನೀವೇನು ಹೊಸ ಆಸ್ಪತ್ರೆಗಳನ್ನು ಕಟ್ಟಿದ್ದೀರೋ ಅವು full–fledged ಆಗಿ ಕೆಲಸ ಮಾಡುತ್ತಿಲ್ಲ. ಕೆ.ಆರ್.ಆಸ್ಪತ್ರೆಯಲ್ಲಿ Dialysis Units ಏನಿವೆ, ಅಲ್ಲಿ Technician ಇಲ್ಲ. ಡಯಾಲಿಸಿಸ್ ಯೂನಿಟ್‌ಗಳನ್ನು ರೋಟರಿ ಕ್ಲಬ್‌ನವರು, ಲಯನ್ಸ್ ಕ್ಲಬ್‌ನವರು ಮತ್ತು ಸರ್ಕಾರ ಕೂಡ ಕೊಡುವಂತಹ ಕೆಲಸವನ್ನು ಮಾಡುತ್ತಿದೆ. ಐ.ಸಿ.ಯು. ಯೂನಿಟ್‌ಗಳ ಜೊತೆ Internships ಅವರನ್ನು ಕೊಡಬೇಕಾಗುತ್ತದೆ, ಮ್ಯಾನೇಜ್ ಮಾಡಬೇಕಾಗುತ್ತದೆ. ಪಕ್ಕದಲ್ಲೇ ಚೆಲುವಾಂಬಾ ಆಸ್ಪತ್ರೆ ಇದೆ. ಅಲ್ಲಿ ಒಂದೇ Incubators ನಲ್ಲಿ ಮೂರ್ಮೂರು ಮಕ್ಕಳನ್ನು ಹಾಕುತ್ತಿದ್ದಾರೆ. In–born and out–born ಗಳಿಗೆ ತಲಾ 15 ಬೆಡ್‌ಗಳಿವೆ. Infant Mortality 11.3 ಇದೆ. It may be less than the national average. I am not disputing it. My concern is please see that hundred I.C.U beds are sanctioned to K.R.Hospital and Cheluvamba Hospital. ಏಕೆಂದರೆ, Doctors are doing their best in Cheluvamba Hospital. ಅದರ ಬಗ್ಗೆ ನಾನು ಮಾತನಾಡುತ್ತಿಲ್ಲ. ನೀವು ಅಲ್ಲಿ 5 ಕಿ.ಮೀ.ದೂರದಲ್ಲಿ Trauma Centres, District Hospitals ಗಳನ್ನು ಕಟ್ಟಿಸಿಕೊಟ್ಟಿದ್ದೀರಿ. ರೋಗಿಗಳು ಕೆ.ಆರ್.ಆಸ್ಪತ್ರೆಯಿಂದ ಅಲ್ಲಿಗೆ ಹೋಗಬೇಕು, whereas in Victoria Hospital, you have made it in one complex. ಎಲ್ಲಾ department ಗಳನ್ನು ಒಂದೇ ಕಾಂಪ್ಲೆಕ್ಸ್‌ನಲ್ಲಿ ತಂದಿದ್ದೀರಿ.

(ಮುಂದು)

(245) 9–3–2026 12.10 ಡಿಎಸ್–ಆರ್‌ಎನ್ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಶಿವಕುಮಾರ್ ಕೆ.(ಮುಂದು):–**

ಮುಂದೆ ಏನಾದರೂ ಕಟ್ಟಡ ನಿರ್ಮಾಣ ಮಾಡುವುದಾದರೆ ಮೈಸೂರು ವೈದ್ಯಕೀಯ ಕಾಲೇಜಿನ ಆವರಣದಲ್ಲಿ ಬೇಕಾದಷ್ಟು ಜಾಗವಿದೆ, ಅಲ್ಲಿ ನಮಗೆ ಕಟ್ಟಡ ನಿರ್ಮಾಣ ಮಾಡಿ ಕೊಡಿ. ಏಕೆಂದರೆ, ಅಲ್ಲಿ ಬಹಳ ಜನರಿಗೆ ತೊಂದರೆಯಾಗುತ್ತಿದ್ದು, ಅಲ್ಲಿ ಓ.ಪಿ.ಡಿ.,ಗಳು ನಡೆಯುತ್ತಿವೆ, ನಮಗೆ ಓ.ಪಿ.ಡಿ.,ಗಳು ನಡೆದರೆ ಸಾಲದು, ಸರ್ಜರಿ ಮಾಡಿ ಮತ್ತೆ ಕೆ.ಆರ್. ಆಸ್ಪತ್ರೆಗೆ ಹಾಕಿಬಿಟ್ಟರೆ ಅಲ್ಲಿಂದ Nephrology ರವರು ಬಂದು ನೋಡಿಕೊಂಡು ಹೋಗುತ್ತಾರೆ. ಜಿಲ್ಲಾ ಆಸ್ಪತ್ರೆಯಲ್ಲಿ Nephrology Unit ಮಾಡುತ್ತಿಲ್ಲ. ಇಲ್ಲೇ ಮಾಡುತ್ತಿದ್ದಾರೆ. ಹಾಗಾಗಿ ಇಲ್ಲಿ ಕಟ್ಟಡ ಮಾತ್ರ ದೊಡ್ಡದಾಗಿದ್ದು, ಸೌಲಭ್ಯಗಳು ಸಿಗುತ್ತಿಲ್ಲ. 100 ಹಾಸಿಗೆ ಇರುವಂತಹ ಐ.ಸಿ.ಯು.ವನ್ನು ಕೂಡಲೇ ನಮಗೆ ಮಂಜೂರು ಮಾಡಿಕೊಟ್ಟರೆ ಮಕ್ಕಳು, ತಾಯಂದಿರು ಸಾಯುವುದು ಕಡಿಮೆಯಾಗುತ್ತದೆ. ಕೆ.ಆರ್. ಆಸ್ಪತ್ರೆಯಲ್ಲಿ ಸೌಲಭ್ಯಗಳು ಜಾಸ್ತಿಯಾಗುತ್ತದೆ. ಅಲ್ಲಿ ಡಯಾಲಿಸಿಸ್ ಸೆಂಟರ್‌ಗಳನ್ನು ಮಾಡಬೇಕು. ನರ್ಸ್‌ಗಳ ಕೊರತೆ ಬಹಳ ಜಾಸ್ತಿ ಇದ್ದು, ಮಾನ್ಯ ಸಚಿವರು ಹೊರ ಗುತ್ತಿಗೆದಾರರುಗಳನ್ನು ತೆಗೆದುಕೊಳ್ಳುತ್ತಿದ್ದಾರೆ.

ದಯಮಾಡಿ ಅದನ್ನು ಸ್ವಲ್ಪ ಮಾನಿಟರ್ ಮಾಡಬೇಕು. ಹೊರ ಗುತ್ತಿಗೆದಾರರುಗಳನ್ನು ತೆಗೆದುಕೊಳ್ಳುವುದರಲ್ಲಿಯೂ ಭ್ರಷ್ಟಾಚಾರವಾಗುತ್ತಿದೆ. ಆ ರೀತಿ ಆಗಬಾರದು. ಅದನ್ನು ಮಾನ್ಯ ಸಚಿವರು ಗಂಭೀರವಾಗಿ ಪರಿಗಣಿಸಬೇಕು.

**ವೈಸ್ ಛೇರ್ಮನ್:–** ಮಾನ್ಯ ಸಚಿವರೇ, ಮಾನ್ಯ ಸದಸ್ಯರು ಹೇಳಿರುವುದನ್ನು ಕನ್ಸಿಡರ್ ಮಾಡಿ.

**ಡಾ॥ ಶರಣಪ್ರಕಾಶ್ ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಎರಡು ವಿಚಾರಗಳ ಬಗ್ಗೆ ಹೇಳಿದ್ದಾರೆ. ಅಲ್ಲಿ ಡಯಾಲಿಸಿಸ್ ಸೆಂಟರ್ ಮಾಡಬೇಕೆಂದು ಹೇಳಿದ್ದಾರೆ. ಮೈಸೂರಿನಲ್ಲಿ Institute of Nephrology branch ಮಾಡುತ್ತಿದ್ದೇವೆ. 100 ಹಾಸಿಗೆಯುಳ್ಳ ಆಸ್ಪತ್ರೆಯನ್ನು ಮಾಡುತ್ತಿದ್ದೇವೆ. ಆ ಸಮಸ್ಯೆ ಬಗೆಹರಿಯುತ್ತದೆ. 100 ಹಾಸಿಗೆ ಇರುವಂತಹ ಐ.ಸಿ.ಯು.ವನ್ನು ಮಾಡಬೇಕು, ಅದಕ್ಕೆ ತಕ್ಕಂತೆ ಸಿಬ್ಬಂದಿಗಳನ್ನು ನೇಮಕ ಮಾಡಬೇಕೆಂದು ಅವರು ಮನವಿ ಮಾಡಿದ್ದಾರೆ. ಅದರ ಬಗ್ಗೆ ಖಂಡಿತವಾಗಿಯೂ ನಾನು ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳುತ್ತೇನೆ.

**ಪ್ರಶ್ನೆ ಸಂಖ್ಯೆ: 687**

**(ಉತ್ತರ ಲಗತ್ತಿಸಲಾಗಿದೆ)**

**ಶ್ರೀ ಹೆಚ್.ಎಸ್.ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರ ಜಿಲ್ಲೆಯಲ್ಲಿ ನಗರ ಪ್ರದೇಶಕ್ಕೆ ಹೊಂದಿಕೊಂಡಂತೆ ಕೈಗಾರಿಕಾ ಪ್ರದೇಶಗಳಲ್ಲಿ ವಿದ್ಯಾರ್ಥಿಗಳ ಕೊರತೆ ಇಲ್ಲ. ಅವಶ್ಯಕತೆಗಿಂತ ಹೆಚ್ಚು ವಿದ್ಯಾರ್ಥಿಗಳು ಇದ್ದಾರೆ. ಉದಾಹರಣೆಗೆ ಹೇಳುವುದಾದರೆ, ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದಲ್ಲಿ ಒಂದು ಶಾಲೆ ಇದೆ. ಆ ಶಾಲೆಯಲ್ಲಿ ಸುಮಾರು 2,000 ಜನರು ಇದ್ದಾರೆ. ಅಲ್ಲಿ CSR Funds ನಿಂದ ದೊಡ್ಡ ಶಾಲೆಯನ್ನು ಕಟ್ಟಿಸಿಕೊಟ್ಟಿದ್ದಾರೆ. ಅಲ್ಲಿ ಶಿಕ್ಷಕರ ಕೊರತೆ ಇದೆ. ಬೆಂಗಳೂರು ನಗರ ಜಿಲ್ಲೆಯ ಪ್ರೌಢ ಶಾಲೆಗಳಲ್ಲಿ ಕೇವಲ 180 ಅತಿಥಿ ಶಿಕ್ಷಕರುಗಳನ್ನು ಕೊಟ್ಟಿದ್ದು, ಪ್ರೌಢ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮದ ಕೊರತೆ ಇದೆ. ವಿಶೇಷವಾಗಿ ಕಾರ್ಮಿಕರು ವಾಸ ಮಾಡುವ ಜಾಗದಲ್ಲಿ ಕರ್ನಾಟಕದವರನ್ನು ಬಿಟ್ಟು ಹೊರಗಿನವರು ಜಾಸ್ತಿ ಜನರು ಇದ್ದಾರೆ. ಆದ್ದರಿಂದ ನಮಗೆ ಇಂಗ್ಲಿಷ್ ಮಾಧ್ಯಮದ ಶಾಲೆಗಳು ಬೇಕಾಗುತ್ತವೆ. ಉದಾಹರಣೆಗೆ ಹೇಳುವುದಾದರೆ, ಆನೇಕಲ್ಲು ತಾಲ್ಲೂಕಿನಲ್ಲಿ ಒಂದೇ ಒಂದು ಪಿ.ಯು. ಕಾಲೇಜು ಇಲ್ಲ. ಶಾಲೆಗಳಲ್ಲಿ ವಿದ್ಯಾರ್ಥಿಗಳ ಕೊರತೆ ಇಲ್ಲ. ನಮಗೆ ಇಂಗ್ಲಿಷ್ ಮಾಧ್ಯಮದ ಪ್ರೌಢಶಾಲೆ ಬೇಕು ಮತ್ತು ಪಿ.ಯು. ಕಾಲೇಜುಗಳು ಬೇಕು. ಇವು ಬೆಂಗಳೂರು ನಗರ ಜಿಲ್ಲೆಯಲ್ಲಿ ಕೊರತೆ ಇರುವಂಥದ್ದು. ನಾವು CSR Funds ನಲ್ಲಿ ಕಟ್ಟಡವನ್ನು ಕಟ್ಟಿಸಿಕೊಳ್ಳುತ್ತೇವೆ. ಆದರೆ, ನಮಗೆ ಶಿಕ್ಷಕರುಗಳ ಕೊರತೆ ಹೆಚ್ಚಾಗಿರುವುದರಿಂದ ಮಾನ್ಯ ಸಚಿವರು ಇದರ ಬಗ್ಗೆ ಗಮನಹರಿಸಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ಎಸ್.ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):-** ಮಾನ್ಯ ಸಭಾಪತಿಯವರೇ, ಅವರು ನಿರ್ದಿಷ್ಟವಾಗಿ ಒಂದು ಶಾಲೆಯಲ್ಲಿ ಅಡ್ಮಿಷನ್ ಜಾಸ್ತಿಯಾಗಿದೆ ಎಂದು ಹೇಳುತ್ತಿದ್ದಾರೆ.

**ಶ್ರೀ ಹೆಚ್.ಎಸ್.ಗೋಪಿನಾಥ್:-** ಮಾನ್ಯ ಸಭಾಪತಿಯವರೇ, ನಾನು ಒಂದು ಉದಾಹರಣೆ ಹೇಳಿದ್ದೇನೆ ಅಷ್ಟೆ. ಎಲ್ಲಾ ಕಡೆಗಳಲ್ಲೂ ಇದೆ.

**ಶ್ರೀ ಎಸ್.ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೇ, ಆ ರೀತಿ ಎಲ್ಲೆಲ್ಲಿ ಆಗಿದೆ ಅಲ್ಲಿ ನಾವು ಸರಿಯಾಗಿ ಶಿಕ್ಷಕರುಗಳನ್ನು ಕೊಡುತ್ತೇವೆ. ಇಡೀ ರಾಜ್ಯದಲ್ಲಿ ಶಿಕ್ಷಕರುಗಳ ಕೊರತೆ ಇರುವುದು ಮಾನ್ಯ ಸದಸ್ಯರಿಗೂ ಕೂಡ ಗೊತ್ತಿದೆ. ಈಗ 15,000 ಶಿಕ್ಷಕರುಗಳನ್ನು ನೇಮಕಾತಿ ಮಾಡಿಕೊಳ್ಳುತ್ತಿದ್ದೇವೆ. ಆದಷ್ಟು ಬೇಗ ಅದರ ಪ್ರಕ್ರಿಯೆಯನ್ನು ಪ್ರಾರಂಭ ಮಾಡುತ್ತೇವೆ. ಆದರೆ, ನಾವು ಅತಿಥಿ ಶಿಕ್ಷಕರುಗಳನ್ನು ಶಾಲೆ ಪ್ರಾರಂಭವಾದಾಗಿನಿಂದಲೇ ತೆಗೆದುಕೊಳ್ಳುತ್ತಿದ್ದೇವೆ. ಅವರನ್ನು ಬೆಂಗಳೂರಿನಲ್ಲೂ ಕೊಟ್ಟಿದ್ದೇವೆ, ಇಡೀ ರಾಜ್ಯದಲ್ಲಿ ಎಲ್ಲಾ ಶಾಲೆಗಳಲ್ಲೂ ಕೊಟ್ಟಿದ್ದೇವೆ. But, that is not a permanent solution. ಅದನ್ನು ಕೂಡ ನಾನು ಒಪ್ಪುತ್ತೇನೆ, ಇಲ್ಲ ಎಂದು ಹೇಳುವುದಿಲ್ಲ. ಆದರೆ ನಾವು ತಾತ್ಕಾಲಿಕವಾಗಿ ಮಾಡಲೇಬೇಕು. ಇಲ್ಲದಿದ್ದರೆ ಒಳ್ಳೆಯ

ಗುಣಮಟ್ಟದ ಶಿಕ್ಷಣ ಕೊಡುವುದಕ್ಕಾಗುವುದಿಲ್ಲ. ನಾವು ಹಂತ ಹಂತವಾಗಿ ಅತಿಥಿ ಶಿಕ್ಷಕರುಗಳನ್ನು ಕೊಡುವುದನ್ನು ವಿಳಂಬ ಮಾಡಿಬಿಟ್ಟರೆ ಬಹಳ ಕಷ್ಟವಾಗುತ್ತದೆ. ಈ ನಿರ್ದಿಷ್ಟವಾದ ಶಾಲೆ ಮತ್ತು ಬೇರೆ ಕಡೆಗಳಲ್ಲೂ ಅಡ್ಮಿಷನ್ ಜಾಸ್ತಿಯಾಗಿ ಶಿಕ್ಷಕರ ಕೊರತೆ ಇದೆ ಎನ್ನುವುದಾದರೆ ನಾನು ಮತ್ತೆ ಪರಿಶೀಲನೆ ಮಾಡುತ್ತೇನೆ. ಕೆಲವು ಶಾಲೆಗಳಲ್ಲಿ ಅಡ್ಮಿಷನ್ ತೃಪ್ತಿಕರವಾಗಿರುವಂತಹ ವಾತಾವರಣ ಪ್ರಾರಂಭವಾಗುತ್ತಿದೆ, ಇಲ್ಲ ಎಂದು ಹೇಳುತ್ತಿಲ್ಲ. ಆದರೆ ಸಂಪೂರ್ಣವಾಗಿ ಆಗಿಲ್ಲ. ಒಂದು ಕಡೆ ವಿಶ್ವಾಸ ಬರುತ್ತಿದೆ. ಅಲ್ಲಿ ಆಂಗ್ಲ ಮಾಧ್ಯಮ ಶಾಲೆ ಬೇಕು ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಕಳೆದ ಬಾರಿ ಇಡೀ ರಾಜ್ಯದಲ್ಲಿ ನಾವು 4,000 ಆಂಗ್ಲ ಮಾಧ್ಯಮವನ್ನು ಕೊಟ್ಟಿದ್ದು, ಕನ್ನಡ ಮಾಧ್ಯಮ ಶಾಲೆಗಳು ಮುಂದುವರೆಯುತ್ತದೆ. ಎಲ್.ಕೆ.ಜಿ. ಇದ್ದರೂ, ಇಂಗ್ಲಿಷ್ ಮಾಧ್ಯಮಕ್ಕೂ ಬೇಡಿಕೆ ಜಾಸ್ತಿ ಇತ್ತು. ಕೆಲವು ಜಿಲ್ಲೆಗಳಲ್ಲಿ ಇಂಗ್ಲಿಷ್ ಮಾಧ್ಯಮಕ್ಕೆ ಬಹಳ ಬೇಡಿಕೆ ಇತ್ತು, ಅಲ್ಲೂ ಕೂಡ ಕೊಡುತ್ತೇವೆ. ಮಾನ್ಯ ಸದಸ್ಯರು ಇಂಗ್ಲಿಷ್ ಮಾಧ್ಯಮವನ್ನು ಕೇಳುತ್ತಿದ್ದು, ಇಂಗ್ಲಿಷ್ ಮಾಧ್ಯಮ ಕೊಡುವುದನ್ನು ಕೊಟ್ಟಿದ್ದೇವೆ, ಆದರೆ ಕೆಲವು ಕಡೆ ಕ್ವಾಲಿಫೈಡ್ ಶಿಕ್ಷಕರು ಆಗಿರಲಿಲ್ಲ. ಈಗ ನಾವು ನೇಮಕಾತಿ ಮಾಡಿಕೊಳ್ಳಬೇಕಾದರೆ ಅದನ್ನು ಗಮನಕ್ಕೆ ತೆಗೆದುಕೊಳ್ಳುತ್ತೇವೆ. ಈ ಬಜೆಟ್‌ನಲ್ಲಿ ವಿಶೇಷವಾಗಿ ಇಂಗ್ಲಿಷ್ ಮಾಧ್ಯಮಕ್ಕೋಸ್ಕರ, ಅಂದರೆ ಶಿಕ್ಷಕರುಗಳಿಗೆ ಇಂಗ್ಲಿಷ್ ಕಲಿಕೆಯ ತರಬೇತಿ ಕೊಡುವುದಕ್ಕೆ ಪ್ರತ್ಯೇಕವಾಗಿ ಬಜೆಟ್ ಅಲೊಕೇಶನ್ ಇಟ್ಟಿದ್ದೇವೆ. ಅದರ ಖರ್ಚನ್ನು ಮತ್ತು ಕಾರ್ಯಕ್ರಮವನ್ನು ನಮ್ಮ ಇಲಾಖೆಯವರು ಈಗಾಗಲೇ ಪ್ರಾರಂಭ ಮಾಡಿಕೊಂಡಿರುವುದರಿಂದ ಸರಿಯಾಗುತ್ತದೆ. ಇಂಗ್ಲಿಷ್ ಮಾಧ್ಯಮ ಎಂದು ಘೋಷಣೆ ಮಾಡಿ, ಇಂಗ್ಲಿಷ್ ಹೇಳಿಕೊಡುವುದಕ್ಕೆ ಶಿಕ್ಷಕರಿಗೆ ವಿದ್ಯಾರ್ಹತೆ ಕಡಿಮೆ ಇತ್ತು, ಇಲ್ಲ ಎಂದು ಹೇಳುವುದಿಲ್ಲ. ನಾವು ಸುಮಾರು ಕಡೆ ಚರ್ಚೆ ಮಾಡಬೇಕಾದರೆ ಅದನ್ನೆಲ್ಲಾ ಹೇಳಿದ್ದಾರೆ. ಇಂಗ್ಲಿಷ್ ಮಾಧ್ಯಮಕ್ಕೆ ರೆಗ್ಯುಲರ್ ಶಿಕ್ಷಕರನ್ನು ಕೊಡುವುದರ ಜೊತೆಗೆ ಗುಣಮಟ್ಟದ ಶಿಕ್ಷಣವನ್ನು ಕೊಡುವುದಕ್ಕೆ ಶಿಕ್ಷಕರಿಗೆ ತರಬೇತಿ ಕೊಡುವಂತಹ ಕೆಲಸವನ್ನು ಒಳ್ಳೆಯ ರೀತಿಯಲ್ಲಿ ಮಾಡುತ್ತೇವೆ. ಬೆಂಗಳೂರು ನಗರ ಜಿಲ್ಲೆಯ ಸರ್ಕಾರಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳಿಗೆ ತೊಂದರೆಯಾಗಿದೆ ಎಂದು ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಅಲ್ಲಿ ಯಾವುದೇ ರೀತಿಯ ತೊಂದರೆ ಇಲ್ಲ. ಕರ್ನಾಟಕ ಪಬ್ಲಿಕ್ ಶಾಲೆ ಎಂದು ಬೇರೆ ಕಡೆ ಮಾಡಿರುವ ರೀತಿ ಬಿ.ಪಿ.ಎಸ್. (ಬೆಂಗಳೂರು ಪಬ್ಲಿಕ್ ಶಾಲೆ) ಎಂದು ಘೋಷಣೆ ಮಾಡಿ, ಅದಕ್ಕೆ ಅನುದಾನವನ್ನು ಕೊಟ್ಟು ಕೆಲಸ ಕೂಡ ಪ್ರಾರಂಭವಾಗಿದೆ. ಎಲ್ಲಿ ಹೆಚ್ಚುವರಿ ಮಕ್ಕಳ ಅಡ್ಮಿಷನ್ ಜಾಸ್ತಿಯಾಗುತ್ತಿದೆ, ಅಲ್ಲಿ ಕೊರತೆ ಏನಿದೆ, ಅಲ್ಲಿ ಆದಷ್ಟು ಬೇಗ ತೃಪ್ತಿಕರವಾಗಿರುವಂತಹ ಶಿಕ್ಷಕರುಗಳನ್ನು ಕೊಡುವಂತಹ ಕೆಲಸ ಮಾಡುತ್ತೇವೆ.

**ಶ್ರೀ ಹೆಚ್.ಎಸ್.ಗೋಪಿನಾಥ್:–** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರಿಗೆ ಕೇಳುವುದೇನೆಂದರೆ, ಕೆ.ಪಿ.ಎಸ್. ಶಾಲೆಗಳನ್ನು ಪ್ರಾರಂಭ ಮಾಡುತ್ತೇವೆ ಎಂದು ಹೇಳಿದ್ದಾರೆ. 2018 ರಿಂದ 2025 ರವರೆಗೆ 309 ಕೆ.ಪಿ.ಎಸ್. ಶಾಲೆಗಳಿವೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಬೆಂಗಳೂರು ನಗರ ಜಿಲ್ಲೆಯಲ್ಲಿ

ಕೆ.ಪಿ.ಎಸ್. ಶಾಲೆಗಳು ಎಷ್ಟಿವೆ ಅಥವಾ ಎಷ್ಟು ಕೆ.ಪಿ.ಎಸ್. ಶಾಲೆಗಳನ್ನು ಪ್ರಾರಂಭ ಮಾಡಬೇಕೆನ್ನುವ ಉದ್ದೇಶ ಇದೆ ಎಂದು ನಾನು ಕೇಳಬಯಸುತ್ತಿದ್ದೇನೆ. ನಾನು ಬೆಂಗಳೂರಿಗೆ ಸಂಬಂಧಪಟ್ಟ ಹಾಗೆ ಮಾತ್ರ ಕೇಳುತ್ತಿದ್ದೇನೆ.

**ಶ್ರೀ ಎಸ್.ಮಧು ಬಂಗಾರಪ್ಪ:–** ಮಾನ್ಯ ಸಭಾಪತಿಯವರೇ, ಕರ್ನಾಟಕ ಪಬ್ಲಿಕ್ ಶಾಲೆ ಎಂದರೆ ಗ್ರಾಮೀಣ ಭಾಗಕ್ಕೆ ಮಾತ್ರ ಇರುತ್ತದೆ.

**ಶ್ರೀ ಹೆಚ್.ಎಸ್.ಗೋಪಿನಾಥ್:–** ಮಾನ್ಯ ಸಚಿವರೇ, ನಾನು ಕೂಡ ಗ್ರಾಮೀಣ ಭಾಗದ ಬಗ್ಗೆ ಕೇಳುತ್ತಿದ್ದೇನೆ. ನಗರದ ಬಗ್ಗೆ ಕೇಳುತ್ತಿಲ್ಲ, ನಗರ ಜಿಲ್ಲೆ ಬಗ್ಗೆ ಕೇಳುತ್ತಿದ್ದೇನೆ.

**ಶ್ರೀ ಎಸ್.ಮಧು ಬಂಗಾರಪ್ಪ:–** ಮಾನ್ಯ ಸಭಾಪತಿಯವರೇ, ನಗರ ಜಿಲ್ಲೆಯಲ್ಲಿ ಎಷ್ಟೆಷ್ಟು ಇದೆ ಎಂಬುದರ ಬಗ್ಗೆ ಮಾಹಿತಿಯನ್ನು ಕೊಟ್ಟಿಲ್ಲವೆಂದರೆ ನಾನು ವೈಯಕ್ತಿಕವಾಗಿ ಮಾನ್ಯ ಸದಸ್ಯರಿಗೆ ಕಳುಹಿಸಿ ಕೊಡುತ್ತೇನೆ. ನಗರಕ್ಕೆ ಸೀಮಿತವಾಗಿ ಹೇಳುವುದಾದರೆ ಬಿ.ಪಿ.ಎಸ್. ಶಾಲೆ (ಬೆಂಗಳೂರು ಪಬ್ಲಿಕ್ ಶಾಲೆ) ಎಂದು ಇದೆ. ಇದರ ಬಗ್ಗೆಯೂ ಮಾಹಿತಿ ಕೊಡುತ್ತೇನೆ, ಬೆಂಗಳೂರು ಗ್ರಾಮಾಂತರದಲ್ಲೂ ಎಷ್ಟು ಶಾಲೆಗಳಿವೆ ಎಂದು ಮಾಹಿತಿಯನ್ನು ಕೊಡುತ್ತೇನೆ.

**ವೈಸ್ ಛೇರ್ಮನ್:–** ಮಾನ್ಯ ಸಚಿವರೇ, ಅವರು ಏನು ಮಾಹಿತಿಯನ್ನು ಕೇಳಿದ್ದಾರೆ ಅದನ್ನು ಅವರಿಗೆ ಕಳುಹಿಸಿ ಕೊಡಿ.

**ಶ್ರೀ ಎಸ್.ಮಧು ಬಂಗಾರಪ್ಪ:–** ಮಾನ್ಯ ಸಭಾಪತಿಯವರೇ, ಈಗ ನನ್ನ ಹತ್ತಿರ ಸದ್ಯಕ್ಕೆ ಮಾಹಿತಿ ಇಲ್ಲ, ಅವರು ಕೇಳಿರುವ ನಿರ್ದಿಷ್ಟ ಮಾಹಿತಿಯನ್ನು ಕಳುಹಿಸಿ ಕೊಡುತ್ತೇನೆ.

**ಶ್ರೀ ಹೆಚ್.ಎಸ್.ಗೋಪಿನಾಥ್:–** ನಾನು ಗ್ರಾಮಾಂತರ ಪ್ರದೇಶದ ಬಗ್ಗೆಯೂ ಮಾಹಿತಿ ಕೇಳಿದ್ದೇನೆ.

**ಶ್ರೀ ಎಸ್.ಮಧು ಬಂಗಾರಪ್ಪ:–** ನಾನು ಗ್ರಾಮಾಂತರ ಪ್ರದೇಶದ ಬಗ್ಗೆಯೂ ಮಾಹಿತಿ ಕಳುಹಿಸಿ ಕೊಡುತ್ತೇನೆ.

**ಪ್ರಶ್ನೆ ಸಂಖ್ಯೆ: 598**

**(ಉತ್ತರ ಲಗತ್ತಿಸಲಾಗಿದೆ)**

**ಶ್ರೀ ಗೋವಿಂದರಾಜು (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆ ಕೇಳಿರುವು ಮೂಲ ಉದ್ದೇಶವೇನೆಂದರೆ, ಇದು ಬಹಳ ಮುಖ್ಯವಾದ ಇಲಾಖೆಯಾಗಿದೆ. ಅವರು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ. ಬಹಳ ಮುಖ್ಯವಾಗಿ ನಮ್ಮ ಕೋಲಾರ ಜಿಲ್ಲೆಯನ್ನು ಅಭಿವೃದ್ಧಿ ಮಾಡುತ್ತಿದ್ದಾರೆ. ಅದರ ಬಗ್ಗೆ ನನ್ನದೇನೂ ಚರ್ಚೆ ಇಲ್ಲ. ಸುಮಾರು 6,000 ಬೋಧಕ ಹುದ್ದೆಗಳು ಖಾಲಿ ಇವೆ ಎಂದು ಸಾಕಷ್ಟು ಪತ್ರಿಕೆಗಳಲ್ಲಿ ದಿನನಿತ್ಯ ಸುದ್ದಿಯಾಗುತ್ತಿದೆ. ಇವತ್ತು ಮಾನ್ಯ ಉನ್ನತ ಶಿಕ್ಷಣ ಸಚಿವರು ಖಾಲಿ ಇರುವ ಹುದ್ದೆಗಳಲ್ಲಿ ಅತಿಥಿ ಉಪನ್ಯಾಸಕರು ಕೆಲಸ ಮಾಡುತ್ತಿದ್ದಾರೆ ಎಂದು ಅವರನ್ನು ಕೂಡ ಲೆಕ್ಕಕ್ಕೆ ತೆಗೆದುಕೊಂಡು ಖಾಲಿ ಇರುವ ಹುದ್ದೆಗಳನ್ನು ಕಡಿಮೆ ತೋರಿಸುತ್ತಿದ್ದಾರೆ. ಅತಿಥಿ ಉಪನ್ಯಾಸಕರು ನೇಮಕಾತಿ ಆಗಿ 10–15 ವರ್ಷಗಳಾದರೂ ಕೂಡ ಅವರು ಅತಿಥಿ ಉಪನ್ಯಾಸಕರಾಗಿಯೇ ಕೆಲಸ ಮಾಡುತ್ತಿದ್ದಾರೆ. ನನ್ನ ಹತ್ತಿರ ಇರುವ ಮಾಹಿತಿ ಪ್ರಕಾರ 32 ವಿಶ್ವವಿದ್ಯಾಲಯಗಳಲ್ಲಿ 4,705 ಹುದ್ದೆಗಳು ಮಂಜೂರಾಗಿದ್ದು, ಅದರಲ್ಲಿ 1,705 ಹುದ್ದೆಗಳನ್ನು ಮಾತ್ರ ಭರ್ತಿ ಮಾಡಿದ್ದಾರೆ. ಸುಮಾರು 3,000 ಹುದ್ದೆಗಳು ಖಾಲಿ ಇವೆ. ಬೋಧಕೇತರ ಹುದ್ದೆಗಳಲ್ಲಿ 9,107 ಹುದ್ದೆಗಳು ಖಾಲಿ ಇದ್ದು, ಅದರಲ್ಲಿ 2,818 ಹುದ್ದೆಗಳನ್ನು ಭರ್ತಿ ಮಾಡಿದ್ದಾರೆ. 6,289 ಹುದ್ದೆಗಳು ಖಾಲಿ ಇವೆ. ಒಳ ಮೀಸಲಾತಿ ಬಗ್ಗೆ ಇನ್ನು ತೀರ್ಮಾನವಾಗದೇ ಇರುವುದರಿಂದ ಹುದ್ದೆಗಳನ್ನು ಭರ್ತಿ ಮಾಡಿಲ್ಲ ಎಂದು ಉತ್ತರದಲ್ಲಿ ಕಾರಣವನ್ನು ಕೊಟ್ಟಿದ್ದಾರೆ. ಅದಲ್ಲದೇ, ಮಾನ್ಯ ಉಪ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಂಪುಟ ಉಪ ಸಮಿತಿಯನ್ನು ಮಾಡಿದ್ದಾರೆ. ಅಲ್ಲಿ ಚರ್ಚೆಯ ಹಂತದಲ್ಲಿದ್ದು, ಅವರ ಅಂತಿಮ ವರದಿಯನ್ನು ಎದುರು ನೋಡುತ್ತಿದ್ದೇವೆ. ಅದರ ವರದಿ ಬಂದ ಮೇಲೆ ನಾವು ಹುದ್ದೆಗಳನ್ನು ಭರ್ತಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಮಾನ್ಯ ಸಚಿವರು ಉನ್ನತ ಶಿಕ್ಷಣ ಸಚಿವರಾಗಿ ಸುಮಾರು ಮೂರು ವರ್ಷಗಳಾಗಿವೆ. ನನ್ನ ಬಹಳ ಮುಖ್ಯವಾದ ಪ್ರಶ್ನೆ ಏನೆಂದರೆ, ತಾಂತ್ರಿಕ ಕಾಲೇಜುಗಳು ಅಂದರೆ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು ಬಹಳ ಕಡಿಮೆ ಇವೆ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು ಖಾಸಗಿ ಕಾಲೇಜುಗಳಿಗೆ ಅಪ್ರೂವಲ್ ಕೊಡುವುದಕ್ಕಾಗಿಯೇ ಇದೆ ಹೊರತು ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳನ್ನು ಕೊಡುವುದಕ್ಕೆ, ಅಲ್ಲಿ ಬೋಧಕ ಸಿಬ್ಬಂದಿಗಳನ್ನು ನೇಮಕಾತಿ ಮಾಡಿ, ಅಡ್ಮಿಷನ್ ಜಾಸ್ತಿ ಮಾಡುವುದಕ್ಕೆ ಈ ಇಲಾಖೆ ವಿಫಲವಾಗಿದೆ ಎನ್ನುವುದು ನನ್ನ ಆರೋಪವಾಗಿದೆ. 2023–24 ರಲ್ಲಿ ಕೇವಲ 4,50,957 ವಿದ್ಯಾರ್ಥಿಗಳು ಅಡ್ಮಿಷನ್ ಆಗಿದ್ದರು. 2025–26ರಲ್ಲಿ ಕೇವಲ 2,47,534 ವಿದ್ಯಾರ್ಥಿಗಳು ಮಾತ್ರ ಅಡ್ಮಿಷನ್ ಆಗಿದ್ದಾರೆ. ಇದನ್ನು ನೋಡಿದರೆ ಸರ್ಕಾರದ ಕಾಲೇಜುಗಳಲ್ಲಿ ಗುಣಮಟ್ಟ ಅಭಿವೃದ್ಧಿಪಡಿಸುವುದಕ್ಕೆ ಪ್ರಯತ್ನ ಮಾಡಿಲ್ಲ ಎಂದು ಅನಿಸುತ್ತಿದೆ. ಆದ್ದರಿಂದ,

ಮೂಲಭೂತ ಸೌಕರ್ಯಗಳು ಮತ್ತು ಬೋಧಕ ಸಿಬ್ಬಂದಿ, ಬೋಧಕೇತರ ಸಿಬ್ಬಂದಿಗಳನ್ನು ಕೂಡಲೇ ನೇಮಕಾತಿ ಮಾಡಿ ಒಳ್ಳೆಯ ಗುಣಮಟ್ಟದ ಶಿಕ್ಷಣವನ್ನು ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

(ಮುಂದು)

**(246) 09/03/2026 12:20 ಎಸ್‌ಪಿಆರ್/ವಿಕೆ (ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಡಾ॥ ಎಂ.ಸಿ.ಸುಧಾಕರ್ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೆ, ಗೌರವಾನ್ವಿತ ಸದಸ್ಯರು ನೀಡಿರುವ ಮಾಹಿತಿಯು ನಮ್ಮ ಗಮನದಲ್ಲಿದೆ. ಸದಸ್ಯರು ಇಲ್ಲಿ ಸ್ಪಷ್ಟವಾದ ಮಾಹಿತಿಯನ್ನು ಹೇಳಿದ್ದಾರೆ.

**ವೈಸ್ ಛೇರ್ಮನ್:-** ಅವರು ನಿಮ್ಮನ್ನು ಬಹಳ appreciate ಮಾಡಿದ್ದಾರೆ.

**ಡಾ॥ ಎಂ.ಸಿ.ಸುಧಾಕರ್:-** ಮಾನ್ಯ ಸಭಾಪತಿಯವರೆ, ಸದಸ್ಯರು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕೇಳಿದ್ದು, ಅದನ್ನು ನಾನು ಸ್ವಾಗತಿಸುತ್ತೇನೆ. ಈಗಾಗಲೇ ಸದಸ್ಯರು ವಿಶ್ವವಿದ್ಯಾಲಯಗಳಲ್ಲಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಬಗ್ಗೆ ಹೇಳಿದ್ದಾರೆ. ತಮಗೆಲ್ಲಾ ಗೊತ್ತಿರುವಂತೆ ಮಾನ್ಯ ಮುಖ್ಯಮಂತ್ರಿಗಳು ಕಳೆದ ಶುಕ್ರವಾರದಂದು ಪ್ರಸಕ್ತ ಸಾಲಿನ ಆಯವ್ಯಯವನ್ನು ಮಂಡನೆ ಮಾಡಿದ್ದಾರೆ. ಆ ಸಂದರ್ಭದಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಕಳೆದ ವರ್ಷವೂ ಸಹ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಗೆ 2,000 ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದರು. ಈಗ ವಿಳಂಬವಾಗಿದೆ; ಇದರ ಕಾರಣಗಳೂ ಎಲ್ಲರಿಗೂ ಸಹ ಗೊತ್ತಿದೆ. ಆ ಪೈಕಿ ನಾವು ಈಗ ತಾಂತ್ರಿಕ ಶಿಕ್ಷಣ ಇಲಾಖೆಗೆ ಹೆಚ್ಚು ಆದ್ಯತೆಯನ್ನು ಕೊಡುವ ಕೆಲಸವನ್ನು ಮಾಡುತ್ತಿದ್ದೇವೆ. ಏಕೆಂದರೆ, ಎ.ಐ.ಸಿ.ಟಿ.ಇ.ಯ ಬಹಳ ಸ್ಪಷ್ಟವಾದ ಕೆಲವು ನಿರ್ಬಂಧಗಳು ಇರುವುದರಿಂದ ನಿರ್ದಿಷ್ಟ ಸಮಯದಲ್ಲಿ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ನಾವು ಅವರಿಗೆ undertaking ಅನ್ನು ನೀಡಿದ್ದೇವು. ಈ ಹಿಂದಿನ ಸರ್ಕಾರದ ಅವಧಿಯಲ್ಲಿ ಹಾಗೂ ನಮ್ಮ ಪಕ್ಷದ ಸರ್ಕಾರದ ಅವಧಿಯಲ್ಲಿಯೂ ಸಹ ಇದನ್ನು ನೀಡಲಾಗಿತ್ತು. ಹೀಗಾಗಿ ನಾವು ಇದರಲ್ಲಿ ಹೆಚ್ಚಿನ ಆದ್ಯತೆಯನ್ನು ಪಾಲಿಟೆಕ್ನಿಕ್‌ಗೆ ನೀಡುತ್ತಿದ್ದೇವೆ. ಅಂದರೆ, ಪಾಲಿಟೆಕ್ನಿಕ್‌ನಲ್ಲಿರುವ ಸುಮಾರು 941 ಬೋಧಕರ ಹುದ್ದೆಗಳನ್ನು ಅಂದರೆ ಶೇಕಡ 80 ರಷ್ಟು ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ನಾವು ಈಗ ಕ್ರಮವನ್ನು ವಹಿಸುತ್ತಿದ್ದೇವೆ. ಸದಸ್ಯರು ಹೇಳಿದಂತೆ, ಸುಮಾರು 17 ಸರ್ಕಾರಿ ಇಂಜನಿಯರಿಂಗ್ ಕಾಲೇಜುಗಳಲ್ಲಿ ಸುಮಾರು 186 ಹುದ್ದೆಗಳನ್ನು ಭರ್ತಿ ಮಾಡುವ ಕೆಲಸವನ್ನು ಮಾಡುತ್ತಿದ್ದೇವೆ. U.V.C.E. ವಿಶ್ವವಿದ್ಯಾಲಯಕ್ಕೆ 47 ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿಯನ್ನು ನೀಡಲಾಗಿದೆ. ಕಾಲೇಜು ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ, ಸುಮಾರು 826 ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಆರ್ಥಿಕ ಇಲಾಖೆಯು ಈಗಾಗಲೇ ಅನುಮೋದನೆಯನ್ನು ನೀಡಿದೆ. ಈ ಪ್ರಕ್ರಿಯೆಗಳನ್ನು ಸದ್ಯದಲ್ಲಿಯೇ ಪ್ರಾರಂಭಿಸುತ್ತೇವೆ. ವಿಶ್ವವಿದ್ಯಾಲಯಗಳ ವಿಚಾರ ಬಂದಾಗ ಸುಮಾರು ಶೇಕಡಾ 63-64 ರಷ್ಟು ಕೊರತೆ ಇದೆ. ಇದನ್ನು ನಾವು ಬಹಳ ಗಂಭೀರವಾಗಿ ಪರಿಗಣಿಸಿದ್ದು, ಉಪ ಮುಖ್ಯಮಂತ್ರಿಗಳ ಸಂಪುಟದ ಉಪ ಸಮಿತಿಯ ಮುಖಾಂತರ ಇದರ ಬಗ್ಗೆ ಬಹಳವಾಗಿ ಚರ್ಚಿಸಿದ ನಂತರ, ಇದರ ಬಗ್ಗೆ ಮುಖ್ಯಮಂತ್ರಿಗಳ ಗಮನಕ್ಕೆ ತಂದ ಕೂಡಲೇ, ಅವರ ಪ್ರಸಕ್ತ

ಸಾಲಿನ ಆಯವ್ಯಯದಲ್ಲಿ, ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಸುಮಾರು 2,991 ಅಂದರೆ ಸರಿ ಸುಮಾರು ಮೂರು ಸಾವಿರ ಹುದ್ದೆಗಳನ್ನು ಹಂತ ಹಂತವಾಗಿ ಭರ್ತಿ ಮಾಡುವುದಕ್ಕೆ ಹೇಳಿದ್ದು, ಆ ಪೈಕಿ ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಸುಮಾರು ಒಂದು ಸಾವಿರ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಘೋಷಣೆ ಮಾಡಿದ್ದಾರೆ. ಹೀಗಾಗಿ ಇದರ ಬಗ್ಗೆ ನಾವು ವಿಶ್ವವಿದ್ಯಾಲಯಗಳ ಕುಲಪತಿಗಳ ಜೊತೆಗೆ ಈಗಾಗಲೇ ಚರ್ಚೆ ಮಾಡಿದ್ದೇವೆ. ಈ ಹಿಂದೆ ಯಾವ ಹುದ್ದೆಗಳು ಮಂಜೂರು ಆಗಿದ್ದವೋ, ಆ ಪೈಕಿ ಎಷ್ಟೋ ವಿಷಯಗಳು ಈಗ ಪ್ರಸ್ತುತ ಇಲ್ಲ ಹಾಗೂ ಅಷ್ಟರ ಮಟ್ಟಿಗೆ ದಾಖಲಾತಿಗಳಾಗುತ್ತಿಲ್ಲ. ಹೀಗಾಗಿ ಈಗ ಪ್ರಾರಂಭಿಸಿರುವ emerging courses ಗಳು ಏನಿವೆಯೋ, ಅಲ್ಲಿ ಹುದ್ದೆಗಳನ್ನು ಮಂಜೂರು ಮಾಡಿ, ಅದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂಬ ತೀರ್ಮಾನವನ್ನು ಮಾಡಿದ್ದೇವೆ. ಇದನ್ನು rationalize ಮಾಡಿಕೊಂಡು, ಒಂದು ಸಾವಿರ ಹುದ್ದೆಗಳನ್ನು ಅದಕ್ಕೆ ಸೀಮಿತವಾಗಿ ಭರ್ತಿ ಮಾಡುವುದನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದೆ. ಈಗಾಗಲೇ ಇದಕ್ಕೆ ಅನುಮತಿಯನ್ನು ನೀಡಿರುವುದರಿಂದ, ಇದನ್ನು ಆದಷ್ಟು ತ್ವರಿತವಾಗಿ ಆ ಪ್ರಕ್ರಿಯೆಗಳನ್ನು ಪ್ರಾರಂಭಿಸುತ್ತೇವೆ. ಒಟ್ಟಾರೆಯಾಗಿ ಸದಸ್ಯರು ಹೇಳುತ್ತಿರುವುದು ಏನೆಂದರೆ, ಉನ್ನತ ಶಿಕ್ಷಣದ ಗುಣಮಟ್ಟವನ್ನು ಕಾಯ್ದುಕೊಳ್ಳಬೇಕಾದರೆ, ಅಲ್ಲಿ ಇಲಾಖೆಯ ಖಾಯಂ ಸಿಬ್ಬಂದಿ ಇರಬೇಕಾಗಿರುವುದು ಬಹಳ ಮುಖ್ಯವಾಗಿದೆ. ಏಕೆಂದರೆ, ಅಲ್ಲಿ ಸಂಶೋಧನೆ ಮತ್ತಿತರೆಗಳನ್ನು ಮಾಡುವುದಕ್ಕೆ ಖಾಯಂ ಸಿಬ್ಬಂದಿ ಇದ್ದರೆ ಮಾತ್ರವೇ ಸಾಧ್ಯವಾಗುತ್ತದೆ. ನಾವು ಇವತ್ತಿನ ದಿವಸ ಅತಿಥಿ ಸಿಬ್ಬಂದಿಗಳನ್ನು ಬಳಸಿಕೊಂಡು, ಕಾಲೇಜುಗಳನ್ನು ನಡೆಸುತ್ತಿದ್ದೇವೆ. ಆದರೆ, ಆ ಸಮಸ್ಯೆಗೆ ಇದು ಶಾಶ್ವತವಾದ ಪರಿಹಾರವಲ್ಲ. ಯು.ಜಿ.ಸಿ. ಯವರೂ ಸಹ ಶೇಕಡಾ 20 ರಷ್ಟು ಅತಿಥಿ ಸಿಬ್ಬಂದಿಗಳ ಹುದ್ದೆಗಳನ್ನು ಮಾತ್ರವೇ ಭರ್ತಿ ಮಾಡುವುದಕ್ಕೆ ಅನುಮತಿಯನ್ನು ನೀಡುತ್ತಾರೆ. ಇತ್ತೀಚೆಗೆ ಸರ್ವೋಚ್ಚ ನ್ಯಾಯಾಲಯವು ತೀರ್ಪುವೊಂದನ್ನು ಹೊರಡಿಸಿದೆ. Rate of suicidal death in Universities ವಿಚಾರದಲ್ಲಿ ತೀರ್ಪು ಹೊರಡಿಸಿದ ಸಂದರ್ಭದಲ್ಲಿ ಈ ಅಂಶವನ್ನೂ ಸಹ ಉಲ್ಲೇಖಿಸಲಾಗಿದೆ. Faculty positions ಬಗ್ಗೆ ಸರ್ವೋಚ್ಚ ನ್ಯಾಯಾಲಯ ಪೀಠವು ಬಹಳ ಗಂಭೀರವಾದ ಸೂಚನೆಗಳನ್ನು ಇಡೀ ದೇಶಕ್ಕೆ ನೀಡಿದೆ. ಇವುಗಳೆಲ್ಲವೂ ನಮ್ಮ ಗಮನದಲ್ಲಿವೆ. ಹೀಗಾಗಿ ನಾವು ಈ ವಿಷಯವನ್ನು ಬಹಳ ಗಂಭೀರವಾಗಿ ಪರಿಗಣಿಸಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳೂ ಸಹ ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಹೀಗಾಗಿ ನಾನು ಈ ಸಂದರ್ಭದಲ್ಲಿ ಅವರಿಗೆ ಧನ್ಯವಾದಗಳನ್ನು ಹೇಳಬೇಕಾಗುತ್ತದೆ. ಏಕೆಂದರೆ, ಬಹಳ ವರ್ಷಗಳಿಂದಲೂ ಆಗದೇ ಇರುವುದಕ್ಕೆ ಅವರು ಈಗ ಅವಕಾಶ ಮಾಡಿಕೊಟ್ಟಿದ್ದಾರೆ. ಈ ವಿಷಯದಲ್ಲಿ ಸರ್ಕಾರವು ಕ್ರಮ ವಹಿಸುತ್ತಿದೆ ಎನ್ನುವ ಮಾತನ್ನು ನಾನು ಸದಸ್ಯರಿಗೆ ಹೇಳಬಯಸುತ್ತೇನೆ.

**ಶ್ರೀ ಗೋವಿಂದರಾಜು (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಉನ್ನತ ಶಿಕ್ಷಣ ಸಚಿವರು ನಮ್ಮ ಅವಿಭಾಜ್ಯ ಜಿಲ್ಲೆಯವರಾಗಿದ್ದಾರೆ. ನಾವು ಮತ್ತು ಅವರ ತಂದೆಯವರು ಓದಿದ ಕಾಲೇಜು ಈ ಮೊದಲು ಬಹಳ ಉನ್ನತ ಮಟ್ಟದ ಕಾಲೇಜು ಆಗಿತ್ತು. ಆದರೆ, ಇವತ್ತಿನ ದಿವಸ ಆ ಕಾಲೇಜಿಗೆ ಯಾವ ಸ್ಥಿತಿ ಬಂದಿದೆ?

ಇದರ ಬಗ್ಗೆ ಸಚಿವರಿಗೆ ಎಲ್ಲಾ ರೀತಿಯಾದ ಮಾಹಿತಿ ಇದೆ. ಹೀಗಾಗಿ ನಾನು ಈ ವಿಚಾರದಲ್ಲಿ ಒತ್ತಾಯಿಸಲು ಕಾರಣವೇನೆಂದರೆ, ನಾನು ಕೋಲಾರ ಜಿಲ್ಲೆಯವನಾಗಿದ್ದು, ಕೋಲಾರದಲ್ಲಿನ ಬಾಯ್ಸ್ ಕಾಲೇಜು ಎಂದರೆ, ಒಂದು ಕಾಲದಲ್ಲಿ ಅದಕ್ಕೆ ಅದರದ್ದೇ ಆದ ಇತಿಹಾಸವಿತ್ತು. ಆದರೆ, ಇವತ್ತಿನ ದಿವಸ ಅದು ಕೇವಲ ರಾತ್ರಿ ಹೊತ್ತು ಅಡ್ಡಾದಿಡ್ಡಿ ಓಡಾಡುತ್ತಿರುವವರಿಗೆ ಕುಳಿತುಕೊಳ್ಳುವ ಜಾಗವಾಗಿದೆ ಬಿಟ್ಟರೆ..., ಅಲ್ಲಿನ ಬಹಳ ಮುಖ್ಯವಾದ ವಿಚಾರವನ್ನು ನಾನು ಹೇಳಿದೆ. ಇಡೀ ಕರ್ನಾಟಕದಲ್ಲಿ 4,50,957 ರಷ್ಟು ದಾಖಲಾತಿಗಳು ಇತ್ತು. ಆದರೆ, ಇವತ್ತಿನ ದಿವಸ ಅದು ಶೇಕಡಾ 50 ರಷ್ಟು ಆಗಿದೆ. ಅಂದರೆ, ಬರಬರುತ್ತಾ, ಈ ರೀತಿಯಾಗಿ ಆದರೆ, ಸರ್ಕಾರಿ ಕಾಲೇಜುಗಳು ಅದರದ್ದೇ ಆದ ಗೌರವವನ್ನು ಕಳೆದುಕೊಳ್ಳುತ್ತವೆ. ಬಹಳ ಮುಖ್ಯವಾಗಿ ಹೇಳುವುದಾದರೆ, ಕೋಲಾರದ ಮಹಿಳಾ ಕಾಲೇಜಿನಲ್ಲಿ 3,600 ಹೆಣ್ಣು ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ. ಕನಿಷ್ಠ ಇಂತಹ ಕಾಲೇಜುಗಳಿಗಾದರೂ ಸಹ ಸರ್ಕಾರವು ಪೂರ್ಣ ಪ್ರಮಾಣದಲ್ಲಿ ಕೂಡಲೇ ಬೋಧಕ ಸಿಬ್ಬಂದಿಗಳನ್ನು ನೀಡಬೇಕು. ಕೋಲಾರದ ಬಾಯ್ಸ್ ಕಾಲೇಜಿನಲ್ಲಿ ಇವತ್ತಿನ ದಿವಸ ವಿದ್ಯಾರ್ಥಿಗಳ ದಾಖಲಾತಿಗಳೇ ಆಗುತ್ತಿಲ್ಲ. ಹೀಗಾಗಿ ಅಲ್ಲಿಯೂ ಸಹ ಸರ್ಕಾರವು ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು. ಅಲ್ಲಿ ಹೊಸ ಬಿಲ್ಡಿಂಗ್ ಅನ್ನು ಸರ್ಕಾರವು ನಿರ್ಮಿಸುತ್ತಿದ್ದು, ಅದು ಬಹಳ ಸಂತೋಷದ ಸಂಗತಿಯಾಗಿದೆ. ಅದಕ್ಕೆ ಸರ್ಕಾರವು 40 ಕೋಟಿ ರೂಪಾಯಿಗಳಷ್ಟು ಅನುದಾನವನ್ನು ನೀಡಿದೆ. I will appreciate you on behalf of the community of Kolar. ಇದರಲ್ಲಿ ಎರಡನೇ ಮಾತಿಲ್ಲ. ಕೂಡಲೇ ಸರ್ಕಾರವು ಅಲ್ಲಿಗೆ ಬೋಧಕ ಸಿಬ್ಬಂದಿಗಳನ್ನು ನೇಮಕ ಮಾಡಿ, ಈ ಹಿಂದೆ ಆ ಕಾಲೇಜಿನಲ್ಲಿ ಒಳ್ಳೆಯ ರೀತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರೋ, ಅದಕ್ಕೆ ಈಗ ಅವಕಾಶ ಮಾಡಿಕೊಡಬೇಕೆಂದು ಕೋಲಾರ ಜಿಲ್ಲೆಯ ಜನರ ಪರವಾಗಿ ನಾನು ಒತ್ತಾಯಿಸುತ್ತೇನೆ.

**ವೈಸ್ ಛೇರ್ಮನ್:–** ಸಚಿವರೇ, ತಾವು ಒಂದು ಸಲ ಸದಸ್ಯರನ್ನು ಕರೆದು, ಅವರೊಂದಿಗೆ ಮಾತನಾಡಿ.

**ಡಾ॥ ಎಂ.ಸಿ.ಸುಧಾಕರ್:–** ಮಾನ್ಯ ಸಭಾಪತಿಯವರೆ, ಸದಸ್ಯರು ಹೇಳುತ್ತಿರುವಂತೆ, ಇವತ್ತಿನ ದಿವಸ ಇಡೀ ರಾಜ್ಯದಲ್ಲಿ Gross Enrolment Ratio ಸಮಸ್ಯೆ ಇದೆ. ನಾವು ಇದನ್ನು ಯಾವ ರೀತಿಯಾಗಿ ವೃದ್ಧಿ ಮಾಡಬೇಕೆಂದು ವಿಚಾರ ಮಾಡುತ್ತಿದ್ದೇವೆ. Emerging courses ಗಳು ಯಾವು ಇವೆ; ನಮ್ಮ ಪಕ್ಷದ ಸರ್ಕಾರವು ಅಧಿಕಾರಕ್ಕೆ ಬಂದ ಮೇಲೆ, ಬಿ.ಸಿ.ಎ., ಬಿ.ಬಿ.ಎ., ಒಳಗೊಂಡಂತೆ ಇನ್ನಿತರೆ ಬೇಡಿಕೆ ಇರುವಂತಹ ಸುಮಾರು ಕೋರ್ಸ್‌ಗಳನ್ನು..., ಇವತ್ತಿನ ದಿವಸ ಬೋಧಕರ ಲಭ್ಯತೆ ಇದೆಯೋ ಅಥವಾ ಇಲ್ಲವೋ ಎನ್ನುವಂಥದ್ದಲ್ಲ. ಇವತ್ತಿನ ದಿವಸ ಅತಿಥಿ ಬೋಧಕರನ್ನು ಇಟ್ಟುಕೊಂಡು ತರಗತಿಗಳನ್ನು ನಡೆಸುವ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ಕಳೆದ ಮೂರು ವರ್ಷಗಳ ಅವಧಿಯಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಅಂದರೆ, ಇಡೀ ರಾಜ್ಯದ ಎಲ್ಲಾ ಕಡೆಗಳಲ್ಲಿ ಬಿ.ಸಿ.ಎ., ಬಿ.ಬಿ.ಎ., ಬಿ.ಕಾಂ. ಗಳಂತಹ ಬೇಡಿಕೆಯುಳ್ಳ ಕೋರ್ಸ್‌ಗಳನ್ನು ಮಾಡಿದ್ದೇವೆ. ಇವತ್ತಿನ ದಿವಸ ಬಿ.ಕಾಂ. ಕೋರ್ಸ್‌ಗೆ ಹೆಚ್ಚು ಒತ್ತಡವೂ ಸಹ ಇದೆ. ಇಂತಹ ಎಲ್ಲಾ ಕೋರ್ಸ್‌ಗಳನ್ನು ಮಾಡುವ ಕೆಲಸಗಳನ್ನು ನಾವು ಮಾಡಿದ್ದೇವೆ. ಈಗ ನಾವು ಎ.ಇ.ಡಿ.ಪಿ. ಪ್ರೋಗ್ರಾಮ್ ಅನ್ನು ನಾವು ಪ್ರಾರಂಭಿಸಿದ್ದೇವೆ.

**ವೈಸ್ ಛೇರ್ಮನ್:–** ನಿಮ್ಮ ಜಿಲ್ಲೆಯ ಮಹಿಳಾ ಕಾಲೇಜಿನ ಬಗ್ಗೆ ಸದಸ್ಯರು ಪ್ರಶ್ನಿಸಿ, ಮಾತನಾಡುತ್ತಿದ್ದಾರೆ. ಇದರ ಬಗ್ಗೆ ನೀವು ಗಮನಹರಿಸಿ.

**ಡಾ॥ ಎಂ.ಸಿ.ಸುಧಾಕರ್:–** ಮಾನ್ಯ ಸಭಾಪತಿಯವರೆ, ಕೋಲಾರದ ಮಹಿಳಾ ಮತ್ತು ಬಾಯ್ಸ್ ಕಾಲೇಜುಗಳ ಬಗ್ಗೆ ಸದಸ್ಯರೇ ಹೇಳದಂತೆ, ನಮ್ಮದು ಬೇರೆ ಜಿಲ್ಲೆಯಾಗಿದ್ದರೂ ಸಹ ಕೋಲಾರದ ಜೊತೆಗೆ ನಾವು ಒಂದು ರೀತಿಯ ಬಾಂಧವ್ಯವನ್ನು ಹೊಂದಿದ್ದೇವೆ. ಕೋಲಾರ ಜಿಲ್ಲೆಯು ನಮ್ಮ ಜಿಲ್ಲೆ ಎಂಬುದಾಗಿ ನಾನು ಬಹಳ ಹೆಮ್ಮೆಯಿಂದ ಹೇಳುತ್ತೇನೆ. ಒಂದೊಂದು ಕಾಲೇಜಿಗೆ 40 ಕೋಟಿ ರೂಪಾಯಿಗಳಂತೆ, 40+40 ಎಂಬಂತೆ ಎರಡೂ ಕಾಲೇಜುಗಳಗೆ ಸೇರಿ ಒಟ್ಟು 80 ಕೋಟಿ ರೂಪಾಯಿಗಳನ್ನು ನೀಡಲಾಗಿದೆ. ರಾಜ್ಯದಲ್ಲಿ ಎಲ್ಲಿಯೂ ಸಹ ಈ ರೀತಿಯಾದ ಅನುದಾನವನ್ನು ಕೊಟ್ಟಿಲ್ಲ. ಸುಸಜ್ಜಿತವಾದ ಕಟ್ಟಡ ಹಾಗೂ ಅದಕ್ಕೆ ಮೂಲಭೂತವಾದ ಸೌಲಭ್ಯವನ್ನು ಮಾಡಲಾಗುತ್ತಿದೆ. ಅದೇ ರೀತಿಯಾಗಿ ನಾವು ಬೋಧಕ ಸಿಬ್ಬಂದಿಗಳ ವಿಚಾರದಲ್ಲಿಯೂ ಸಹ ಬಹಳ ಗಂಭೀರವಾಗಿ ತೆಗೆದುಕೊಳ್ಳಲಾಗುತ್ತಿದೆ. ಖಂಡಿತವಾಗಿಯೂ ಸಹ ಸದಸ್ಯರು ಹೇಳುತ್ತಿರುವ ವಿಚಾರದ ಬಗ್ಗೆ ನಾವು ಗಮನವನ್ನು ಹರಿಸಿದ್ದೇವೆ. ಮುಂದಿನ ದಿನಗಳಲ್ಲಿ ಇವುಗಳೆಲ್ಲವನ್ನೂ ಸರಿ ಮಾಡುವ ಕೆಲಸಗಳನ್ನು ನಾವು ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ: 710**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನಾನು ಕರ್ನಾಟಕ ಪಬ್ಲಿಕ್ ಶಾಲೆಗಳ ಬಗ್ಗೆ ಪ್ರಶ್ನೆಯನ್ನು ಕೇಳಿದ್ದು, ಅದಕ್ಕೆ ಸರ್ಕಾರವು ಉತ್ತರಿಸಿದೆ. ಸಚಿವರ ಪರಿಕಲ್ಪನೆಯಂತೆ, ಇಡೀ ರಾಜ್ಯದಲ್ಲಿ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಮಾಡಬೇಕೆಂದು ತೆಗೆದುಕೊಂಡಿರುವ ನಿರ್ಣಯವು ಐತಿಹಾಸಿಕ ನಿರ್ಣಯವಾಗಿದೆ. ಸರ್ಕಾರವು ನೀಡಿರುವ ಲಿಖಿತ ಉತ್ತರದಲ್ಲಿ 31 ಸರ್ಕಾರಿ ಶಾಲೆಗಳು ಎಂಬುದಾಗಿ ತಿಳಿಸಿದೆ. ಸರ್ಕಾರದ ಹೇಳಿಕೆ ಹಾಗೂ ಆಯವಯ್ಯದಲ್ಲಿ ಘೋಷಣೆ ಮಾಡಿರುವುದನ್ನು ನೋಡಿದರೆ, 800 ಕೆ.ಪಿ.ಎಸ್. ಶಾಲೆಗಳನ್ನು ಮಾಡುತ್ತಿದ್ದೇವೆ ಎಂಬುದಾಗಿ ಇರುತ್ತದೆ. ಹೀಗಾಗಿ ಇದಕ್ಕೂ ಹಾಗೂ ಅದಕ್ಕೂ ತಾಳೆಯಾಗುತ್ತಿಲ್ಲ. ಇದರ ಬಗ್ಗೆ ತೀರ ವಿವರಣೆ ನೀಡುವುದಕ್ಕಿಂತ ನಾನು ಕೇವಲ ಕ್ಯೂ ಟೈಪ್ ಪ್ರಶ್ನೆಗಳನ್ನು ಮಾತ್ರವೇ ನಾನು ಹೇಳುತ್ತೇನೆ. ಇವುಗಳಗೆ ನನಗೆ ಸ್ಪಷ್ಟೀಕರಣ ಬೇಕು. ಇಲ್ಲಿ ಬಹಳ ಮುಖ್ಯವಾಗಿರುವ ಪ್ರಶ್ನೆ ಏನೆಂದರೆ, ನಾನು ಇಡೀ ರಾಜ್ಯದ ಮಾಹಿತಿಯನ್ನು ಕೇಳಿದ್ದೆ, ಆದರೆ, ಕೇವಲ ಒಂದು ಹಾಳೆಯಲ್ಲಿ ಮಾತ್ರವೇ ಸರ್ಕಾರವು ಉತ್ತರಿಸಿದೆ. ಇದು ನನಗೆ ತೃಪ್ತಿಯಾಗುತ್ತಿಲ್ಲ. ಉರ್ದು ಮಾಧ್ಯಮದ ಎಷ್ಟು ಶಾಲೆಗಳನ್ನು ಕರ್ನಾಟಕ ಪಬ್ಲಿಕ್ ಶಾಲೆಗಳನ್ನಾಗಿ ಪರಿವರ್ತಿಸಲಾಗಿದೆ ಎಂದು ನಾನು ಕೇಳಿರುವ ಮತ್ತೊಂದು ಬಹಳ ಪ್ರಮುಖವಾದ ಪ್ರಶ್ನೆಯಾಗಿದೆ. ಇದಕ್ಕೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಹೆಚ್ಚು ದಾಖಲಾತಿ ಹೊಂದಿರುವ 100 ಉರ್ದು ಮಾಧ್ಯಮದ ಸರ್ಕಾರಿ ಶಾಲೆಗಳು ಮತ್ತು ಮೌಲಾನಾ ಆಜಾದ್ ಶಾಲೆಗಳನ್ನು ಕೆ.ಪಿ.ಎಸ್. ಶಾಲೆಗಳನ್ನಾಗಿ ಉನ್ನತೀಕರಿಸಲಾಗಿದೆ ಎಂಬುದಾಗಿ ಸರ್ಕಾರವು ಉತ್ತರಿಸಿದೆ. ಇದಕ್ಕೆ ಸಚಿವರು ಉತ್ತರಿಸಿದ ಮೇಲೆ, ನಾನು ಉಪ ಪ್ರಶ್ನೆಗಳನ್ನು ಕೇಳುತ್ತೇನೆ.

**ಶ್ರೀ ಎಸ್.ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):–** ಮಾನ್ಯ ಸಭಾಪತಿಯವರೆ, ಸಚಿವರು ಕೇಳಿರುವ ಪ್ರಶ್ನೆಯು ನನಗೆ ಅರ್ಥವಾಯಿತು. ನಮ್ಮ ಶಿಕ್ಷಣ ಇಲಾಖೆಯಲ್ಲಿ ಸುಮಾರು 4,000 ಉರ್ದು ಶಾಲೆಗಳಿವೆ. ಇದರಲ್ಲಿ ಎಷ್ಟು ಶಾಲೆಗಳನ್ನು ಕರ್ನಾಟಕ ಪಬ್ಲಿಕ್ ಶಾಲೆಗಳನ್ನಾಗಿ ಮಾಡಿದ್ದೀರಿ ಹಾಗೂ ಶಿವಮೊಗ್ಗ ಜಿಲ್ಲೆಯಲ್ಲಿ ಎಷ್ಟು ಎಂಬುದಾಗಿ ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಲು ಇಷ್ಟಪಡುತ್ತೇನೆ. ಕಳೆದ ಸಾಲಿನ ಆಯವ್ಯಯದಲ್ಲಿ 500 ಕೆ.ಪಿ.ಎಸ್. ಶಾಲೆಗಳು ಎಂಬುದಾಗಿ ಘೋಷಣೆ ಮಾಡಲಾಗಿತ್ತು. ಈ ಸಾಲಿನಲ್ಲಿ ಒಟ್ಟು ಒಂದು ಸಾವಿರ ಕೆ.ಪಿ.ಎಸ್. ಶಾಲೆಗಳು ಆಗುತ್ತವೆ. ಇದು ಹೇಗೆ ಎನ್ನುವುದನ್ನು ನಾನು ಹೇಳುತ್ತೇನೆ. 500 ಕೆ.ಪಿ.ಎಸ್. ಶಾಲೆಗಳನ್ನು ಸರ್ಕಾರದಿಂದ ಮಾಡಿದರೆ, ಕೆ.ಕೆ.ಆರ್.ಡಿ.ಬಿ. ಹಾಗೂ ಅಲ್ಲಿನ ಎಲ್ಲಾ ಶಾಸಕರ ಸ್ಥಳೀಯ ನಿಧಿಯನ್ನು ಸೇರಿಸಿ 200 ಕೆ.ಪಿ.ಎಸ್. ಶಾಲೆಗಳು; ಇಲ್ಲಿಗೆ 700 ಕೆ.ಪಿ.ಎಸ್. ಶಾಲೆಗಳು ಆದವು. ಗಣಿಗಾರಿಕೆಯಿಂದ ಬಾಧಿತವಾದ ಪ್ರದೇಶಗಳಲ್ಲಿ 100 ಕೆ.ಪಿ.ಎಸ್. ಶಾಲೆಗಳು ಅಂದರೆ ಇವುಗಳು 10 ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಗೆ ಬರುತ್ತವೆ. ಇಲ್ಲಿಗೆ ಒಟ್ಟು 800 ಕೆ.ಪಿ.ಎಸ್.

ಶಾಲೆಗಳಾದವು. ಆ ನಂತರದಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ..., ಇದರ ಬಗ್ಗೆ ನಾವು ಶ್ರೀ ಜಮೀರ್ ಅಹ್ಮದ್ ರವರೊಂದಿಗೂ ಸಹ ಮಾತನಾಡಿನದ್ದೇವೆ. ಅವರ ಅನುದಾನದಲ್ಲಿಯೇ ಮಾಡಲಾಗುತ್ತದೆ. ಅವರೇ ಮನವಿಯನ್ನು ಸಲ್ಲಿಸಿದ್ದರು. ಅದು ಏನೆಂದರೆ, ಅವರೇ ಅನುದಾನ ನೀಡುವುದಾಗಿ ತಿಳಸಿ, ಉರ್ದು ಶಾಲೆಗಳನ್ನು ಮೇಲ್ದರ್ಜೆಗೆ ಏರಿಸಬೇಕೆಂಬುದನ್ನು ನಿಮ್ಮ ಪರಿಕಲ್ಪನೆಗೆ ತನ್ನಿ ಎಂಬುದಾಗಿ ತಿಳಸಿದರು. ಕಳೆದ ಬಾರಿ ನಾವು ಮಾತನಾಡಿದಾಗ 100 ಶಾಲೆಗಳನ್ನು ಮಾತ್ರವೇ ಕೆ.ಪಿ.ಎಸ್. ಶಾಲೆಗಳನ್ನಾಗಿ ಮಾಡಿದ್ದರು.

(ಮುಂದು)

(247)09-03-2026/12-30/bkp-vk **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಮಧು ಬಂಗಾರಪ್ಪ** (ಮುಂದು)

ಆದರೆ, ಈ ಸಲ ಮಾನ್ಯ ಮುಖ್ಯಮಂತ್ರಿಗಳು ಈ ಸಾಲಿನ ಆಯವ್ಯಯದಲ್ಲಿ 100 ಶಾಲೆಗಳ ಜೊತೆಗೆ ಇನ್ನೂ 100 ಶಾಲೆಗಳನ್ನು ಮಾಡುತ್ತೇವೆಂದು ಹೇಳ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ ಘೋಷಣೆ ಮಾಡಿದ್ದಾರೆ. ಒಟ್ಟು ನಿಮಗೆ ಉರ್ದು ಶಾಲೆಗಳು ಈಗ ಕರ್ನಾಟಕ ಪಬ್ಲಿಕ್ ಶಾಲೆಗೆ upgrade ಅಗುತ್ತಿವೆ. ಇದರ ಪಟ್ಟಿಯನ್ನು ಕೊಡುತ್ತೇನೆ. 100 ಶಾಲೆಗಳ ಪಟ್ಟಿ ಈಗ ಸಿದ್ಧವಾಗಿದ್ದು, ಅದನ್ನು ತಮಗೆ ಕಳುಹಿಸಿಕೊಡುತ್ತೇನೆ. ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಈಗ ನಾವು ಏನು ತೆಗೆದುಕೊಂಡಿದ್ದೇವೆ, ಅಲ್ಪ ಸಂಖ್ಯಾತರ ಇಲಾಖೆಯಿಂದ ನಾವು ಏನು ತೆಗೆದುಕೊಂಡಿದ್ದೇವೆ, ಅದರಲ್ಲಿ ಎಷ್ಟು ಉರ್ದು ಶಾಲೆಗಳನ್ನು ನಾವು ಕೆ.ಪಿ.ಎಸ್ ಮಾಡಿದ್ದೇವೆ, ಅದರ ಪಟ್ಟಿಯನ್ನು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಅದನ್ನು ನಾನು ವೈಯಕ್ತಿಕವಾಗಿ ಅವರಿಗೆ ಕಳುಹಿಸಿಕೊಡತಕ್ಕಂತಹ ವ್ಯವಸ್ಥೆಯನ್ನು ಮಾಡುತ್ತೇನೆ. ಬೆಸಿಕ್ ಆಗಿ ಹೇಳಬೇಕೆಂದರೆ ಶಿವಮೊಗ್ಗದಲ್ಲಿಯೂ ಸಹ ಈ ಸಲ 19-20 ಉರ್ದು ಶಾಲೆಗಳನ್ನು ಕೆ.ಪಿ.ಎಸ್ ಶಾಲೆಗಳನ್ನಾಗಿ ನಾವು convert ಮಾಡಿರುತ್ತೇವೆ. ಆದರೆ, ಇಡೀ ರಾಜ್ಯದಲ್ಲಿ ಈ 4,000 ಉರ್ದು ಶಾಲೆಗಳು ಏನಿವೆ, ಅದರಲ್ಲಿ ದಾಖಲಾತಿಗಳ ಪ್ರಮಾಣ ಜಾಸ್ತಿಯಾಗಿದ್ದು, ಈ ವಿಚಾರದಲ್ಲಿ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯವರೇ ನಮಗೆ ಫಂಡ್ ಕೊಟ್ಟಿದ್ದು, ನಾವು ಅದನ್ನು ಅನುಷ್ಠಾನ ಮಾಡತಕ್ಕಂತಹ ಕೆಲಸವನ್ನು ಮಾಡುತ್ತೇವೆ. ಮತ್ತೆ ಏನಾದರೂ ಮಾನ್ಯ ಸದಸ್ಯರ ಪ್ರಶ್ನೆಗಳು ಇದ್ದರೆ, ಅದಕ್ಕೆ ಉತ್ತರ ಕೊಡಲಿಕ್ಕೆ ಇಷ್ಟ ಪಡುತ್ತೇನೆ.

**ಶ್ರೀಮತಿ ಬಿಲ್ಕೀಸ್ ಬಾನು(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನನ್ನ ಪ್ರಶ್ನೆ ಏನೆಂದರೆ, ನಾನು ಪ್ರತ್ಯೇಕವಾಗಿ, ಉರ್ದು, ಕನ್ನಡ ಎಂದು ಹೇಳುವುದಿಲ್ಲ. ಒಟ್ಟು ಮಕ್ಕಳಗೆ ಶಿಕ್ಷಣ ಕೊಡಬೇಕು, ಅದನ್ನು 100% ರಷ್ಟು ಮೂಲಭೂತ ಸೌಲಭ್ಯಗಳೊಂದಿಗೆ ಕೊಡಬೇಕು. ಈಗ ನೀವು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಪ್ರತ್ಯೇಕವಾಗಿ ಕೊಟ್ಟಿರುವುದೇ ತಪ್ಪು ಎಂದು ನಾನು ಈ ವೇದಿಕೆ ಮೂಲಕ ಹೇಳಲಿಕ್ಕೆ ಬಯಸುತ್ತೇನೆ. ಶಿಕ್ಷಣ ಇಲಾಖೆಗೆ ತಾವು ತಂದೆಯಾಗಿರುತ್ತೀರಿ. ಇಡಿ ರಾಜ್ಯದ ಶಾಲಾ ಮಕ್ಕಳ

ಪೋಷಕರ ಸಹಕಾರ ಸಂಘದವರು ಒಂದು ಅರ್ಜಿಯನ್ನು ಕೊಟ್ಟಿದ್ದಾರೆ. ಕರ್ನಾಟಕ ಅಸೋಷಿಯೇಷನ್‌ನವರು ಒಂದು ಅರ್ಜಿಯನ್ನು ಕೊಟ್ಟಿದ್ದಾರೆ. ಎನ್.ಜಿ.ಓ. ನವರು ನನಗೆ ಒಂದು ಅರ್ಜಿಯನ್ನು ಕೊಟ್ಟಿದ್ದಾರೆ. ಅವರು Minority Department ಯಿಂದ ಏನು ಹೇಳುತ್ತಾರೆಂದರೆ ಮೌಲಾನಾ ಅಜಾದ್ ಶಾಲೆಗಳನ್ನು ಕೆ.ಪಿ.ಎಸ್. ಶಾಲೆಗಳನ್ನಾಗಿ ಉನ್ನತೀಕರಿಸಲಾಗಿದೆ ಎಂದು ಹೇಳುತ್ತಾರೆ. ಈಗಾಗಲೇ ರಾಜ್ಯದಲ್ಲಿ ಮೌಲನಾ ಅಜಾದ್ ಶಾಲೆಗಳನ್ನು ಪ್ರಾರಂಭ ಮಾಡಿದ್ದಾರೆ. ಅದು ಪ್ರತ್ಯೇಕವಾದ ವಿಷಯ ಬಿಡಿ. ನಿಮ್ಮ ಇಲಾಖೆಯಲ್ಲಿ ಇರುವಂತಹವುಗಳು, ನಿಮ್ಮ ಅಧೀನದಲ್ಲಿ ಇರುವಂತಹ ಉರ್ದು ಮಾಧ್ಯಮ ಶಾಲೆಗಳು ತಾವೇ ಹೇಳುವ ಹಾಗೆ 4,000 ಉರ್ದು ಶಾಲೆಗಳ ಗತಿ ಏನು? ಆ ಶಾಲೆಗಳನ್ನು ಕೆ.ಪಿ.ಎಸ್. ಮಾದರಿಯಲ್ಲಿ ಮಾಡಬೇಕೆಂದು ಯಾರು ಹೇಳಿದರು? ಇವರು ಪ್ರಾರಂಭ ಮಾಡಿರತಕ್ಕಂತಹ ಮೌಲಾನಾ ಅಜಾದ್ ಶಾಲೆಗಳನ್ನು ಉನ್ನತೀಕರಿಸುತ್ತೇವೆಂದು ಹೇಳಿ 100 ಶಾಲೆಗಳು ಎಂದು ಹೇಳುತ್ತಿದ್ದಾರೆ.

ಮಾನ್ಯ ಸಭಾಪತಿಯವರೆ, ಒಂದು ಕಣ್ಣಿಗೆ ಸುಣ್ಣ, ಒಂದು ಕಣ್ಣಿಗೆ ಬೆಣ್ಣೆ ಬೇಡ. ಇಡೀ ರಾಜ್ಯದಲ್ಲಿ ಕನ್ನಡ ಇರಲಿ, ತಮಿಳು ಇರಲಿ, ತೆಲುಗು ಇರಲಿ, ಉರ್ದು ಶಾಲೆಗಳು ಇರಲಿ. ಎಲ್ಲಾ ಶಾಲೆಗಳಿಗೂ ಸಹ ತಾವೇ ಮಂತ್ರಿಗಳಿದ್ದೀರಿ. 800 ಶಾಲೆಗಳಲ್ಲಿ, 500 ಶಾಲೆಗಳಲ್ಲಿ ಯಾರು ಶಿಕ್ಷಣದಿಂದ ವಂಚಿತರಾಗಿದ್ದಾರೆಂದು ಶಿಕ್ಷಣ ಸಚಿವರಾದ ತಮಗೂ ಗೊತ್ತಿದೆ. ಈ ವಿಷಯವಾಗಿ ಹಲವಾರು ಚರ್ಚೆಗಳನ್ನು ಈ ವೇದಿಕೆಯ ಮೇಲೆ ಮಾಡಿದ್ದೇವೆ. ಒಂದು ಉದಾಹರಣೆ ಕೊಡುತ್ತೇನೆ. ಮಂಗಳೂರಿನಲ್ಲಿ Bengre Government High School ಎಂದು ಹೇಳಿ, ಆ ಶಾಲೆಯಲ್ಲಿ 900 ಜನ ವಿದ್ಯಾರ್ಥಿಗಳಿದ್ದಾರೆ. 100 ಕ್ಕೆ 100 ಮೈನಾರಿಟಿ ವಿದ್ಯಾರ್ಥಿಗಳಿದ್ದಾರೆ. ಅವರುಗಳು ಕನ್ನಡ ಮಾಧ್ಯಮದಲ್ಲಿ ಓದುತ್ತಿದ್ದಾರೆ. ಅಲ್ಲಿ 5 ಎಕರೆ ಜಾಗವೂ ಸಹ ಇದೆ. ಆ ಶಾಲೆ ಶಿಸ್ತಾಗಿ ನಡೆಯುತ್ತಿದ್ದು, ಆ ಶಾಲೆಯನ್ನು ಕೆ.ಪಿ.ಏಸ್. ಆಗಿ convert ಮಾಡಿರುವುದಿಲ್ಲ. ಈ ವಿಚಾರವನ್ನು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಗೆ ಹೇಳಿದರೆ, ಅದು ನಮಗೆ ಬರುವುದಿಲ್ಲ, ಇದು ಕನ್ನಡ ಮಾಧ್ಯಮ ಶಾಲೆ ಎಂದು ಹೇಳುತ್ತಾರೆ. Don't bring the medium in between to announce the KPS. ಅದನ್ನು ಏತಕ್ಕೆ ಅಡಚಣೆ ಮಾಡುತ್ತಿದ್ದೀರಿ? ಮತ್ತೆ ಬಿಜಾಪುರದಲ್ಲಿ ಸತತವಾಗಿ ಸುಮಾರು 8 ತಿಂಗಳುಗಳಿಂದ ವಿದ್ಯಾರ್ಥಿಗಳ ಪೋಷಕರು, ಮತ್ತು ಅಲ್ಲಿನ ಎನ್.ಜಿ.ಓ.ಗಳು ಈ ವಿಚಾರವಾಗಿ ಹೋರಾಟ ಮಾಡುತ್ತಿದ್ದಾರೆ. ಅಲ್ಲಿನ ಈ ಒಂದು ಶಾಲೆಯನ್ನು ಸುಮಾರು 150 ವರ್ಷಗಳ ಹಿಂದೆ ಶುರು ಮಾಡಿದ್ದು, ....

**ವೈಸ್ ಛೇರ್ಮನ್:-** ವಿಚಾರ ಏನೆಂದು ಹೇಳಿ ಮಾನ್ಯ ಸಚಿವರ ಗಮನಕ್ಕೆ ತನ್ನಿ ಸಾಕು. ಇದರ ಬಗ್ಗೆ ಮಂತ್ರಿಗಳ ಗಮನಕ್ಕೆ ತಂದಿದ್ದೀರಿ,

**ಶ್ರೀಮತಿ ಬಲ್ಕೀಸ್ ಬಾನು:-** ಈ ವಿಚಾರ ಬಹಳ ಗಂಭೀರವಾಗಿದ್ದು, ಈ ವಿಚಾರವನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಇದನ್ನು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯವರು ನೋಡುವುದಿಲ್ಲ, ಶಿಕ್ಷಣ

ಇಲಾಖೆಯವರು ಸಹ ನೋಡುವುದಿಲ್ಲವೆಂದರೆ, ಇದನ್ನು ಯಾರು ನೋಡಬೇಕು? ಏತಕ್ಕೆ ಈ ವಿಚಾರವನ್ನು ಮಲತಾಯಿ ಧೋರಣೆಯಾಗಿ ನೋಡುತ್ತಿದ್ದೀರಿ? ಭದ್ರಾವತಿ ತಾಲ್ಲೂಕಿನಲ್ಲಿ ಇಡೀ ರಾಜ್ಯದಲ್ಲಿ ಒಂದೇ ಒಂದು Donabaghatta ಶಾಲೆ ಎಂದು ಇದೆ. ಇಡೀ ರಾಜ್ಯದಲ್ಲಿಯೇ ಅತಿ ಹೆಚ್ಚು ಸಂಖ್ಯೆಯ ವಿದ್ಯಾರ್ಥಿಗಳ ಶಾಲೆಯಾಗಿದ್ದು, ಆ ಶಾಲೆಯನ್ನು ನೀವು ಕೆ.ಪಿ.ಎಸ್. ಶಾಲೆಯನ್ನಾಗಿ convert ಮಾಡಿರುವುದಿಲ್ಲ. ಇದನ್ನು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯವರು ಮಾಡುವುದಿಲ್ಲ, ಮತ್ತೆ ತಾವು ಸಹ ಮಾಡುವುದಿಲ್ಲ. ಸಾಗರದ ಮಧ್ಯಭಾಗದ ಸಿಟಿಯಲ್ಲಿ ಅದನ್ನು Fisheries Department ಗೆ ಕೊಟ್ಟಿದ್ದರು. ಅಲ್ಲಿ ಹಳೆಯ ವಿದ್ಯಾರ್ಥಿಗಳ ಸಂಘವನ್ನು ಮಾಡಿಕೊಂಡಿದ್ದು, ಅವರುಗಳು ತಾವೇ ಹಣವನ್ನು ಹಾಕಿಕೊಂಡು ಎಲ್.ಕೆ.ಜಿ.ಯನ್ನು ಶುರು ಮಾಡಿದ್ದಾರೆ. ಅಲ್ಲಿಗೆ ದುಬೈನಿಂದ ಟೀಚರ್‌ಗಳನ್ನು ಇಂಗ್ಲೀಷ್ ಭಾಷೆಯನ್ನು ಟೀಚ್ ಮಾಡಲಿಕ್ಕೆ ಕರೆಸಿದ್ದಾರೆ. ಅದು ಬಹಳ ಅಚ್ಚುಕಟ್ಟಾಗಿದೆ. ಆ ಶಾಲೆಯನ್ನು ಇದಕ್ಕೆ ಪ್ರಸ್ತಾವನೆ ಮಾಡಿದ್ದೆವು. ಅದನ್ನು ನಿಮ್ಮ ಶಿಕ್ಷಣ ಇಲಾಖೆಯವರು ತೆಗೆದುಕೊಂಡಿಲ್ಲ, ಇದನ್ನು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯವರು ತೆಗೆದುಕೊಂಡಿಲ್ಲ. ಮತ್ತೆ ಚಿಕ್ಕೋಡಿಯಲ್ಲಿ....

**ವೈಸ್ ಛೇರ್ಮನ್:-** ಮೇಡಂ, ಸಾಕು ಮಾಡಿ ಒಬ್ಬೊಬ್ಬರೇ ಜಾಸ್ತಿ ಸಮಯ ಮಾತನಾಡಲಿಕ್ಕೆ ಆಗುವುದಿಲ್ಲ . ನೀವು ವಿಚಾರವನ್ನು ಅವರ ಗಮನಕ್ಕೆ ತನ್ನಿ. ಶಾಸಕರು ಏನು ವಿಚಾರವನ್ನು ಹೇಳಿದ್ದಾರೆ, ಆ ವಿಚಾರದ ಬಗ್ಗೆ ಏನಾಗಿದೆ ಎಂದು ಶಾಸಕರಿಗೆ ಹೇಳಿ.

**ಶ್ರೀ ಎಸ್.ಮಧು ಬಂಗಾರಪ್ಪ:-** ಮಾನ್ಯ ಸದಸ್ಯರ ವಿಚಾರಗಳು ನನಗೆ ಅರ್ಥವಾಯಿತು. ನಾವು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಹಣವನ್ನು ಕೇಳಿರುವುದಿಲ್ಲ. ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯವರೇ ನಮ್ಮದು ಏನು ದುಡ್ಡು ಕೊಡಬೇಕು ಅದನ್ನು ನಾವು ಕೊಡುತ್ತೇವೆ, ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ಅವರು ಕೇಳಿರುವ ೫೦೦ ಕೆ.ಪಿ.ಎಸ್. ಶಾಲೆಗಳ ಪೈಕಿ ೧೦ ಉರ್ದು ಶಾಲೆಗಳನ್ನು ಮಾತ್ರ convert ಮಾಡಲಿಕ್ಕೆ ಸಾಧ್ಯ.

**ವೈಸ್ ಛೇರ್ಮನ್:-** ಅವರ ಕೋರಿಕೆ ಏನೆಂದರೆ ಮೌಲನಾ ಅಜಾದ್ ಶಾಲೆಗಳನ್ನು ನೀವು upgrade ಮಾಡಿ ಎಂದು ಅವರು ಕೇಳುತ್ತಿದ್ದಾರೆ.

**ಶ್ರೀ ಎಸ್.ಮಧು ಬಂಗಾರಪ್ಪ:-** ಕೇವಲ ಮೌಲನಾ ಅಜಾದ್ ಶಾಲೆಗಳು ಮಾತ್ರವಲ್ಲ, ಉರ್ದು ಶಾಲೆಗಳನ್ನೂ ಕೂಡ ನಾವು ಏನು ಕಲ್ಯಾಣ ಕರ್ನಾಟಕ ಭಾಗದಿಂದ ಬರುವ ಫಂಡ್ ನಿಂದಲೂ ಸಹ ಉರ್ದುಶಾಲೆಗಳನ್ನು ಕೆ.ಪಿ.ಎಸ್. ಆಗಿ ಮಾಡಿದ್ದೇವೆ. ಎಲ್ಲವನ್ನು ಒಟ್ಟಿಗೆ ಮಾಡಲಿಕ್ಕೆ ಆಗುವುದಿಲ್ಲ. ಏಕೆಂದರೆ, ನನ್ನ ಕೈಯಲ್ಲಿ ಇರುವುದು ೮೦೦ ಶಾಲೆಗಳು ಮಾತ್ರ. ೮೦೦ ಶಾಲೆಗಳನ್ನು ಇಡಿ ರಾಜ್ಯದಲ್ಲಿ ಮಾಡಿದಾಗ ಕೆಲವು ಉರ್ದು ಶಾಲೆಗಳು ಬಂದಿರುತ್ತವೆ, ಕೆಲವು ಕಡೆ ಬಾರದೇ ಇರಬಹುದು. ನೀವು ಯಾವುದನ್ನು ಹೇಳುತ್ತಿದ್ದೀರಿ, ಅದನ್ನೂ ಕೂಡ ಪರಿಗಣಿಸುವಂತಹ ವ್ಯವಸ್ಥೆಯನ್ನು ನಾವು ಮಾಡುತ್ತೇವೆ. ನಾವು ಇಲ್ಲವೆಂದು

ಹೇಳುತ್ತಿಲ್ಲ. ಆದರೆ, ಮಾನ್ಯ ಸದಸ್ಯರ ಕಾಳಜಿ ನನಗೆ ಗೊತ್ತಾಗಿದೆ. ಅಲ್ಲಿ ಬೇಧ ಭಾವ ಮಾಡಬೇಡಿ ಎನ್ನುವ ವಿಚಾರವನ್ನು ಹೇಳಿದರು. ಮಕ್ಕಳ ಸಂಖ್ಯೆ ಜಾಸ್ತಿ ಎಲ್ಲಿ ಆಗುತ್ತದೆ, ಅದರ criteria ವನ್ನು ತೆಗೆದುಕೊಂಡಿದ್ದೇವೆಯೇ ಹೊರತು, ಇಂಗ್ಲೀಷ್, ಉರ್ದು, ಇಲ್ಲವೇ ತಮಿಳು, ತೆಲುಗು ಎನ್ನುವ ರೀತಿಯಲ್ಲಿ ನಾವು ತೆಗೆದುಕೊಳ್ಳಲಿಕ್ಕೆ ಹೋಗಿಲ್ಲ. ಪ್ರಥಮ ಆದ್ಯತೆಯಾಗಿ ನನ್ನ ಇಲಾಖೆಯಲ್ಲಿ ೮೦೦ ಶಾಲೆಗಳಿಗೆ ಮಾತ್ರ ನಾವು ಹಣವನ್ನು ಖರ್ಚು ಮಾಡುವುದಾಗಿದೆ. ಅದರ ಜೊತೆಗೆ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯವರಿಗೆ ಈ ಒಂದು formula ಇಷ್ಟವಾಗಿರುವುದರಿಂದ, ಅವರು ಹಣವನ್ನು ಕೊಡುತ್ತಿದ್ದಾರೆ, ಅದು ಕೇವಲ ಉರ್ದು ಮಾಧ್ಯಮ ಶಾಲೆಗಳಿಗೆ ಮಾತ್ರ. ಇದು ಬಹಳ ಒಳ್ಳೆಯ ಕೆಲಸವಾಗಿದೆ. ಏಕೆಂದರೆ, ಅಲ್ಲಿ ಇಂಗ್ಲೀಷ್ ಮಾಧ್ಯಮ ಸಿಗುತ್ತದೆ. ಆದರೆ, ನಮ್ಮ ಹಣದಲ್ಲಿ ಎಷ್ಟು ಉರ್ದು ಶಾಲೆಗಳನ್ನು ಅದರಲ್ಲೂ ಕಲ್ಯಾಣ ಕರ್ನಾಟಕದಲ್ಲಿ ಕೆ.ಪಿ.ಎಸ್. ಶಾಲೆಗಳನ್ನಾಗಿ convert ಮಾಡಿದ್ದೇವೆ. ಆದರೆ, ಎಲ್ಲವನ್ನು ಒಟ್ಟಿಗೆ ಮಾಡಲಿಕ್ಕೆ ಆಗುವುದಿಲ್ಲ .

**ವೈಸ್ ಛೇರ್ಮನ್:-** ಮಂತ್ರಿಗಳೇ, ಅಲ್ಲಿ ಕೆಲವು ಶಾಲೆಗಳ ಹೆಸರುಗಳನ್ನು ಹೇಳಿದ್ದಾರೆ. ಅದರ ಬಗ್ಗೆ ನೀವು ಹೇಳಿ.

**ಶ್ರೀ ಎಸ್. ಮಧು ಬಂಗಾರಪ್ಪ:-** ಅದನ್ನೂ ಮಾಡುತ್ತೇವೆ, ಜೊತೆಗೆ ಇನ್ನು ಯಾವುದಾದರೂ ಶಾಲೆಗಳ ಮಾಹಿತಿಯನ್ನು ಕೊಟ್ಟರೆ, ಅದನ್ನು ನಮ್ಮ ಇಲಾಖೆಯವರ ಕಡೆ ಕೊಟ್ಟು, ಅದು ಅರ್ಹತೆಯಾಗುತ್ತದೆ ಎಂದು ಹೇಳಿದರೆ ಅದನ್ನು ನಾನು ಖಂಡಿತವಾಗಿಯು ಪರಿಗಣಿಸುತ್ತೇನೆ.

**ಶ್ರೀಮತಿ ಬಲ್ಕೀಸ್ ಬಾನು:-** ಮಾನ್ಯ ಸಭಾಪತಿಯವರೆ, ಮಂಗಳೂರಿನ ಒಂದು ಶಾಲೆಯ ಉದಾಹರಣೆಯನ್ನು ಹೇಳಿದ್ದೇನೆ. ಅಲ್ಲಿ ೯೦೦ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಅದು 5 ಎಕರೆ ಜಮೀನಿನಲ್ಲಿ ನಡೆಯುತ್ತಿದೆ. ಅದಕ್ಕಿಂತ ಇನ್ನು ಏನು ಮಾನದಂಡ ಬೇಕು?

**ವೈಸ್ ಛೇರ್ಮನ್:-** ಮಾನ್ಯ ಸದಸ್ಯರನ್ನು ಈ ವಿಚಾರವಾಗಿ ಕರೆದು ಮಂತ್ರಿಗಳು ಮಾತನಾಡುತ್ತಾರೆ.

**ಪ್ರಶ್ನೆ ಸಂಖ್ಯೆ 639**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಸುದೀರ್ಘವಾದಂತಹ ಉತ್ತರವನ್ನು ಒದಗಿಸಿದ್ದಾರೆ. ನನ್ನ ಪ್ರಶ್ನೆ ಇರುವಂತಹದ್ದು ಏನೆಂದರೆ ರಾಜ್ಯದಲ್ಲಿ ಎಷ್ಟು ಕೆ.ಪಿ.ಎಸ್. ಶಾಲೆಗಳನ್ನು ಪ್ರಾರಂಭ ಮಾಡುತ್ತಿದ್ದೀರಿ, ಅವುಗಳ ಪ್ರಗತಿ ಏನು ಎನ್ನುವಂತಹ ವಿಚಾರವನ್ನು ಕೇಳಿದಾಗ ಮಾನ್ಯ ಸಚಿವರು ಅದಕ್ಕೆ ಉತ್ತರವನ್ನು ನೀಡಿದ್ದಾರೆ. ರಾಜ್ಯದಲ್ಲಿ 2025–26ನೇ ಸಾಲಿನಲ್ಲಿ ಎ.ಡಿ.ಬಿ. ಸಹಯೋಗದೊಂದಿಗೆ 500 ಶಾಲೆಗಳನ್ನು ಕೆ.ಪಿ.ಎಸ್. ಕೆ.ಕೆ.ಆರ್.ಡಿ.ಬಿ. ಯೋಜನೆಯಡಿ 200 ಶಾಲೆಗಳನ್ನು ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯಿಂದ 100 ಶಾಲೆಗಳನ್ನು ಹೀಗೆ ಒಟ್ಟು 800 ಶಾಲೆಗಳನ್ನು ಪ್ರಾರಂಭ ಮಾಡಲಿಕ್ಕೆ ತಾವು ಪ್ರಯತ್ನವನ್ನು ಮಾಡಿದ್ದೀರಿ, ಆದರೆ, ಇದಕ್ಕೆ ಬೇಕಾಗಿರತಕ್ಕಂತಹ ಹಣಕಾಸಿನ ವ್ಯವಸ್ಥೆಯನ್ನು ಮೊನ್ನೆ ಬಜೆಟ್‌ನಲ್ಲಿ ನೋಡಿದಾಗ ಕೇವಲ 3900 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ. ಸುಮಾರು 4 ರಿಂದ ನಾಲ್ಕೂವರೆ ಕೋಟಿ ರೂಪಾಯಿಗಳು ಮಾತ್ರ ಒಂದು ಶಾಲೆಗೆ ಬರುತ್ತದೆ. ಇಲ್ಲಿ ಸಂಪೂರ್ಣವಾಗಿರುವಂತಹ ಮೂಲಭೂತ ಸೌಕರ್ಯಗಳನ್ನು ಕೆ.ಪಿ.ಎಸ್. ಶಾಲೆಗಳಿಗೆ ಒದಗಿಸಲಿಕ್ಕೆ ಈ ಹಣ ಸಾಕಾಗುತ್ತದೆಯೇ? ಅದಕ್ಕೆ ಮತ್ತೆ ಏನಾದರೂ ಹಣವನ್ನು ಒದಗಿಸುತ್ತೀರಾ ಎನ್ನುವುದನ್ನು ಸನ್ಮಾನ್ಯ ಸಚಿವರು ತಿಳಿಸಬೇಕು. ಮೂಲ ಸೌಕರ್ಯಗಳು ಇಲ್ಲದೇ ಈ ಶಾಲೆಯನ್ನು ಸಮರ್ಪಕವಾಗಿ ನಡೆಸಲಿಕ್ಕೆ ಆಗುತ್ತದೆಯೇ? ಕಳೆದ ಸಾಲಿನಲ್ಲಿಯೂ ಸಹ ತಾವು ಕೆಲವು ಶಾಲೆಗಳನ್ನು ಕೆ.ಪಿ.ಎಸ್. ಶಾಲೆಗಳನ್ನಾಗಿ ಪರಿವರ್ತನೆ ಮಾಡಿದ್ದೀರಿ. ಅಲ್ಲಿ ಶಿಕ್ಷಣದ ಪ್ರಗತಿ ಏನಾಗಿದೆ ಎನ್ನುವುದನ್ನು ದಯವಿಟ್ಟು ತಿಳಿಸಬೇಕು. ಅದರ ಜೊತೆಗೆ ಶಿಕ್ಷಕರ ವರ್ಗಾವಣೆ ವಿಷಯದಲ್ಲಿ ಕೆಲವು ಶಾಲೆಗಳನ್ನೇ ಬಂದ್ ಮಾಡಿ ಕೆ.ಪಿ.ಎಸ್. ಶಾಲೆಗಳನ್ನು ಮಾಡತಕ್ಕಂತಹ ಸಂದರ್ಭದಲ್ಲಿ ಶಿಕ್ಷಕರ ವರ್ಗಾವಣೆಗೆ ಅನುಕೂಲವಾಗುವಂತಹ ವಾತಾವರಣವನ್ನು ತಾವು ದಯವಿಟ್ಟು ಮಾಡಬೇಕೆಂದು ಮತ್ತು ಈ ನಿಟ್ಟಿನಲ್ಲಿ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ಎಂದು ಕೇಳಲಿಕ್ಕೆ ಬಯಸುತ್ತೇನೆ. ಹಾಗೆ ಬಹಳಷ್ಟು ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ಈ ಕೆ.ಪಿ.ಎಸ್ ಶಾಲೆಗಳನ್ನು ಪರಿವರ್ತನೆ ಮಾಡತಕ್ಕಂತಹ ಸಂದರ್ಭದಲ್ಲಿ ಮಕ್ಕಳ ಕಲಿಕೆಯನ್ನು ಉತ್ತಮ ಪಡಿಸಲಿಕ್ಕೆ ಕೆಲವೊಂದು ಯೋಜನೆಗಳನ್ನು ತಾವು ತೆಗೆದುಕೊಂಡಿದ್ದೀರಿ. ನಾನೂ ಸಹ ಇದನ್ನು ಸ್ವಾಗತ ಮಾಡುತ್ತೇನೆ. ಅದು L.B.S. School ವಿಚಾರ ಇರಬಹುದು ಮತ್ತು ಬೇರೆ ಬೇರೆ ವಿಚಾರದಲ್ಲಿ ತಾವು ಪ್ರಗತಿಯನ್ನು ಮಾಡತಕ್ಕಂತಹ ಕೆಲಸವನ್ನು ಮಾಡಿದ್ದೀರಿ. ಕೆ.ಪಿ.ಎಸ್. ಶಾಲೆಗಳನ್ನು ಮಾಡುವುದರಲ್ಲಿ ಒಂದು ಅನುಕೂಲತೆ ಇದ್ದರೆ, ಮತ್ತೊಂದು

ಅನಾನುಕೂಲತೆ ಇರುತ್ತದೆ. ಕೆಲವೊಂದು ಗ್ರಾಮಗಳಲ್ಲಿ ಶಾಲೆಗಳೇ ಇಲ್ಲದಂತಹ ವಾತಾವರಣ ಸೃಷ್ಟಿಯಾಗುತ್ತಿದೆ. ಶಾಲೆಗಳೇ ಇಲ್ಲದ ಗ್ರಾಮಗಳು ಎನ್ನುವ ಹಣೆಪಟ್ಟಿಗೆ ಹೋಗುವಂತಹ ಪರಿಸ್ಥಿತಿ ಇದೆ.

**ವೈಸ್ ಛೇರ್ಮನ್:-** ತಾವು ನೇರವಾಗಿ ಮಾನ್ಯ ಸಚಿವರಿಗೆ ಪ್ರಶ್ನೆಯನ್ನು ಕೇಳಿ. ಅವರು ಉತ್ತರವನ್ನು ಹೇಳಿದ ಮೇಲೆ ಮತ್ತೊಂದು ಬಾರಿ ಪ್ರಶ್ನೆಯನ್ನು ಕೇಳಿ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೆ, ಈ ವಿಚಾರವಾಗಿ ಮಾನ್ಯ ಸಚಿವರು ಏನು ಮಾಡುತ್ತಿದ್ದಾರೆಂದು ಕೇಳುತ್ತಿದ್ದೇನೆ. ಹಾಗಾಗಿ, ಪ್ರತಿಯೊಂದು ಗ್ರಾಮ ಪಂಚಾಯಿತಿಗೆ ಒಂದು ಕೆ.ಪಿ.ಎಸ್. ಶಾಲೆ ಬರುವಂತೆ ಮಾನ್ಯ ಸಚಿವರು ನೋಡಿಕೊಳ್ಳಬೇಕು. ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲಿ ಹೆಚ್ಚು ವಿದ್ಯಾರ್ಥಿಗಳು ಇರುವಂತಹ ಶಾಲೆಗಳನ್ನು ಕೆ.ಪಿ.ಎಸ್. ಶಾಲೆಯನ್ನಾಗಿ ಮಾಡಿದರೆ ಅನುಕೂಲವಾಗುತ್ತದೆ. ಆದ್ದರಿಂದ, ಪ್ರತಿಯೊಂದು ಗ್ರಾಮ ಪಂಚಾಯಿತಿಗೂ ಸಹ ಒಂದೊಂದು ಕೆ.ಪಿ.ಎಸ್. ಶಾಲೆ ಬರುವಂತೆ ಮಾಡಬೇಕು. ಹಾಗೆಯೇ ಇವತ್ತು, ಈ ಶಾಲೆಗಳ ವ್ಯವಸ್ಥೆಯ ಬಗ್ಗೆ ಬಹಳಷ್ಟು ವಿಚಾರಗಳನ್ನು ನಾನು ಇಲ್ಲಿ ಪ್ರಸ್ತಾಪ ಮಾಡಲಿಕ್ಕೆ ಹೋಗುವುದಿಲ್ಲ. ಮಾನ್ಯ ಸಚಿವರು ಸಂಪೂರ್ಣವಾದ ಉತ್ತರವನ್ನು ಇಲ್ಲಿ ಕೊಟ್ಟಿದ್ದಾರೆ. ಗುಣಾತ್ಮಕ ಶಿಕ್ಷಣಕ್ಕೆ ಕೇವಲ ಎಸ್.ಎಸ್.ಎಲ್.ಸಿ.ಗೆ ಪರೀಕ್ಷೆ ನಡೆಯುತ್ತಿದೆ. ಈ ಮಧ್ಯದಲ್ಲಿ ಕೆ.ಪಿ.ಎಸ್.ಗೆ 7ನೇ ತರಗತಿ ಅಥವಾ 8ನೇ ತರಗತಿಗೆ ಪರೀಕ್ಷೆ ನಡೆಸುವಂತಹ ವ್ಯವಸ್ಥೆ ಮಾಡಿದರೆ ಮಕ್ಕಳು ಇನ್ನಷ್ಟು ಸ್ಕ್ರೀನ್ ಆಗಿ ಬರುವಂತಹ ವ್ಯವಸ್ಥೆ ಆಗುತ್ತದೆ.

(ಮುಂದು)

**(248) 09.03.2026 12.40 ಎಸ್‌ವಿ-ಬಿಎನ್‌ಎಸ್ (ವೈಸ್ ಛೇರ್‌ಮನ್‌ರವರ ಉಪಸ್ಥಿತಿ)**

**ಶ್ರೀ ನಿರಾಣಿಹಣಮಂತ ರುದ್ರಪ್ಪ (ಮುಂದು):-**

ಈ ಮಧ್ಯೆ ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ 7ನೇ ಅಥವಾ 8ನೇ ತರಗತಿಗಳಿಗೆ ಪರೀಕ್ಷೆ ನಡೆಸುವಂಥ ವ್ಯವಸ್ಥೆಯನ್ನು ಮಾಡಿದರೆ ಮಕ್ಕಳು ಇನ್ನಷ್ಟು screening ಆಗಿ ಬರುವ ವ್ಯವಸ್ಥೆಯಾಗುತ್ತದೆ. ಈಗಿನ ಶಿಕ್ಷಣ ವ್ಯವಸ್ಥೆಯಲ್ಲಿ 1 ರಿಂದ 10 ನೇ ತರಗತಿಯವರೆಗೆ ಯಾವುದೇ ಪರೀಕ್ಷೆಗಳಿಲ್ಲ. ನೇರವಾಗಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಿಂದ ಉತ್ತಮವಾದ ಫಲಿತಾಂಶವನ್ನು ನಾವು ಅಪೇಕ್ಷೆ ಪಡುತ್ತಿದ್ದೇವೆ. ಮುಂದಿನ ದಿನಮಾನಗಳಲ್ಲಿ ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ಪರೀಕ್ಷೆಯನ್ನು ನಡೆಸುವಂಥ ಪ್ರಯತ್ನವನ್ನು ಮಾಡುತ್ತಾರೆಯೇ ಎಂದು ಕೇಳಬಯಸುತ್ತೇನೆ.

ಇದರ ಜೊತೆಗೆ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳಿಗೆ ಪ್ರತ್ಯೇಕವಾದ ಎಸ್.ಡಿ.ಎಂ.ಸಿ. ಇದ್ದು, ಅವೆರಡರ ನಡುವೆಯೂ ಸಾಮ್ಯತೆ ಬರುತ್ತಿಲ್ಲ. ಸಾಮ್ಯತೆ ತರುವ ನಿಟ್ಟಿನಲ್ಲಿ ಕೇಂದ್ರೀಕರಣವಾಗಿರುವುದರ ಬಗ್ಗೆ ಏನು ವ್ಯವಸ್ಥೆಯನ್ನು ಮಾಡಲಾಗುತ್ತದೆ ಎಂಬುದನ್ನು ದಯವಿಟ್ಟು ತಿಳಿಸಬೇಕು.

**ಶ್ರೀ ಎಸ್.ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):–** ಮಾನ್ಯ ಸಭಾಪತಿಯವರೆ, ಈ ಪರೀಕ್ಷೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಕೇವಲ 10ನೇ ತರಗತಿಗೆ ಮತ್ತು ಪಿ.ಯು.ಸಿ.ಗೆ ಮಾತ್ರ ಪರೀಕ್ಷೆ ನಡೆಸಬೇಕೆಂದು ನ್ಯಾಯಾಲಯದಲ್ಲಿಯೂ ನಿರ್ದೇಶನ ಆಗಿರುವುದು ತಮಗೆಲ್ಲರಿಗೂ ತಿಳಿದ ವಿಚಾರವಾಗಿದೆ. ಆದರೆ 7ನೇ ತರಗತಿಗೆ ನಾವು internal ಆಗಿಯೇ ಪರೀಕ್ಷೆ ಮಾಡಬೇಕು. ಇದಕ್ಕೆ ಸಂಬಂಧಪಟ್ಟಂತೆ ನ್ಯಾಯಾಲಯದಲ್ಲಿ ಒಂದು ಕೇಸ್ ಕೂಡ ಇದೆ. ಈಗ ಒಂದೂವರೆ–ಎರಡು ವರ್ಷಗಳ ಹಿಂದೆ ನಾವು ಒಂದು ಪರೀಕ್ಷೆಯನ್ನು ಕೂಡ ಮಾಡಿದೆವು. ಆ ಸಮಯದಲ್ಲಿ ಯಾವುದೇ ಕಾರಣಕ್ಕೂ ಫಲಿತಾಂಶವನ್ನು ಘೋಷಣೆ ಮಾಡಬಾರದು ಮತ್ತು ಯಾವುದೇ ರೀತಿಯ grading system ಅನ್ನು ಮಾಡಬಾರದು ಎಂದು ಸುಪ್ರೀಂ ಕೋರ್ಟ್‌ನಿಂದ ಒಂದು ಆದೇಶವೂ ಬಂದಿತ್ತು. ಆದರೆ ಗುಣಮಟ್ಟ ಕಾಪಾಡುವುದರ ಬಗ್ಗೆ ಅವರು ಹೇಳಿರುವುದಕ್ಕೆ ಸಂಬಂಧಪಟ್ಟಂತೆ ಎಸ್.ಎಸ್.ಎಲ್.ಸಿ. ಗೆ ನಾವು ತೆಗೆದುಕೊಂಡಿರುವ initiative ಬಗ್ಗೆ ಮತ್ತು 7, 8, 9ನೇ ತರಗತಿಗೂ ಕೂಡ ನಾವು internal tests and examinations ಅನ್ನು ಮಾಡಿ ಗುಣಮಟ್ಟ ಕಾಪಾಡಿಕೊಳ್ಳುವ ಪ್ರಯತ್ನ ಮಾಡುತ್ತಿದ್ದು, ಅದನ್ನು ಬೇರೆ ಹಂತಗಳಲ್ಲಿಯೂ ಮಾಡುವ ಅವಶ್ಯಕತೆ ಇದೆ. ನಾನು ಇಲ್ಲವೆಂದು ಹೇಳುವುದಿಲ್ಲ. ಅಂಥ ವ್ಯವಸ್ಥೆಯನ್ನು ನಾವು ಮಾಡಲಿಚ್ಛಿಸಿದ್ದೇವೆ.

ಇನ್ನು ಗ್ರಾಮ ಪಂಚಾಯಿತಿಗೆ ಒಂದೊಂದು ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಮಾಡಬೇಕೆಂದು ನಮಗೆ ಆಸೆ. ಅದನ್ನು ನಾವು ಮಾಡುತ್ತೇವೆ. ರಾಜ್ಯದಲ್ಲಿ ಎಲ್ಲರಿಗೂ ನಾನು ಮನವಿಯನ್ನು ಮಾಡುವುದಕ್ಕೆ ಇಷ್ಟ ಪಡುತ್ತೇನೆ. ಸಾಮಾಜಿಕ ಜಾಲತಾಣಗಳಲ್ಲಿ ತಾವೆಲ್ಲರೂ ನೋಡುವಂತೆ ನಾವು ಯಾವುದೇ ಕಾರಣಕ್ಕೂ ಈ ಶಾಲೆಗಳನ್ನು ವಿಲೀನಗೊಳಿಸುವುದಿಲ್ಲ. ಎಷ್ಟೋ ಬಾರಿ ನಾನು ಈ ಸದನದಲ್ಲಿ ಕೂಡ ಹೇಳಿದ್ದೇನೆ. ಒಂದು ಮಗುವಿದ್ದರೂ ಯಾವುದೇ ಸಂದರ್ಭದಲ್ಲಿ voluntarily ನಾವು ಆ ಶಾಲೆಗಳನ್ನು ಮುಚ್ಚುವುದಿಲ್ಲ ಹಾಗೂ ಬಿಸಿಯೂಟವನ್ನೂ ನಿಲ್ಲಿಸುವುದಿಲ್ಲ. ಈ ಸದನದ ಮೂಲಕ ಮನವಿ ಮಾಡುವುದೇನೆಂದರೆ ರಾಜ್ಯದ ವ್ಯವಸ್ಥೆಯಲ್ಲಿ ಸರಿಯಿಲ್ಲವೆಂದು ಖಾಸಗಿ ಶಾಲೆಗಳಿಗೆ ಹಣ ಪಾವತಿಸಿ ವ್ಯಾಸಂಗ ಮಾಡುತ್ತಿದ್ದರೆ, ದಯವಿಟ್ಟು ವಿಶ್ವಾಸವಿಟ್ಟು ಸರ್ಕಾರಿ ಶಾಲೆಗಳಿಗೆ ಬನ್ನಿ. ಸ್ವಲ್ಪ ಕೊರತೆಗಳಿರುವುದನ್ನು ಇಲ್ಲವೆಂದು ಹೇಳುವುದಿಲ್ಲ. ಶಿಕ್ಷಕರ ಕೊರತೆಯಿದ್ದಾಗ ಅತಿಥಿ ಶಿಕ್ಷಕರನ್ನು ತೆಗೆದುಕೊಳ್ಳಬೇಕಾದರೂ ಕೂಡ ಕಂತು–ಕಂತಿನಲ್ಲಿ ತೆಗೆದುಕೊಳ್ಳುತ್ತಿದ್ದೆವು. ಇವೆಲ್ಲವೂ ಫಲಿತಾಂಶದ ಮೇಲೆ ಪರಿಣಾಮ ಬೀರಿದ್ದವು.

ಮಾನ್ಯ ಸದಸ್ಯರಾದ ಶ್ರೀ ವಿವೇಕಾನಂದರವರು ಮಾತನಾಡುತ್ತಾ, ಗುಣಮಟ್ಟದ ಫಲಿತಾಂಶ ಬರುತ್ತದೆ ಎನ್ನುವ ವಿಶ್ವಾಸವಿದೆ ಎಂದು ಹೇಳಿದರು. ಇದು ಈ ಒಂದೂವರೆ – ಎರಡು ವರ್ಷಗಳಲ್ಲಿ ನಾವು ತೆಗೆದುಕೊಂಡಿರುವ ಕ್ರಮಗಳು. ಊಟ ಕೊಡುತ್ತೇವೆ, ಬಟ್ಟೆ ಕೊಡುತ್ತೇವೆ, ಶೂಸ್ ಕೊಡುತ್ತೇವೆ. ಆದರೂ ವಿದ್ಯಾರ್ಥಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ಶಿಕ್ಷಕರೇ ಇಲ್ಲವಾದರೆ ಹೇಗೆ? ದೇವಸ್ಥಾನವೆಂದರೆ ಅಲ್ಲಿ ಗಂಟೆ ಬಾರಿಸುವುದಕ್ಕೆ ಪೂಜಾರಿ ಇರಲೇಬೇಕು. ಇಲ್ಲವಾದರೆ ಅಲ್ಲಿ ಯಾರೂ ಹೋಗುವುದಿಲ್ಲ. ಮಕ್ಕಳಿದ್ದರೆ

ಶಾಲೆ. ಮಕ್ಕಳು ಯಾವಾಗ ಶಾಲೆಗೆ ಹೋಗುತ್ತಾರೆಂದರೆ ಶಿಕ್ಷಕರಿದ್ದರೆ ಹೋಗುತ್ತಾರೆ. ತಮಗೆಲ್ಲಾ ತಿಳಿದಿರುವಂತೆ ಅತಿಥಿ ಶಿಕ್ಷಕರನ್ನು ಕಂತುಗಳಲ್ಲಿ ಕೊಡಲಾಗುತ್ತಿತ್ತು. ಕಳೆದ ಬಾರಿಯ ಬಜೆಟ್‌ನಲ್ಲಿಯೇ ಘೋಷಣೆ ಮಾಡಲಾಯಿತು. ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳಿದೆ. "ಸರ್, ಕೊರತೆ ಇರುವುದು ನಿಜ, ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಅತಿಥಿ ಶಿಕ್ಷಕರನ್ನು ಕೊಡಿ. ಅವರು ಕೂಡ qualified ಇದ್ದಾರೆ. ನಾವೇನು ಹೆಚ್ಚು ಹೊರೆ ಮಾಡುವುದಿಲ್ಲ. At a time ಕೊಡಿ" ಎಂದು ಕೇಳಿದೆನು. Actually, ಅದು ನನಗೆ ಉಪಯೋಗವಾಗಿದೆ. 51,000 ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಂಡು ತರಗತಿಗಳು ಪ್ರಾರಂಭವಾದಾಗಿನಿಂದಲೂ ಪಾಠ ಹೇಳಿಕೊಡುವಂತಾಗಿದೆ. ಸದ್ಯಕ್ಕೆ ಇದು ಬೀಸುವ ದೊಣ್ಣೆಯಿಂದ ತಪ್ಪಿಸಿಕೊಂಡು ಮಕ್ಕಳಿಗೆ ಪಾಠ ಹೇಳಿಕೊಡಲು ಅನುಕೂಲವಾಗಿದೆ. ಆದರೆ ಶಾಶ್ವತವಾಗಿ ಪರಿಹಾರ ಬೇಕೆಂದರೆ ಖಾಯಂ ಶಿಕ್ಷಕರು ಬೇಕಾಗುತ್ತದೆ. ಖಾಯಂ ಶಿಕ್ಷಕರಿಂದಲೇ ಕಲಿಕೆಯನ್ನು ಕೊಡಬೇಕೆಂಬುದು ನಮ್ಮ ಉದ್ದೇಶವೂ ಆಗಿದೆ. ಗ್ರಾಮ ಪಂಚಾಯಿತಿಗೊಂದು ಕರ್ನಾಟಕ ಪಬ್ಲಿಕ್ ಶಾಲೆ ಮಾಡಬೇಕು. ಬಸ್ ಸೌಕರ್ಯವನ್ನು ನಾವು ಕೊಡುತ್ತಿದ್ದೇವೆ. ಬಸ್‌ನಲ್ಲಿ ಬರುವ ಮಕ್ಕಳನ್ನು ನೋಡಿಕೊಳ್ಳಲು ಆಯಾಗಳನ್ನು ಕೂಡ ಕೊಡಲಾಗುತ್ತದೆ.

ಇನ್ನು Governing Body ಯ ಬಗ್ಗೆ ಮಾನ್ಯ ಹಣಮಂತ ರುದ್ರಪ್ಪ ನಿರಾಣಿಯವರು ಕೇಳಿದ್ದು, ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜುಗಳಿಗಿರುವ S.D.M.C. ಮತ್ತು C.B.C. ಗಳಿಗೆ clash ಆಗುತ್ತದೆ. ಅವುಗಳಿಗೆ ಶಾಸಕರ ಅಧ್ಯಕ್ಷತೆಯಲ್ಲಿ ಒಂದು Governing Body ಮಾಡಬೇಕೆಂದಿದ್ದೇವೆ. ಏಪ್ರಿಲ್ ತಿಂಗಳಿನಲ್ಲಿ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಇಡೀ ರಾಜ್ಯಮಟ್ಟದಲ್ಲಿ ಮಾಡಲಾಗುತ್ತಿದ್ದು, ಸರಾಸರಿ ರೂ.4 ಕೋಟಿಯಾಗಲಿದೆ. ಕೆಲವು ಕಡೆ ರೂ.2 ಕೋಟಿ, ಕೆಲವು ಕಡೆ ರೂ.5 ಕೋಟಿ ಆಗುತ್ತದೆ. ಮೂಲಭೂತ ಸೌಕರ್ಯವಿರುವ ಕಡೆ ಅಲ್ಲಿ ಇನ್ನೂ ಸ್ವಲ್ಪ ಖರ್ಚು ಮಾಡಲಾಗುವುದು. ಅಲ್ಲಿ ಒಂದನೆ ತರಗತಿಯಿಂದ ಕಂಪ್ಯೂಟರ್ ತರಗತಿ ಇರುತ್ತದೆ. 6ನೇ ತರಗತಿಯಿಂದ ಕೌಶಲ್ಯಾಭಿವೃದ್ಧಿ ತರಬೇತಿಗಳು ಕೂಡ ಇರುತ್ತವೆ. ಎಲ್.ಕೆ.ಜಿ.ಯಿಂದ 12ನೇ ತರಗತಿಯವರೆಗೆ ಒಂದೇ premises ನಲ್ಲಿ ವ್ಯಾಸಂಗ ಮಾಡುತ್ತಾರೆ. ತಂದೆ ತಾಯಿಗಳಿಗೆ 14 ವರ್ಷದ ಕಲಿಕೆಗಾಗಿ ಮಕ್ಕಳನ್ನು ಒಂದೂರಿನಿಂದ ಮತ್ತೊಂದೂರಿಗೆ ಕಳುಹಿಸುವ ಅವಶ್ಯಕತೆ ಬರುವುದಿಲ್ಲ. ಯಾರು ಯಾರು ನಮ್ಮ ವ್ಯವಸ್ಥೆ ಸರಿಯಿಲ್ಲವೆಂದು ಸರ್ಕಾರಿ ಶಾಲೆಗಳಿಂದ ದೂರವಾಗಿದ್ದಾರೆಯೋ ಅವರೆಲ್ಲಾ ವಿಶ್ವಾಸವಿಟ್ಟು ಒಳ್ಳೆಯ ಕಲಿಕೆಗಾಗಿ ಸರ್ಕಾರಿ ಶಾಲೆಗೆ ಬರಬೇಕೆಂದು ಕೈಮುಗಿದು ಕೇಳಿಕೊಳ್ಳುತ್ತೇನೆ. ಸ್ವಲ್ಪ ತೊಂದರೆಗಳಿದ್ದರೂ, ಅದನ್ನು ಹಂತ ಹಂತವಾಗಿ ನಿವಾರಿಸಿ, ಎಲ್ಲಾ ಕಡೆಗಳಲ್ಲಿ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಮಾಡಲಾಗುವುದು.

ಈ ವರ್ಷ ಕಲಿಕೆಯ ಜೊತೆಗೆ admission drive ಅನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳುತ್ತಿದ್ದು, ಅದಕ್ಕೆ ಮಂತ್ರಿಗಳ, ಜನ ಪ್ರತಿನಿಧಿಗಳ ಹಾಗೂ ತಮ್ಮೆಲ್ಲರ ಸಹಕಾರ ಬೇಕಾಗುತ್ತದೆ. We have to promote our own Government schools, ಇಲ್ಲವಾದರೆ ಆಗುವುದಿಲ್ಲ. ದಯವಿಟ್ಟು ಮುಂದೆ ಬನ್ನಿ. Best teachers ಸರ್ಕಾರಿ ಶಾಲೆಗಳಲ್ಲಿ ಮಾತ್ರ ಸಿಗುತ್ತಾರೆ. ಏಕೆಂದರೆ ಅವರೆಲ್ಲರೂ ಮೆರಿಟ್ ಹೊಂದಿರುತ್ತಾರೆ.

ತಾವೆಲ್ಲಾ ಸಾಕಷ್ಟು ಇದರ ಬಗ್ಗೆ ಮಾತನಾಡಿದ್ದೀರಿ. ದಯವಿಟ್ಟು admission ಗಳಿಗೂ ತಾವೆಲ್ಲರೂ ಸಹಕಾರ ಮಾಡಬೇಕೆಂದು ತಮ್ಮ ವಿನಂತಿ ಮಾಡಲಚ್ಛಿಸುತ್ತೇನೆ.

**ಶ್ರೀ ನಿರಾಣಿ ಹಣಮಂತ ರುದ್ರಪ್ಪ:–** ಶಿಕ್ಷಕರನ್ನು ಯಾವ ರೀತಿಯಾಗಿ ಅಲ್ಲಿಗೆ ವರ್ಗಾವಣೆ ಮಾಡಲಾಗುತ್ತದೆ ಎಂಬುದನ್ನು ಹೇಳಿ. ಕೌನ್ಸಿಲಿಂಗ್ ಮೂಲಕವೇ ಅಥವಾ ಯಾವ ರೀತಿ?

**ಶ್ರೀ ಎಸ್.ಮಧು ಬಂಗಾರಪ್ಪ:–** ಅದು ಬಹಳ ಮುಖ್ಯವಾದುದು. ಕೆಲವು critical posts ಎಂದು ಹೇಳಿ ಈ ರಜಾಕಾಲದ ಅವಧಿಯಲ್ಲಿ ಮಾಡುತ್ತೇವೆ. ಇಷ್ಟು ವರ್ಷ ಯಾವಾಗ ಬೇಕೆಂದರೆ ಆಗ ಕೌನ್ಸಿಲಿಂಗ್ ಮಾಡುತ್ತಿದ್ದೆವು. ಈಗ ಪರೀಕ್ಷೆಗಳು ನಡೆಯುತ್ತಿವೆ. ಶಾಲೆಗಳು ಪುನರಾರಂಭಗೊಳ್ಳುವುದಕ್ಕೆ ಮುನ್ನ ಕೌನ್ಸಿಲಿಂಗ್ ಮುಗಿಸಿ, critical posts ಎಂದು ತೆಗೆದುಕೊಂಡು, ಕಡ್ಡಾಯವಾಗಿ ಭರ್ತಿ ಮಾಡುವ mechanism ಅನ್ನು ನಾವು ಮಾಡಿದ್ದೇವೆ. ಕಳೆದ ವರ್ಷಕ್ಕಿಂತಲೂ ಈ ವರ್ಷ ಗುಣಮಟ್ಟ ಚೆನ್ನಾಗಿರುತ್ತದೆ. ಮುಂದೆ ಕೂಡ ಒಳ್ಳೆಯ ರೀತಿಯ planning ಅನ್ನು ನಾವು ಮಾಡುತ್ತೇವೆ. Any time ತಾವು ಸಲಹೆಗಳನ್ನು ಕೊಡಬಹುದು ಎನ್ನುವ ಮಾತನ್ನು ನಾನು ತಮಗೆ ಹೇಳಬಯಸುತ್ತೇನೆ.

**ಪ್ರಶ್ನೆ ಸಂಖ್ಯೆ 562**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಟಿ.ಎನ್.ಜವರಾಯಿಗೌಡ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಇಂಧನ ಸಚಿವರು ನನ್ನ ಪ್ರಶ್ನೆಗೆ ಸಮಗ್ರವಾದ ಉತ್ತರವನ್ನು ಒದಗಿಸಿದ್ದಾರೆ. ಅವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ 2-3 ವಿಚಾರಗಳನ್ನು ಅವರ ಗಮನಕ್ಕೆ ತರಬಯಸುತ್ತೇನೆ.

ರಾಜ್ಯದಲ್ಲಿ ಬೇಸಿಗೆ ಆರಂಭಕ್ಕೂ ಮುನ್ನ ವಿದ್ಯುತ್ ಬಳಕೆ ಪ್ರಮಾಣವು ಗಣನೀಯವಾಗಿ ಏರಿಕೆಯಾಗಿದ್ದು, ಮುಂದಿನ ಮೂರು ತಿಂಗಳಲ್ಲಿ ವಿದ್ಯುತ್ ಬಳಕೆಯು ಸಾರ್ವಕಾಲಿಕ ದಾಖಲೆಯ ಮಟ್ಟಕ್ಕೆ ತಲುಪುವ ಮುನ್ಸೂಚನೆಯಿದೆ. ಬೇಸಿಗೆಯ ವೇಳೆಯಲ್ಲಿ ಪ್ರತಿದಿನ ವಿದ್ಯುತ್ ಬಳಕೆಯು 19,000 ಮೆಗಾವ್ಯಾಟ್ ಗಡಿ ದಾಟುವ ಅಂದಾಜು ಇದೆಯೆಂದು ಇಂಧನ ಇಲಾಖೆಯವರೇ ಅಂದಾಜಿಸಿರುವುದು ನನ್ನ ಗಮನಕ್ಕೆ ಬಂದಿದೆ. ಇಂಧನ ಇಲಾಖೆಯ ಮಾಹಿತಿಯ ಪ್ರಕಾರ ಈ ಹಿಂದೆ ರಾಜ್ಯದಲ್ಲಿ 2022ನೇ ಸಾಲಿನ ಬೇಸಿಗೆ ಸಮಯದ ಬಳಕೆ 14,766 ಮೆಗಾವ್ಯಾಟ್ ಇದ್ದರೆ 2026ರಲ್ಲಿ ಬೇಡಿಕೆ ವಿದ್ಯುತ್ ಪ್ರಮಾಣ 17,220 ಮೆಗಾವ್ಯಾಟ್‌ಗೆ ತಲುಪಿದೆ. ಈ ವರ್ಷ ವಿದ್ಯುತ್ ಉತ್ಪಾದನೆ ಹೆಚ್ಚಾದರೂ, ವಿದ್ಯುತ್ ಅನ್ನು ಗುಣಮಟ್ಟ ಮತ್ತು ತಡೆರಹಿತವಾಗಿ ಪೂರೈಸಲು ಇರುವ ವ್ಯವಸ್ಥೆಗಳ ದೋಷಗಳನ್ನು ಸರಿಪಡಿಸಲು ಸರ್ಕಾರ ಕ್ರಮ ವಹಿಸಬೇಕು. ನಗರ ಮತ್ತು ಗ್ರಾಮೀಣ ಪ್ರದೇಶಗಳಿಗೆ ನಿರಂತರ ವಿದ್ಯುತ್ ಸರಬರಾಜು ಆಗದಿದ್ದರೆ ಕುಡಿಯುವ ನೀರಿಗೆ ತುಂಬಾ ಸಮಸ್ಯೆಯಾಗುತ್ತದೆ. ಪರೀಕ್ಷೆಗಳ ಸಮಯವಾದ್ದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ.

**ವೈಸ್ ಛೇರ್ಮನ್:-** ಮಾನ್ಯ ಜವರಾಯಿಗೌಡರೆ, ನೀವು ಏನಾಗಬೇಕೆಂದು ಮಾನ್ಯ ಸಚಿವರಿಗೆ ಪ್ರಶ್ನೆಯನ್ನು ಕೇಳಿ.

**ಶ್ರೀ ಟಿ.ಎನ್. ಜವರಾಯಿಗೌಡ:-** ಮಾನ್ಯ ಸಭಾಪತಿಯವರೆ, ನಾನು ಸಮಸ್ಯೆಗಳನ್ನು ಪಟ್ಟಿ ಮಾಡಿಕೊಂಡು ಮಾನ್ಯ ಸಚಿವರಿಗೆ ಕೇಳುತ್ತಿದ್ದೇನೆ. ಇದೇ ನನ್ನ ಪ್ರಶ್ನೆ.

ಮಾನ್ಯ ಸಭಾಪತಿಯವರೆ, ಈ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಿಸಲು ನಿರಂತರವಾಗಿ ವಿದ್ಯುತ್ ಸರಬರಾಜು ಮಾಡಬೇಕೆಂದು ನಾನು ಕೇಳಿದ್ದೇನೆ. ಅದಕ್ಕೆ ವ್ಯವಸ್ಥೆ ಮಾಡಿಕೊಂಡಿದ್ದೇವೆ ಎಂದು ಸಚಿವರು ಹೇಳಿದ್ದಾರೆ. ಮುಂದೆ ಸಮಸ್ಯೆ ಎದುರಾಗುವ ಸಂದರ್ಭವನ್ನು ಅವರ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಸಚಿವರಿಗೆ ಮತ್ತೊಂದು ಉಪ ಪ್ರಶ್ನೆಯೇನೆಂದರೆ ಕರ್ನಾಟಕ ರಾಜ್ಯದಲ್ಲಿ ಸುಪ್ರೀಂ ಕೋರ್ಟ್ ನಿರ್ದೇಶನದ ಮೇರೆಗೆ ಮನೆಗಳಿಗೆ ಸರಬರಾಜು ಮಾಡುತ್ತಿದ್ದ ಕರೆಂಟ್ ಅನ್ನು ಏಕಾಏಕಿ ನಿಲ್ಲಿಸಲಾಗಿದೆ. ಅದಾದ ನಂತರ 30'X40' ನಿವೇಶನದವರಿಗೆ ಕರೆಂಟ್ ಕೊಡಲಾಗುತ್ತಿದೆ. ಇವತ್ತು ಹಲವರು ಕಟ್ಟಡಗಳನ್ನು ಕಟ್ಟಿಕೊಂಡು ಕಾಯುತ್ತಿದ್ದಾರೆ. 30'X40' ಮೇಲೆ ಒಂದಡಿ ಜಾಸ್ತಿಯಿದ್ದರೂ ಕರೆಂಟ್ ಕೊಡುತ್ತಿಲ್ಲ. ಅದರ ಬಗ್ಗೆ ಮಾನ್ಯ ಇಂಧನ ಸಚಿವರು ಏನು ಕ್ರಮ ಕೈಗೊಂಡಿದ್ದಾರೆ ಎಂಬುದನ್ನು ಹೇಳಬೇಕು.

**ಶ್ರೀ ಕೆ.ಜೆ.ಜಾರ್ಜ್ (ಇಂಧನ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಜವರಾಯಿಗೌಡರು ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ತಮಗೆ ಗೊತ್ತಿರುವಂತೆ ನಮ್ಮ ಸರ್ಕಾರ ಬಂದಾಗ ಒಂದು ತಿಂಗಳು ಮಾತ್ರ power cut ಮಾಡುವ ವ್ಯವಸ್ಥೆ ಇತ್ತು. ಏಕೆಂದರೆ ಅದಕ್ಕೂ ಮೊದಲು ಕೋವಿಡ್ ಇತ್ತು. ಬೇಡಿಕೆ ಕಡಿಮೆಯಿದ್ದು ಉತ್ಪಾದನೆ ಜಾಸ್ತಿಯಿತ್ತು.

**(ಮುಂದು)**

(249) 09.03.2026, 12.50, ಕೆಜಿ :ಬಿಎಸ್ಎಸ್ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

ಶ್ರೀ ಕೆ.ಜೆ.ಜಾರ್ಜ್ (ಮುಂದು):–

ಅದಕ್ಕೆ ನಮ್ಮ ಮಾನ್ಯ ಮುಖ್ಯಮಂತ್ರಿಯವರು ರೈತರ ಸಭೆ ಕರೆದಾಗ ರಾಜ್ಯದ ಎಲ್ಲಾ ಭಾಗದ ರೈತರು agriculture ಗೆ seven hours ಪವರ್ ಕೊಡದಿದ್ದರೆ ಪರವಾಗಿಲ್ಲ. ಆದರೆ, ಎಷ್ಟು ಗಂಟೆ ಕೊಡುತ್ತೀರಿ ಎಂಬುದನ್ನು ಸರಿಯಾಗಿ ಹೇಳಿ ಎಂದು ರೈತರು ನಮ್ಮನ್ನು ಕೇಳಿದರು. ಈ ಬಗ್ಗೆ ನಾನು ನಮ್ಮ ಅಧಿಕಾರಿಗಳನ್ನು ಕೇಳಿದಾಗ, ಅವರು 5 ಗಂಟೆಗಳ ಕಾಲ ನಿರಂತರವಾಗಿ ಪವರ್ ಕೊಡಬಹುದೆಂದು ಹೇಳಿದರು. ಒಂದೇ ತಿಂಗಳನಲ್ಲಿ ಅವರು ಏನು ಹೇಳಿದರು ಎಂದರೆ, ನೋಡಿ seven hours ಕೊಡಬೇಕು ನಮಗೆ commitment ಇದೆ ಎಂದು ಹೇಳಿದರು. ನಾವು ಇಲ್ಲಿಯವರೆಗೆ ಆ ಒಂದು ತಿಂಗಳು ಬಿಟ್ಟು ಬಾಕಿ ಎಲ್ಲಾ ದಿವಸಗಳಲ್ಲಿ seven hoursಪವರ್ ಕೊಡುತ್ತಿದ್ದೇವೆ. ಮಾನ್ಯ ಸದಸ್ಯರು ಸರಿಯಾಗಿ ಪ್ರಶ್ನೆ ಕೇಳಿದ್ದಾರೆ. ನಮಲ್ಲಿ power shortage ಇಲ್ಲ. ಈಗ ಪಂಜಾಬ್, ಯು.ಪಿ ಮತ್ತು ಬೇರೆ ಬೇರೆ ರಾಜ್ಯಗಳಿಂದ ಅವರಿಗೆ excess ಇರುವಾಗ ಅವರಿಂದ ನಾವು ಪವರ್ ತೆಗೆದುಕೊಳ್ಳುತ್ತೇವೆ. ನಾವು barter system ಅನ್ನು ಮಾಡುತ್ತಿದ್ದೇವೆ. ಮತ್ತೆ ಕೇಂದ್ರ ಸರ್ಕಾರದ grid ಗಳಿಂದ ಬೇಕಾಗಿರುವಂತಹದ್ದು ಬರುತ್ತಿದೆ. ಮಾನ್ಯ ಸದಸ್ಯರು power shortage ಆಗುತ್ತದೆ ಎಂದು ಹೇಳಿದರು. ನಮಗೆ power shortage ಆಗುತ್ತದೆ ಎಂದು ಗೊತ್ತಿದ್ದರಿಂದ ಆ power shortage ಗೆ ಈಗಾಗಲೇ ವ್ಯವಸ್ಥೆ ಮಾಡಿಕೊಂಡಿದ್ದೇವೆ. ನಮ್ಮ ಬಳಿ ಆ ಒಂದು ತಿಂಗಳು ಬಿಟ್ಟು, ಇನ್ನು ಮುಂದೆಯೂ ಸಹ power shortage ಬರದಂತೆ ಎಲ್ಲಾ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಅಲ್ಲಿ power ಇದ್ದರೂ ಸಹ, ಏನು ತೊಂದರೆಯಾಗುತ್ತಿದೆ ಎಂಬುದರ ಬಗ್ಗೆ ಎಲ್ಲಾ ಜಿಲ್ಲೆಗಳಿಗೆ ಭೇಟಿ ಕೊಟ್ಟು ಎಲ್ಲಾ M.L.A.s, M.L.C.s ಇರಬಹುದು, people representatives ರವರನ್ನು ಕರೆದು ಸಭೆಯನ್ನು ಮಾಡಿದ್ದೇನೆ. North Canara ಗೆ ಹೋಗಬೇಕಾಗಿದೆ. ಇದನ್ನು ಬಿಟ್ಟು ಎಲ್ಲಾ ಕಡೆಗೂ ಹೋಗಿದ್ದೇನೆ. ಅಲ್ಲಿ ಸಮಸ್ಯೆ ಏನಾಗಿದೆ ಎಂದರೆ, power ಇದ್ದರೂ ಸಹ last mile connectivity ಮಾಡಬೇಕಾದರೆ, sub station ಗಳಿಗೆ ಕೆಲವು ಕಡೆ capacity ಇಲ್ಲ. ಕೆಲವು ಕಡೆಗಳಲ್ಲಿ ನಮ್ಮ conductors ಸಾಕಷ್ಟು ಇಲ್ಲ. ನಾವು ಇದನ್ನೆಲ್ಲಾ ಸರಿ ಮಾಡುವುದಕ್ಕೆ immediate ಆಗಿ K.P.T.C.L. ಮತ್ತೆ BESCOM ನವರಿಗೆ link line ಕೊಡಿ ಎಂದು ಸಹ ಹೇಳಿದ್ದೇನೆ. ಈ ಎಲ್ಲಾ ವ್ಯವಸ್ಥೆಗಳನ್ನು ಮಾಡುತ್ತಿದ್ದೇವೆ.

ಮಾನ್ಯ ಸದಸ್ಯರು ಇನ್ನೊಂದು ಪ್ರಶ್ನೆಯನ್ನು ಕೇಳಿದ್ದಾರೆ. ಅದು Supreme Court ನ ಆದೇಶ, ನಮಗೆ ಅದು ಬರುವುದಿಲ್ಲ. ಅದು B.B.M.P. ಗೆ ಬರುತ್ತದೆ. ಅದು T.M.C. ಮತ್ತು C.M.C. ಗೆ ಬರುತ್ತದೆ. ಮತ್ತೆ R.D.P.R. ಗೆ ಬರುತ್ತದೆ. Supreme Court ನವರು ಒಂದು ಆದೇಶವನ್ನು ಕೊಟ್ಟಿದ್ದಾರೆ. ನೀವು power connection ಕೊಡಬೇಕಾದರೆ, ಒಂದು Occupancy certificate ಇರಬೇಕು ಅಥವಾ Commencement Certificate ಇರಬೇಕೆಂದು ಹೇಳಿದ್ದಾರೆ. ಮೊನ್ನೆ ದಿವಸ ನಮ್ಮ ಕ್ಯಾಬಿನೆಟ್‌ನಲ್ಲಿ 30' X 40' ಅಳತೆಯ ನಿವೇಶನದವರೆಗೆ Occupancy Certificate ಬೇಕಾಗಿಲ್ಲ, ನಾವು ಅವರಿಗೆ ಕೊಡಬಹುದೆಂದು ಆಗಿದೆ. ಹಾಗಾಗಿ, ನಾವು ಅದನ್ನು ಈಗಾಗಲೇ ಕೊಡುವುದಕ್ಕೆ ಪ್ರಾರಂಭ ಮಾಡಿದ್ದೇವೆ. Above 30' X 40' ಅಳತೆಯ ನಿವೇಶನಗಳಿಗೆ ನಮ್ಮ ಕ್ಯಾಬಿನೆಟ್‌ನಲ್ಲಿ ಒಂದು decision ತೆಗೆದುಕೊಳ್ಳಬೇಕಾಗುತ್ತದೆ. ಈಗಾಗಲೇ ಮಾನ್ಯ ಡಿ.ಸಿ.ಎಂ.ರವರು ಹೇಳಿದ್ದಾರೆ. ಏಕೆಂದರೆ, ಮಾನ್ಯ ಡಿ.ಸಿ.ಎಂ.ರವರು ಕ್ಯಾಬಿನೆಟ್‌ನಲ್ಲಿ ಒಂದು proposal move ಮಾಡಿದರೆ ಬಾಕಿ ಇರುವುದನ್ನು adopt ಮಾಡಿಕೊಳ್ಳಬಹುದು. ಆ ತರಹ ಮಾಡುತ್ತಿದ್ದೇವೆ. ಅದನ್ನು ಆದಷ್ಟು ಬೇಗ ಮಾಡುತ್ತೇವೆ. ಈ ವರ್ಷ ನಮ್ಮಲ್ಲಿ ಸುಮಾರು 100 sub station ಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ನಮ್ಮ sub station ನಿಂದ ಯಾವುದೇ proposal ಬಂದರೂ ಸಹ, ಅದನ್ನು ನಮ್ಮ Board ನಲ್ಲಿ approve ಮಾಡುತ್ತಿದ್ದೇವೆ. ಈಗ ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾರವರಿಂದ ಇದೇ ರೀತಿಯ ಮುಂದಿನ ಪ್ರಶ್ನೆ ಬರುತ್ತಿದೆ. ಅದಕ್ಕೆ ಉತ್ತರ ಕೊಡುತ್ತೇನೆ. ನಮಗೆ ಜಾಗ ಬೇಕಾಗಿತ್ತು. ನಮಗೆ ಜಾಗ ಕೊಟ್ಟರೆ ಅಲ್ಲಿ sub station ಕೊಡುವುದಕ್ಕೆ ಯಾವುದೇ ತೊಂದರೆ ಇಲ್ಲ. ಈ ವರ್ಷ ಸುಮಾರು 100 sub station ಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಮೊದಲು ಒಂದು ವರ್ಷಕ್ಕೆ 40 sub station ಗಳನ್ನು ಮಾಡಿದ್ದೆವು. ಈ 4 ವರ್ಷಕ್ಕೆ ಸುಮಾರು 400 sub station ಗಳನ್ನು ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೇವೆ. ತಮಗೂ ಗೊತ್ತಿದೆ. ಆದರೂ ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಈ ವಿಷಯದಲ್ಲಿ ಏಕೆ ರಾಜಕೀಯ ಮಾಡುತ್ತಾರೆಂದು ಗೊತ್ತಿಲ್ಲ. ಇವತ್ತು ರಾಜ್ಯದಲ್ಲಿ ಸೌರಶಕ್ತಿ, ಇದು ದೇವರು ಕೊಟ್ಟಂತಹ ಒಂದು ವರ. ಮತ್ತೆ wind energy ಇದೆ. ನಮ್ಮ ಬಳಿ day time ನಲ್ಲಿ ಆದಷ್ಟು power ಇದೆ. ಆದರೆ, peak hours ನಲ್ಲಿ ಅಂದರೆ, ಬೆಳಗ್ಗೆ ಮತ್ತು ರಾತ್ರಿ ವೇಳೆ power ಸಿಗುವುದಕ್ಕೆ ಕಷ್ಟವಾಗುತ್ತಿದೆ. ಅದಕ್ಕಾಗಿ ನಾವು pumped storage ಅನ್ನು ಮಾಡಿದ್ದೇವೆ. ಉದಾಹರಣೆಗೆ ಹೇಳುವುದಾದರೆ ಶರಾವತಿ ಯೋಜನೆ. ತಮಗೆ ಗೊತ್ತಿದೆ. ಶರಾವತಿ ಯೋಜನೆಯಲ್ಲಿ ಸಾವಿರಾರು ಎಕರೆ ಜಮೀನು ಮುಳುಗಡೆಯಾದ ಮೇಲೆ ಸಾವಿರಾರು ಜನ ರೈತರನ್ನು ಅಲ್ಲಿಂದ rehabilitation ಮಾಡಿದ ಮೇಲೆ, ನಮಗೆ ಇವತ್ತು ಶರಾವತಿಯಲ್ಲಿ ಬರಿ ಸಾವಿರ ಮೆಗಾ ವ್ಯಾಟ್ ವಿದ್ಯುತ್ ಸಿಗುತ್ತಿದೆ. ಇದು ಕೇಂದ್ರ ಸರ್ಕಾರದ priority scheme. ಅದನ್ನು Prime Minister's office ನಿಂದಲೇ monitor ಮಾಡುತ್ತಾರೆ. ನಮಗೆ ಶರಾವತಿ ಮತ್ತು ವರಾಹಿ ಈ ಎರಡು ಜಾಗದಲ್ಲಿ reservoir ಇದೆ. ಅಲ್ಲಿ ವಿದ್ಯುತ್ ಉಪಯೋಗ ಮಾಡಿ ಕಳುಹಿಸುವಂತಹ ನೀರನ್ನು ಮತ್ತೆ pump ಮಾಡುತ್ತೇವೆ. ಕೆಳಗಡೆ ಮತ್ತೆ

reservoir ಇದೆ. ಸಾವಿರಾರು ಎಕರೆ ಜಮೀನು ಮುಳುಗಡೆ ಮಾಡುವ ಜಾಗದಲ್ಲಿ ನಮಗೆ ಅಲ್ಲಿ 110 ಎಕರೆ ಜಮೀನು ಬೇಕಾಗಿದೆ. ಈ 110 ಎಕರೆ ಜಮೀನಿನಲ್ಲಿ ನಾವು pipeline ಹಾಕಿದ ಮೇಲೆ, ಅಲ್ಲಿ ಮಣ್ಣು ಮುಚ್ಚುತ್ತಾರೆ. ಅದು forest ಆಗುತ್ತದೆ.

(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)

ಮಾನ್ಯ ಸಭಾಪತಿಯವರೇ, ಮತ್ತೆ ಯಾವುದೇ wild animals ಇದ್ದರೂ ಸಹ, ಇದು ತಮಗೆ ಗೊತ್ತಿದೆ. ಶರಾವತಿ ಯೋಜನೆ ಮಾಡಿದಾಗ ಸಾಕಷ್ಟು wild animals ಇದ್ದರೂ ಸಹ, ಅವು ಹೊರಗಡೆ ಹೋಗಿ ಮತ್ತೆ ಅಲ್ಲಿಗೆ ಬರುತ್ತವೆ. ನಮಗೆ 2,000 mega watt power ಅದು peak hours ನಲ್ಲಿ ಸಿಗುವಂತಹ ಒಂದು project ಅದು. ಅದಕ್ಕೆ ಏಕೆ ಹೀಗೆ ಮಾಡುತ್ತಾರೆ? ನನಗೆ ಗೊತ್ತಿದೆ. ನಾನು Bengaluru Development Minister ಆದಂತಹ ಸಂದರ್ಭದಲ್ಲಿ ಹೆಬ್ಬಾಳದಿಂದ steel bridge ಮಾಡುವುದಕ್ಕೆ propose ಮಾಡಿದ್ದೆ. ಆಗಲೂ oppose ಮಾಡಿದರು. ಈಗ ಇಂತಹ ಒಳ್ಳೆಯ project ಆಗಿದೆ. ನಾಳೆ ಅದು ಆಗುವುದಿಲ್ಲ. ಈಗ ಅದನ್ನು ತೆಗೆದುಕೊಂಡರೆ, ಸುಮಾರು 3-4 ವರ್ಷಗಳಲ್ಲಿ pumped storage ಆಗುತ್ತದೆ. ಅದೇ ತರಹ ವರಾಹಿಯಲ್ಲಿ ಮಾಡಬಹುದು. ಈ ರೀತಿ 3-4 ಜಾಗಗಳಲ್ಲಿ ಮಾಡಿದರೆ ನಮಗೆ ಈ excess electricity ಯನ್ನು storage ಮಾಡುವುದಕ್ಕೆ ಆಗುತ್ತದೆ. ಇವತ್ತು electricity storage ಮಾಡಬೇಕಾದರೆ, battery ಯಲ್ಲಿ ಮಾಡಬೇಕಾಗುತ್ತದೆ. ಬ್ಯಾಟರಿಯಲ್ಲಿ storage ಮಾಡಬೇಕಾದರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ, ನಾನು ತಮ್ಮ ಮೂಲಕ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಈ ಬಗ್ಗೆ ಬೇಕಾದರೆ, ಒಂದು ಸಂವಾದವನ್ನು ಮಾಡೋಣ. ಈ ರೀತಿ ತೊಂದರೆಯಾಗುತ್ತಿದೆ ಎಂದು ನನ್ನ ಬಳಿ ಯಾರು ಬಂದು ಕೇಳಲಿಲ್ಲ. ಯಾರೇ ಬಂದು ಕೇಳಿದರೂ ಸಹ, I am willing to discuss with them. ಆ ಬಗ್ಗೆ ಮಾತನಾಡಿ ಅವರಿಗೆ ಏನು ತೊಂದರೆ ಇದೆ ಅದನ್ನು ನಿವಾರಿಸೋಣ. ಇವತ್ತು ನಾವು ಯಾವುದೇ ಒಂದು project ಅನ್ನು ಮಾಡಬೇಕಾದರೂ ಸಹ ನಮ್ಮ State Wild Life department ನಿಂದ ಅನುಮತಿ ಕೊಡಬೇಕು. Central Wild Life department ನಿಂದ ಅನುಮತಿ ಕೊಡಬೇಕು. ಮತ್ತೆ ನಮಗೆ earthquake ವಿಚಾರದಲ್ಲಿ ಅನುಮತಿ ಕೊಡಬೇಕು. ಇದನ್ನೆಲ್ಲಾ ಕೊಟ್ಟ ಮೇಲೆ ನಾವು ಮಾಡುವುದಕ್ಕೆ ಆಗುತ್ತದೆ. ಅದು ಬಾಕಿ ಇರುವಾಗಲೇ ಹೋಗಿ ಗಲಾಟೆ ಮಾಡುವುದು, ಮತ್ತೊಂದು ಮಾಡುವುದು ಸರಿಯಲ್ಲ. ನಿಜವಾಗಲೂ ಯಾರು ಆ ರೀತಿ ಮಾಡಬಾರದು. ಅದು ರಾಜ್ಯ ಮತ್ತು ರಾಷ್ಟ್ರಕ್ಕೆ ನಷ್ಟ ಆಗುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಸದಸ್ಯರು ಹೇಳಿರುವಂತಹ ವಿಷಯದ ಬಗ್ಗೆ ನಾನು ಈಗಾಗಲೇ ಎಲ್ಲಾ ಕ್ರಮಗಳನ್ನು ತೆಗೆದುಕೊಂಡಿದ್ದೇನೆ. ನಮ್ಮ ಇಲಾಖಾ ಅಧಿಕಾರಿಗಳು ನಿರ್ವಹಣೆ ಮಾಡುತ್ತಿದ್ದಾರೆ. ಅದು ಏನೇ ಇದ್ದರೂ ಸಹ ಅದಕ್ಕೆ ಪರಿಹಾರವನ್ನು ಮಾಡುವಂತಹ ಪ್ರಯತ್ನವನ್ನು ಮಾಡುತ್ತೇನೆ.

**ಪ್ರಶ್ನೆ ಸಂಖ್ಯೆ 567**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ವಿಸ್ತಾರವಾಗಿ ಕೊಟ್ಟಿದ್ದಾರೆ. ಈಗಾಗಲೇ ಮಾನ್ಯ ಸಚಿವರು ಈ ಹಿಂದಿನ ಪ್ರಶ್ನೆಗೆ ಉತ್ತರ ಕೊಡುವಂತಹ ಸಂದರ್ಭದಲ್ಲಿ ಹೇಳಿದ್ದಾರೆ. ರಾಜ್ಯಾದ್ಯಂತ ವಿದ್ಯುತ್ ಸರಬರಾಜು ಮಾಡುವುದಕ್ಕೆ ಮತ್ತು ವಿದ್ಯುತ್ ಉಪ ಕೇಂದ್ರಗಳನ್ನು ಸ್ಥಾಪನೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ.

**ಸಭಾಪತಿಯವರು:-** ಶ್ರೀ ಐವನ್ ಡಿ' ಸೋಜಾರವರೇ, ಮಾನ್ಯ ಸಚಿವರು ವಿಸ್ತಾರವಾಗಿ ಉತ್ತರ ಕೊಟ್ಟಿದ್ದಾರೆಂದು ಹೇಳಿದ ಮೇಲೆ, ತಾವು ಮತ್ತೆ ಏಕೆ ಪ್ರಶ್ನೆ ಕೇಳುತ್ತೀರಿ? ವಿಸ್ತಾರವಾಗಿ
ಉತ್ತರ ಕೊಟ್ಟ ಮೇಲೆ ಮತ್ತೆ ಕೇಳಬಾರದು.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಈ ಪ್ರಶ್ನೆ ಕೇಳಿದಾಗ, ಅವರ ಹಿಂದಿನ ಪ್ರಶ್ನೆಯು ಅದೇ ಇತ್ತು. ನಾನು ಈ ಪ್ರಶ್ನೆಯನ್ನು ಮೊದಲೇ ಬಾರಿ ಕೇಳುತ್ತಿಲ್ಲ. ನಾನು ಇದನ್ನು ಎರಡನೇ ಬಾರಿಗೆ ಕೇಳುತ್ತಿದ್ದೇನೆ. ದಿನಾಂಕ 11-08-2025 ರಂದು ಈ ಪ್ರಶ್ನೆಯನ್ನು ಕೇಳಿದ್ದೆ. ಆಗ ಮಾನ್ಯ ಸಚಿವರು ಹೌದು, sub stations ಮಾಡುವಂತಹ ಅವಶ್ಯಕತೆ ಇದೆ ಎಂದು ಹೇಳಿದ್ದರು. ನಾವು ಅಲ್ಲಿನ ರೈತರಿಗೆ ಉತ್ತಮ ಗುಣಮಟ್ಟದ ವಿದ್ಯುತ್‌ನ್ನು ಕೊಡುವುದಕ್ಕೆ ಕುಡುಪುನಲ್ಲಿ ಉಪಕೇಂದ್ರವನ್ನು ರಚನೆ ಮಾಡುವುದಕ್ಕೆ ಜಾಗವನ್ನು ಪರಿಶೀಲನೆ ಮಾಡಿದ್ದು, ಅಲ್ಲಿ 3-4 ತಿಂಗಳಲ್ಲಿ ಆ ಪ್ರಕ್ರಿಯೆಯನ್ನು ಮುಗಿಸುತ್ತೇವೆಂದು ಹೇಳಿದ್ದರು. ಹಾಗಾಗಿ, ನಾನು ಉಪಕೇಂದ್ರ ಆಗುತ್ತದೆ ಎಂದು ಭಾವಿಸಿದ್ದೆ ಮತ್ತು ಇದು ಆ ಭಾಗದ ರೈತರ ದೊಡ್ಡ ಬೇಡಿಕೆಯಾಗಿತ್ತು. ಆ ಜಿಲ್ಲೆಯ ಉಸ್ತುವಾರಿ ಸಚಿವರು ಸದನದಲ್ಲಿ ಇದ್ದಾರೆ. ಕೆ.ಡಿ.ಪಿ. ಸಭೆ ನಡೆಯಬೇಕಾದರೆ, ಬಹಳಷ್ಟು ಜನರ ರೈತರು ಬಂದು ನಮಗೆ sub station ಮಾಡಿಕೊಡಿ ಎಂದು ಒತ್ತಾಯ ಮಾಡಿದ ಹಿನ್ನೆಲೆಯಲ್ಲಿ ಕೆ.ಡಿ.ಪಿ. ಸಭೆಯಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದೆವು. ನಾವು ಮಾನ್ಯ ಸಚಿವರಿಗೆ ಹೇಳುವುದು, ಮತ್ತೆ ಮಾಡಿಕೊಡುವುದು ಎಂದು ಆಗಿತ್ತು. ಈಗ ಮಾನ್ಯ ಸಚಿವರು ಉತ್ತರದಲ್ಲಿ sub station ಅನ್ನು ಮಾಡಿಕೊಡುತ್ತೇನೆಂದು ಹೇಳಿದ್ದಾರೆ. ಮತ್ತೆ ಇದನ್ನು ಕೂಡಲೇ ಮಾಡಿಕೊಡುತ್ತೇನೆಂಬ ಮಾತನ್ನು ಹೇಳಿದ್ದಾರೆ. ನಾನು ಮಾನ್ಯ ಸಚಿವರನ್ನು ಅಭಿನಂದಿಸುತ್ತೇನೆ. ಇದರ ಜೊತೆಯಲ್ಲಿ ಈಗಾಗಲೇ ಅರ್ಕುಳ ಮತ್ತು ಪಣಂಬೂರಿನಲ್ಲಿ 2 ಉಪ ಕೇಂದ್ರಗಳನ್ನು ಮಾಡುವುದಕ್ಕೆ ಜಾಗಗಳನ್ನು ಗುರುತಿಸಿದ್ದಾರೆ. ಇದನ್ನು ಸಹ ಮಾಡಿಕೊಡುತ್ತೇನೆಂಬ ಮಾತನ್ನು ಹೇಳಿದ್ದಾರೆ. ನಾನು ಮಾನ್ಯ ಸಚಿವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಮೂರು ಉಪ ಕೇಂದ್ರಗಳು ಮಾನ್ಯ ಸಚಿವರ ಅವಧಿಯಲ್ಲಿ ಆದಷ್ಟು ಬೇಗ ಆಗಬೇಕೆಂದು ಹೇಳುವುದು ನನ್ನ ಒತ್ತಾಯ ಇದೆ. ಇದಕ್ಕೆ ಮಾನ್ಯ ಸಚಿವರಿಂದ ಉತ್ತರವನ್ನು ಬಯಸುತ್ತೇನೆ.

**ಶ್ರೀ ಕೆ.ಜೆ.ಜಾರ್ಜ್ (ಇಂಧನ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕಳೆದ

ಅಧಿವೇಶನದಲ್ಲಿ ಈ ಪ್ರಶ್ನೆಯನ್ನು ಕೇಳಿದ್ದರು. ಆಗ ನಾನು ಆದಷ್ಟು ಬೇಗ 3-4 ತಿಂಗಳನಲ್ಲಿ ಮಾಡಿಕೊಡುತ್ತೇನೆಂದು ಹೇಳಿದ್ದೆ ಅದು ನಿಜ. ಇಲ್ಲಿ ಪ್ರಶ್ನೆ ಬಂದಿರುವುದು ಏನೆಂದರೆ, ಅಲ್ಲಿ ಸರ್ಕಾರಿ ಜಾಗ ಇಲ್ಲ. ಅಲ್ಲಿ ನಾವು ಖಾಸಗಿ ಜಾಗವನ್ನು ಖರೀದಿ ಮಾಡಬೇಕಾಗಿದೆ. ಖಾಸಗಿ ಜಮೀನನ್ನು ಖರೀದಿ ಮಾಡಬೇಕಾದರೆ, ಒಂದು ಎಕರೆಗೆ ಸುಮಾರು 3.79 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಅಂದರೆ, ಎರಡೂವರೆ ಎಕರೆಗೆ ಸುಮಾರು 8 ರಿಂದ 9 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಅದಕ್ಕೆ ನಮ್ಮ ಅಧಿಕಾರಿಗಳು ಅಷ್ಟು ಹಣ ಕೊಟ್ಟು ಖರೀದಿ ಮಾಡಿದರೆ, ನಮ್ಮ ಮೇಲೆ allegation ಬರುತ್ತದೆ ಎಂದು ಹೇಳಿದರು. ಅದಕ್ಕೆ ದಿನ ಪತ್ರಿಕೆಯಲ್ಲಿ ಒಂದು advertisement ಅನ್ನು ಹಾಕಿ ಇದಕ್ಕಿಂತ ಕಡಿಮೆ ಬೆಲೆಯಲ್ಲಿ ಯಾರಾದರೂ ಲ್ಯಾಂಡ್ ಕೊಡುವವರು ಇದ್ದರೆ ನಾವು ಖರೀದಿ ಮಾಡಲು ತಯಾರಿದ್ದೇವೆಂದು ಹೇಳಿದ್ದೆವು. ಅದಕ್ಕೆ ಯಾರು ಮುಂದೆ ಬರಲಿಲ್ಲ. ಅದಕ್ಕೆ ಈಗಾಗಲೇ ನಾವು ಅದಕ್ಕೆ ತಗಲುವ 9 ಕೋಟಿ ರೂಪಾಯಿಗಳನ್ನು sanction ಮಾಡಿದ್ದೇವೆ. ಆ ಹಣವನ್ನು ಕಟ್ಟಬೇಕಾಗುತ್ತದೆ. ಆ ಹಣವನ್ನು ಕಟ್ಟುವುದಕ್ಕೆ ನಮ್ಮ K.P.T.C.L. ನವರು ರೆಡಿ ಇದ್ದಾರೆ. ಇದರ ಮಧ್ಯದಲ್ಲಿ ನಮ್ಮ engineers ಆ ಜಾಗಕ್ಕೆ ದೊಡ್ಡ ಲಾರಿ ಹೋಗುವುದಕ್ಕೆ ಆಗುವುದಿಲ್ಲವೆಂದು ಹೇಳಿದರು. ಅದಕ್ಕೆ ನಾವು ನೇರವಾಗಿ ಅಲ್ಲಿಗೆ technical experts ಗಳನ್ನು ಕಳುಹಿಸಿದ್ದೆವು. ಅವರು ಅಲ್ಲಿನ ಜಾಗವನ್ನು ಪರಿಶೀಲನೆ ಮಾಡಿ ತೊಂದರೆ ಇಲ್ಲ, ಆ ಜಾಗದಲ್ಲಿ ಮಾಡಬಹುದು ಎಂದು ಹೇಳಿದ್ದಾರೆ. ಆದಷ್ಟು ಬೇಗ ಆ ಲ್ಯಾಂಡ್ ರೆಡಿಯಾದ ಕೂಡಲೇ ಅದನ್ನು sanction ಮಾಡುವುದಕ್ಕೆ ಈಗಾಗಲೇ ತೀರ್ಮಾನ ತೆಗೆದುಕೊಂಡಿದ್ದೇವೆ. ನಾವು ಅದನ್ನು ಮಾಡುತ್ತೇವೆ. ಮಾನ್ಯ ಸದಸ್ಯರ ಸಮೇತ ಮತ್ತು ನಮ್ಮ District in charge Minister ಸಮೇತವಾಗಿ ನನ್ನ ಬಳಿ ಹೇಳಿದ್ದಾರೆ. ಹಾಗಾಗಿ, ಅದನ್ನು ಅದಷ್ಟು ಬೇಗ ಮಾಡಿಕೊಡುತ್ತೇವೆ. ಈಗ ಎರಡು projects; ಒಂದು ಅಡ್ಯಾರು ಮತ್ತು New Mangalore Port Authority ನಿಂದ ಲ್ಯಾಂಡ್‌ಬರಬೇಕಾಗಿದೆ. ಅವರು 4 ಎಕರೆ ಲ್ಯಾಂಡ್ ಕೊಡುತ್ತೇವೆಂದು ಹೇಳಿದರೆ, ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಈಗ ಸದನದಲ್ಲಿ ಇದ್ದಾರೆ. ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಅವರ ಬಳಿ ಮಾತನಾಡಿ ನಮಗೆ ಲ್ಯಾಂಡ್ ಕೊಟ್ಟರೆ ಒಳ್ಳೆಯದು. ನಮಗೆ sub station ಮಾಡಲು land is important.

(ಮುಂದು)

**(250) 09.03.2026/1.00/ಎಂವಿ-ಕೆಎಸ್** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ.ಜೆ.ಜಾರ್ಜ್ (ಮುಂದು):-**
ಈಗ substation ಮಾಡುವುದಕ್ಕೆ ನಮಗೆ land important. ಆದಷ್ಟು ಯಾರು land ಕೊಡುತ್ತಾರೆ, ಅದನ್ನು ತಕ್ಷಣ ಬೋರ್ಡ್‌ನಲ್ಲಿ ಇಟ್ಟು, ಅದಕ್ಕೆ sanction ಕೊಡುತ್ತೇವೆ ಎಂಬ ಮಾತನ್ನು ಹೇಳಿ, ಇದನ್ನು ಆದಷ್ಟು ಬೇಗನೆ ಮಾಡಿಕೊಡುತ್ತೇವೆಂಬ ಭರವಸೆಯನ್ನು ನೀಡುತ್ತೇನೆ.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದನ್ನು ಬೇಗ ಮಾಡಿಕೊಡಲಿ ಎಂದಷ್ಟೆ.

**ಪ್ರಶ್ನೆ ಸಂಖ್ಯೆ: 591**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ) (ಡಾ:ಉಮಾಶ್ರೀ ರವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಇದೊಂದು ಬಹಳ ಸಾಮಾಜಿಕ ಕಳಕಳಿಯ ಪ್ರಶ್ನೆಯಾಗಿದೆ. ಡಾ:ಉಮಾಶ್ರೀ ಯವರು ಕರ್ನಾಟಕ ರಾಜ್ಯದಲ್ಲಿ ಭ್ರೂಣ ಹತ್ಯೆಯ ಬಗ್ಗೆ ಹೆಚ್ಚೆಚ್ಚು ಪ್ರಕರಣಗಳು ದಾಖಲಾಗುತ್ತಿರುವ ಬಗ್ಗೆ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಈ ಹಿಂದೆ ಇದನ್ನು ಸರ್ಕಾರದ ಗಮನಕ್ಕೆ ತಂದಾಗ, ಸುಮಾರು 136 ಪ್ರಕರಣಗಳು ದಾಖಲಾಗಿದ್ದವು. ಇವತ್ತು ಒಂದು ವರ್ಷದ ನಂತರ ಈ ರೀತಿಯ ಸುಮಾರು 150 ಪ್ರಕರಣಗಳು ದಾಖಲಾಗಿವೆ. ಮಾನ್ಯ ಸದಸ್ಯರ ಪ್ರಶ್ನೆ ಏನಿದೆ ಎಂದರೆ, ಮೂರು ವರ್ಷದಲ್ಲಿ ದಾಖಲಾದ ಪ್ರಕರಣಗಳು ಮತ್ತು ಅದಕ್ಕೆ ಯಾವ್ಯಾವ ಶಿಕ್ಷೆ ನೀಡಿದ್ದಾರೆ? ಮತ್ತು ಅದನ್ನು ತಡೆಗಟ್ಟಲು ಏನು ಮಾಡಿದ್ದಾರೆಂದು ಪ್ರಶ್ನೆಗಳನ್ನು ಕೇಳಿದ್ದಾರೆ. ಆದರೆ, ಇಲಾಖೆಯವರು ನೀಡಿರುವ ಅಂಕಿಅಂಶಗಳನ್ನು ನೋಡಿದಾಗ, ಇಲಾಖೆಯವರು ಯಾವುದೇ ದೊಡ್ಡ ಸಾಧನೆ ಮಾಡಿದಂತೆ ನನಗೆ ಅನಿಸುವುದಿಲ್ಲ. 2024-25ನೇ ಸಾಲಿನಲ್ಲಿ ಕೇವಲ 10 ರಿಂದ 15 ಪ್ರಕರಣಗಳನ್ನು ದಾಖಲು ಮಾಡಿದ್ದಾರೆ. ಮತ್ತೆ ಈ ರೀತಿಯ ಪ್ರಕರಣಗಳು ಮರುಕಳಿಸದಂತೆ ಈ ಭ್ರೂಣ ಹತ್ಯೆ ಮಾಡುವುದು ಇಷ್ಟು ದೊಡ್ಡ ಅಪರಾಧವೆಂದು ಇದ್ದರೂ ಕೂಡ ಅದಕ್ಕೆ ಸರಿಯಾದಂತಹ publicity ಕೊಡಲಿಲ್ಲವೆಂದು ಈ ಇಲಾಖೆಯ ಮೇಲೆ ನನ್ನದೊಂದು ಆರೋಪವಿದೆ. ಈಗ bus stand ಗಳಲ್ಲಿ hoardings ಹಾಕಿದ್ದೇವೆ, train branding ಮಾಡಿದ್ದೇವೆ, T.V. spots ಕೊಟ್ಟಿದ್ದೇವೆ, Radio jingle ನಲ್ಲಿ ಹಾಕಿದ್ದೇವೆ, ಗೋಡೆಗಳಲ್ಲಿ ಬರಹ ಬರೆಸಿದ್ದೇವೆ ಎಂದು. ಇಷ್ಟು ಗೋಡೆ ಬರಹಗಳನ್ನು ಬರೆಸಿದರೂ ಕೂಡ ಪ್ರಕರಣಗಳ ಸಂಖ್ಯೆ ಜಾಸ್ತಿಯಾಗುತ್ತಿದೆ. ಮತ್ತೆ ಈ ಪ್ರಕರಣಗಳನ್ನು ಯಾರು ಪತ್ತೆ ಹಚ್ಚುತ್ತಾರೆ, ಅಂತಹವರಿಗೆ ಸುಮಾರು 50,000/- ರೂಪಾಯಿಗಳಿಂದ 1,00,000/- ರೂಪಾಯಿಗಳವರೆಗೆ ಬಹುಮಾನವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆದರೆ, ಇದಕ್ಕೆ ಉತ್ತರ ಕೊಡುವಂಥದ್ದು, ಕಳೆದ 3 ವರ್ಷದಲ್ಲಿ ಕೇವಲ 3 ಜನರಿಗೆ ಮಾತ್ರ ಬಹುಮಾನ ನೀಡಲಾಗಿದೆ. ಅಂದರೆ, ಸುಮಾರು 150 ಪ್ರಕರಣಗಳು ದಾಖಲಾದರೂ ಸಹ ಕೇವಲ 3 ಜನರಿಗೆ ಬಹುಮಾನ ನೀಡಲಾಗಿದೆ. ಈಗ 150 ಪ್ರಕರಣಗಳು ದಾಖಲಾದರೂ ಕೇವಲ 3 ಜನರಿಗೆ ಬಹುಮಾನ ಕೊಟ್ಟಿದ್ದಾರೆಂದರೆ, ಇವರ ಪ್ರಚಾರ ಎಲ್ಲಿಗೆ ಮುಟ್ಟಿದೆ? ಮತ್ತೆ ಯಾವುದಾದರೂ ವೈದ್ಯರ ವಿರುದ್ಧ ಕ್ರಮ ತೆಗೆದುಕೊಂಡಿದ್ದಾರೆಯೇ ಎಂದು ಕೇಳಿದರೆ, ಅವರ ವಿರುದ್ಧ ಕೇಸ್ ನಡೆಯುತ್ತಿದೆ, ಅವರಿಗೆ ದಂಡ ಹಾಕಿದ್ದೇವೆಂದು ತಿಳಿಸಿದ್ದಾರೆ. ಈಗ ನಮ್ಮ ಭಾಷೆಯಲ್ಲಿ ದಂಡವೆಂದು ಹೇಳಿದರೆ, ಅದು ಸುಮ್ಮನೆ ದಂಡ. ಅದು ಏನೂ

ಪ್ರಯೋಜನವಿಲ್ಲ and no action will be taken against that. ಅದು active ಆಗಿರುವುದಿಲ್ಲ. ಹಾಗಾಗಿ, ಕೇವಲ ದಂಡ ಹಾಕಿದ್ದೇವೆ ಎಂದರೆ ಅದು ಉತ್ತರವಲ್ಲ. ಮತ್ತೆ ಸುಮಾರು ೬೦ ಪ್ರಕರಣಗಳು ನ್ಯಾಯಾಲಯದಲ್ಲಿವೆ ಎಂದು ತಿಳಿಸಿದ್ದಾರೆ. ಯಾವುದೇ ಒಬ್ಬ ವೈದ್ಯರ ಸನ್ನದನ್ನು disqualify ಮಾಡಿಲ್ಲ. ಹಾಗಾಗಿ, ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರಿಂದ ಉತ್ತರವನ್ನು ಬಯಸುತ್ತೇನೆ.

**ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾರವರು ಮಾನ್ಯ ಸದಸ್ಯರಾದ ಡಾ:ಉಮಾಶ್ರೀ ರವರ ಪರವಾಗಿ ಈ ಪ್ರಶ್ನೆಯನ್ನು ಕೇಳಿದ್ದಾರೆ, ಇದು ಖಂಡಿತವಾಗಿ ಬಹಳ ಗಂಭೀರವಾದಂತಹ ವಿಷಯವಾಗಿದೆ. ಮತ್ತೆ ಇದು ಸಮಾಜದ ಒಂದು ಸಾಮಾಜಿಕ ಪಿಡುಗು ಎಂದು ಸಹ ಹೇಳಬಹುದು. ಅದು ಏನೆಂದರೆ, ಹೆಣ್ಣು ಭ್ರೂಣ ಹತ್ಯೆಯಾಗುವಂಥದ್ದು. ಇದನ್ನು ಖಂಡಿತವಾಗಿ ಯಾರೂ ಕೂಡ ಒಪ್ಪುವಂಥದ್ದಲ್ಲ. ಮತ್ತೆ ಇದಕ್ಕೆ ಸಾಕಷ್ಟು ಕಾನೂನುಗಳಿವೆ. The Pre–Conception and Pre–Natal Diagnostic Techniques (P.C.P.N.D.T.) Act ಎಂದು ಇದೆ. ಮತ್ತೆ the Medical Termination of Pregnancy (M.T.P.) Act ಇದೆ. ಇದಕ್ಕೆ ಎಲ್ಲಾ ರೀತಿಯ ಕಾನೂನುಗಳನ್ನು ಮಾಡಿ, ಯಾವುದೇ ರೀತಿಯಲ್ಲಿ ಅನಧಿಕೃತವಾಗಿ ಲಿಂಗ ಪತ್ತೆ ಮಾಡುವಂಥದ್ದು ಆಗಬಾರದು ಎಂದು ಎಲ್ಲಾ ರೀತಿಯ ಕಾನೂನುಗಳನ್ನು ಮಾಡಿರುವಂಥದ್ದು ಇದೆ. ಮತ್ತೆ ಇಲಾಖೆಯ ಅಧಿಕಾರಿಗಳು ಎಲ್ಲೆಲ್ಲಿ ಈ ultrasound machine ಗಳು ಇರುತ್ತವೆ. ಅಂದರೆ, ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಂಗಳಿಗೆ ಹೋಗಿ ಅಲ್ಲಿ ತಪಾಸಣೆ ಮಾಡುವಂಥದ್ದು. ಮತ್ತೆ ಅಲ್ಲಿ ಏನಾದರೂ ಕೂಡ ಅಕ್ರಮ ಕಂಡು ಬರುತ್ತಿದೆಯೇ ಎಂದು ನೋಡುತ್ತಿರುತ್ತಾರೆ. ಆದರೆ, ಇದು ಅಂತಿಮವಾಗಿ ಆಗುವಂಥದ್ದು ಏನೆಂದರೆ, ಅನೇಕ ಜನರಿಗೆ ಒಂದು ಗಂಡು ಮಗು ಬೇಕು ಹೆಣ್ಣು ಮಗು ಬೇಡ ಎಂಬ ತೀರ್ಮಾನಕ್ಕೆ ಬಂದಾಗ. ಇದು ಅವರು ವೈಯಕ್ತಿಕ ಮತ್ತು ಖಾಸಗಿ ತೀರ್ಮಾನವಾಗಿರುತ್ತದೆ. ಇದು ಮತ್ತೊಬ್ಬರು ಮಾಡುವಂತಹ ತೀರ್ಮಾನವಲ್ಲ. ಮತ್ತೆ ಈಗಿನ ಕಾಲದಲ್ಲಿ ಎಲ್ಲಾ ಸರ್ಕಾರಗಳು ಕೂಡ ಇದರ ಬಗ್ಗೆ ಕ್ರಮಗಳನ್ನು ತೆಗೆದುಕೊಳ್ಳುವಂತಹ ಪ್ರಯತ್ನಗಳನ್ನು ಮಾಡಿದ್ದಾರೆ. ಇವತ್ತಿನ ದಿವಸ ಹೆಣ್ಣು ಮಕ್ಕಳಿಗೆ 'ಭಾಗ್ಯಲಕ್ಷ್ಮಿ ಬಾಂಡ್' ಕೊಡುವಂಥದ್ದು ಇರಬಹುದು. 'ಗೃಹಲಕ್ಷ್ಮಿ ಯೋಜನೆ' ಮತ್ತೆ ಮಹಿಳೆಯರಿಗೆ ಹೆಚ್ಚಿನ ಆದ್ಯತೆ ಕೊಡುವಂಥದ್ದು, ಅವರಿಗೆ ಉಚಿತ ಶಿಕ್ಷಣ ನೀಡುವಂಥದ್ದು. ಈ ರೀತಿ ಎಲ್ಲಾ ಕ್ರಮಗಳನ್ನು ತೆಗೆದುಕೊಂಡು, ಮಹಿಳೆಯರಿಗೆ ಯಾವುದೇ ರೀತಿಯ ಸಮಾನತೆ ಇಲ್ಲವೆನ್ನುವುದು ಬರಬಾರದು ಎಂದು ಅವರಿಗೆ ಹೆಚ್ಚಿನ ಆದ್ಯತೆಯನ್ನು

ನೀಡುವಂತಹ ಕೆಲಸವನ್ನು ಎಲ್ಲಾ ಸರ್ಕಾರಗಳು ಮಾಡಿಕೊಂಡು ಬಂದಿದ್ದಾರೆ. ಮತ್ತೆ ಅದೇ ರೀತಿ ಮಾಡುತ್ತಿದ್ದಾರೆ. ಆದರೆ, ಎಲ್ಲೋ ಒಂದು ಕಡೆ ಕೆಲವರಿಗೆ ಹೆಣ್ಣು ಮಗುವಾದರೆ, ನಮ್ಮ ಕುಟುಂಬದ ಹೆಸರು ಉಳಿಯುವುದಿಲ್ಲ, ಮತ್ತೆ ತಮ್ಮ ವಂಶದ ಹೆಸರು ಹೊರಟು ಹೋಗುತ್ತದೆ ಎಂಬ ಭಾವನೆ ಇರಬಹುದು. ಮತ್ತೊಂದು ಕಡೆ ಅವರಿಗೆ ಒಂದು ಗಂಡು ಮಗು ಇದ್ದರೆ ಮುಂದಕ್ಕೆ ನಮ್ಮನ್ನು ನೋಡಿಕೊಳ್ಳುವಂಥದ್ದು ಆಗುತ್ತದೆ ಎಂದು. ಇದಕ್ಕೆ ಏನೇನೋ ಕಾರಣಗಳು ಇರಬಹುದು. ಆದರೆ, ಅದೆಲ್ಲಾ ಇವತ್ತಿಗೆ ಹೋಗುತ್ತಿದೆ. ಅದು ಹೋಗುತ್ತಿಲ್ಲವೆಂದು ಹೇಳುವುದಿಲ್ಲ. ಇವತ್ತು ಹೆಚ್ಚಾಗಿ ಮೊದಲನೆ ಮಗು ಹೆಣ್ಣು ಮಗುವಾದಾಗ ಭ್ರೂಣ ಹತ್ಯೆ ಮಾಡಿಕೊಳ್ಳುವುದಕ್ಕೆ ಹೋಗುವುದಿಲ್ಲ. ಅವರು ಎರಡನೆ ಮಗು ಗಂಡು ಮಗು ಬೇಕೆಂದು ಪ್ರಯತ್ನ ಮಾಡುತ್ತಾರೆ. ಆಗ ಅದನ್ನು ಪತ್ತೆ ಹಚ್ಚಿದರೆ, ಅದು ಗಂಡು ಎಂದು ಗೊತ್ತಾದಾಗ, ಮೂರನೇ ಮಗುವನ್ನು ಭ್ರೂಣ ಹತ್ಯೆ ಮಾಡುವಂತಹ ಸಾಧ್ಯತೆಯ ಅವಕಾಶಗಳು ಹೆಚ್ಚು ಇರುವಂಥದ್ದು ನಮಗೆ ಇರುವಂತಹ ಮಾಹಿತಿ. ಆದುದರಿಂದ, ನಾವು ಅದಕ್ಕೆ ಕೆಲವು ಕಾನೂನು ತಿದ್ದುಪಡಿಗಳನ್ನು ಮಾಡಿದ್ದೇವೆ. ಈಗ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅನೇಕ ಕಾರ್ಯಾಚರಣೆಗಳನ್ನು ಸಹ ಮಾಡಿದ್ದೇವೆ. ಬಹುಶಃ ಈ ಹಿಂದೆ ಹೆಚ್ಚು ಕಾರ್ಯಾಚರಣೆಗಳು ಆಗುತ್ತಲೇ ಇರಲಿಲ್ಲ. ನಮ್ಮ ಸರ್ಕಾರ ಬಂದ ಮೇಲೆ ಸುಮಾರು ಏಳು ಕಾರ್ಯಾಚರಣೆಗಳನ್ನು ಮಾಡಿ, ಅದನ್ನು ಪತ್ತೆ ಹಚ್ಚಿ, ಅವುಗಳ ಬಗ್ಗೆ ಗುಪ್ತವಾಗಿ ಮಾಹಿತಿಗಳನ್ನು ಪಡೆದುಕೊಂಡು ಈ ರೀತಿಯಲ್ಲಿ ಮಾಡಿದ್ದೇವೆ. ಮತ್ತೆ ಅವುಗಳಲ್ಲಿ ಕೆಲವುಗಳಿಗೆ ಪ್ರಕರಣಗಳನ್ನು ದಾಖಲಿಸಿದ್ದೇವೆ. ಅವುಗಳಿಗೆ ಎಫ್.ಐ.ಆರ್. (First Information Report) ಗಳಾಗಿವೆ. ಆ ಪ್ರಕರಣಗಳು ನ್ಯಾಯಾಲಯಗಳಿಗೆ ಹೋಗುತ್ತದೆ. ನ್ಯಾಯಾಲಯಗಳಲ್ಲಿ ಯಾವ ರೀತಿಯಲ್ಲಿ ತೀರ್ಮಾನವಾಗುತ್ತದೆಂದು ಹೇಳುವುದಕ್ಕೆ ಅದು ನಮ್ಮ ಕೈಯಲ್ಲಿ ಇರುವುದಿಲ್ಲ. ಅದು ಕೂಡ ಒಂದು ವಿಷಯವಾಗಿದೆ. ಆದರೂ ಕೂಡ ರೂ. 1,00,000/- ಬಹುಮಾನದ ಮುಖಾಂತರ 3 ಜನರು ನಮ್ಮ ಮುಂದೆ ಬಂದಿದ್ದು, ಆ ಪ್ರಕರಣಗಳ ವಿರುದ್ಧವೂ ಕ್ರಮ ತೆಗೆದುಕೊಂಡಿದ್ದೇವೆ. ಈಗ ನಮ್ಮ ಉದ್ದೇಶ ಇದನ್ನು ತಡೆಗಟ್ಟಿಸುವಂಥದ್ದಾಗಿದೆ. ಮತ್ತೊಂದು ಹೇಳುವಂಥದ್ದು ಏನೆಂದರೆ, ಈ ಅಂಗ 12 ವಾರ ಆದಮೇಲೆ ಪತ್ತೆಯಾಗುತ್ತದೆ. ಅದು ಅಲ್ಲಿಯವರೆವಿಗೂ ಹೆಣ್ಣೋ ಗಂಡೋ ಎಂದು ಗೊತ್ತಾಗುವುದಿಲ್ಲ. ಆದುದರಿಂದ ನಮ್ಮ Antenatal Care (A.N.C.) registration ಏನಿದೆ, ಅದನ್ನು ಪ್ರಥಮ ಬಾರಿಗೆ 12ನೇ ವಾರಕ್ಕೆ A.N.C. registration ಮಾಡಿಕೊಳ್ಳುತ್ತೇವೆ. ನಾವು ಅದರ ನಂತರ ಅವರಿಗೆ ಆಗಾಗ ತಪಾಸಣೆ ಮಾಡಿಸುವಂಥದ್ದು. ಅಂದರೆ, ನಮ್ಮ ಆಶಾ ಕಾರ್ಯಕರ್ತೆಯರು, P.H.C.O. (Primary Health Coordinator) ಗಳು ಮತ್ತು A.N.M. (Auxiliary Nurse Midwife) ಗಳು ಮಾಡುವಂಥದ್ದು.

ಈಗ ನಾವು ಏನು ಮಾಡಬೇಕೆಂದು ಇದ್ದೇವೆಂದರೆ, ಅದು 10ನೇ ವಾರಕ್ಕೆ compulsory registration ಆಗಬೇಕು. ಅಂದರೆ, ಆ ಲಿಂಗ ಪತ್ತೆಯಾಗುವುದಕ್ಕಿಂತ ಮೊದಲೇ ಯಾರು pregnant ಆಗಿರುತ್ತಾರೆ, ಅವರು 10ನೇ ವಾರಕ್ಕೆ ಪ್ರಥಮ compulsory registration ಅನ್ನು ಮಾಡುವಂಥದ್ದಕ್ಕೆ ನಾವು ಈಗ ಒಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಮತ್ತೆ ಇಲಾಖೆಯ ವತಿಯಿಂದ ಕುಟುಂಬ ಕಲ್ಯಾಣ ಅಧಿಕಾರಿಗಳು ಎಂದು ಜಿಲ್ಲೆಯಲ್ಲಿ ಇರುತ್ತಾರೆ. ಎಲ್ಲಾ ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಬಹಳಷ್ಟು ಜವಾಬ್ದಾರಿಗಳು ಇರುತ್ತದೆ. ಅವರಿಗೆ ಕುಟುಂಬ ಕಲ್ಯಾಣದ ಯೋಜನೆಗಳು ಮತ್ತೆ ಹಲವಾರು ಜವಾಬ್ದಾರಿಗಳು ಇರುತ್ತದೆ. ನಾವು ಈಗ ಇದಕ್ಕೋಸ್ಕರ ಪ್ರತ್ಯೇಕವಾಗಿ ಒಬ್ಬರನ್ನು ನೋಡಲ್ ಅಧಿಕಾರಿ ಎಂದು ನೇಮಕ ಮಾಡಿದ್ದೇವೆ. ಮತ್ತೆ ಹಿರಿಯ ವೈದ್ಯರ ಬಳಿ ಯಾರಿಗೆ Diploma in Public Health Certificate ಇದೆಯೋ ಅಂತಹವರಿಗೆ ನೋಡಲ್ ಅಧಿಕಾರಿ ಎಂದು ಪ್ರತಿ ಜಿಲ್ಲೆಗೆ ನೇಮಕ ಮಾಡುತ್ತಿದ್ದೇವೆ. ಅವರಿಗೆ ಇಷ್ಟೇ ಕೆಲಸ. ಅಂದರೆ, ಎಲ್ಲೆಲ್ಲಿ ಈ ರೀತಿ ಆಗುತ್ತಿರುವಂತಹ ಮಾಹಿತಿ ಇದೆ ಅಥವಾ ಅವರು ಗೌಪ್ಯ ಕಾರ್ಯಾಚರಣೆ ಮಾಡುವಂಥದ್ದು ಇರಬಹುದು. ಅವರು ಪೋಲೀಸ್‌ನವರ ಜೊತೆ ಚರ್ಚೆ ಮಾಡುವಂಥದ್ದು ಇರಬಹುದು. ಇದೆಲ್ಲವನ್ನು ಮಾಡುವಂಥದ್ದಕ್ಕೆ ನಾವು ಈಗಾಗಲೇ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಿದ್ದೇವೆ. ಇದು ಒಂದು ತಿಂಗಳಿನ ಹಿಂದೆ ತೆಗೆದುಕೊಂಡಿರುವಂತಹ ಕ್ರಮವಾಗಿದೆ. ಅದೇ ರೀತಿಯಲ್ಲಿ ಬೆಂಗಳೂರಿನಲ್ಲಿ ಇಡೀ ಬೆಂಗಳೂರಿಗೆ D.C. (Deputy Commissioner) ಯವರು ಒಬ್ಬರೇ ಅಥಾರಿಟಿಯವರಾಗಿ ಇದ್ದರು. ಆದರೆ, ನಾವು ಈಗ ಏನು ಮಾಡಿದ್ದೇವೆಂದರೆ, urban ಮಾತ್ರ Appropriate Authority ಯಾಗಿ D.C. ಯವರು ಆಗಿದ್ದರು. ಆದರೆ, ಈಗ ಬೆಂಗಳೂರಿನಲ್ಲಿಯೇ ಸಾವಿರಕ್ಕಿಂತ ಹೆಚ್ಚು ಕ್ಲಿನಿಕ್‌ಗಳಿವೆ. ಅದಕ್ಕೆ ಅವರು ಇದನ್ನೆಲ್ಲಾ ನೋಡಿಕೊಳ್ಳುವುದಕ್ಕೆ ಆಗುತ್ತಿರಲಿಲ್ಲ. ಈಗ ಪ್ರತಿಯೊಂದು ಕಮಿಷನರ್ ಏನು ಇದ್ದಾರೆ, ಐದು ಕಮಿಷನರ್ ರವರನ್ನು Appropriate Authority ಯನ್ನಾಗಿ ಮಾಡಿದ್ದೇವೆ. ಮತ್ತೆ ಪ್ರತಿಯೊಂದು ಕಡೆ ಒಬ್ಬ ನೋಡಲ್ ಅಧಿಕಾರಿಯನ್ನು ನಮ್ಮ M.O.H. (Medical Officer of Health) ಗಳ ಅಧ್ಯಕ್ಷತೆಯಲ್ಲಿ ಒಂದು ತಂಡ ಮಾಡಿದ್ದೇವೆ. ಈ ಹಿಂದೆ ಒಬ್ಬರೇ ಇದ್ದರು. ಆದರೆ, ಈಗ 27 M.O.H. ಗಳು ಅವರವರ ಕ್ಷೇತ್ರಗಳಲ್ಲಿ ಈ ತಂಡಗಳ ಅಧ್ಯಕ್ಷರಾಗಿರುತ್ತಾರೆ. ಅವರು ತಪಾಸಣೆ ಮಾಡುವಂಥದ್ದು. ಮತ್ತೆ ಎಲ್ಲಾ ಸ್ಕ್ಯಾನಿಂಗ್ ಸೆಂಟರ್‌ಗಳಲ್ಲಿ ultrasound machine ಗಳನ್ನು ತಪಾಸಣೆ ಮಾಡುವಂತಹ powers ಗಳನ್ನು ಬೆಂಗಳೂರು ನಗರದಲ್ಲಿ ಈ M.O.H. ಗಳಿಗೆ ಕೊಡುತ್ತಿದ್ದೇವೆ. ನಾವು ಈ ರೀತಿಯಾಗಿ ಮಾಡಿದ್ದೇವೆ. ಈಗ ಮತ್ತೊಂದು ಸಮಸ್ಯೆ ಏನಾಗಿದೆ ಎಂದರೆ, ultrasound machine ಗಳಲ್ಲೂ ಕೂಡ, ಬಹಳ

ಆಧುನಿಕ machine ಗಳು ಬಂದುಬಿಟ್ಟಿವೆ. ಈಗ mobile ultrasound machine ಗಳು ಬಂದುಬಿಟ್ಟಿವೆ. ಈಗ ಅವುಗಳನ್ನು ಎಲ್ಲಿಗೆ ಬೇಕಾದರೂ ತೆಗೆದುಕೊಂಡು ಹೋಗಬಹುದು. ಮೊದಲು ನರ್ಸಿಂಗ್ ಹೋಂಗಳಿಗೆ ಮತ್ತೆ ಸ್ಕ್ಯಾನಿಂಗ್ ಸೆಂಟರ್ ಗಳಿಗೆ ಹೋಗಬೇಕಾಗಿತ್ತು. ಈಗ ಅದು ಅಷ್ಟು ಸುಲಭವಿಲ್ಲ. ಅಂದರೆ, technology improve ಆಗುತ್ತಿರಬೇಕಾದರೆ, ಅದರಿಂದ ಸಮಸ್ಯೆಗಳು ಸಹ ಉದ್ಭವವಾಗುತ್ತಿವೆ. ನಾವು ಈ ರೀತಿಯಾದಂತಹ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಾಮಾಣಿಕ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ನಾವು ಖಂಡಿವಾಗಿ ಒಂದು ಕಡೆ ಸಾರ್ವಜನಿಕರಿಗೆ ಅರಿವು ಮತ್ತು ಜಾಗೃತಿಯನ್ನು ಮೂಡಿಸುವಂಥದ್ದು. ಅದರ ಜೊತೆಗೆ ಅದನ್ನು ಎಲ್ಲರೂ ಕೂಡ ಒಟ್ಟಾರೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯವರು ಸೇರಿಕೊಂಡು ಕಾನೂನಾತ್ಮಕವಾಗಿ ಸಮಗ್ರವಾಗಿ ಮಾಡುವಂಥದ್ದು. ಇವತ್ತು ಭ್ರೂಣ ಹತ್ಯೆಗೆ ಈಗ ಸುಲಭವಾಗಿ ಔಷಧಿ ಸಿಗುತ್ತದೆ. ಆದರೆ, ಮೊದಲು ವೈದ್ಯರ ಬಳಿಯೇ ಹೋಗಬೇಕಾಗಿತ್ತು. ಈಗ pharmacy ಗಳಿಗೆ ಹೋಗಿ, tablet ಗಳನ್ನು ತೆಗೆದುಕೊಂಡು ಭ್ರೂಣ ಹತ್ಯೆ ಮಾಡಿಕೊಳ್ಳಬಹುದಾಗಿದೆ. ಈಗ 24ನೇ ವಾರದವರೆಗೂ ಯಾವುದೇ ವೈದ್ಯರ ಅವಶ್ಯಕತೆಯೇ ಇರುವುದಿಲ್ಲ.

**(ಮುಂದು)**

(251) 09.03.2026 01.10 **LL-KS** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ದಿನೇಶ್ ಗುಂಡೂರಾವ್(ಮುಂದು):-**

ಆ tablet ಅನ್ನು ತೆಗೆದುಕೊಳ್ಳುವುದರ ಮೂಲಕ ಭ್ರೂಣ ಹತ್ಯೆ ಮಾಡುವಂಥದ್ದು ಆಗಿದೆ. ಆದುದರಿಂದ, ನಮ್ಮ Medical **Termination of Pregnancy (M.T.P.) Act** ಮತ್ತು **The Pre-Conception and Pre-Natal Diagnostic Techniques (P.C.P.N.D.T.) Act** ಗಳನ್ನು combine ಮಾಡಿ, review ಮಾಡಬೇಕೆಂದು ಈಗಾಗಲೇ ನಾವು ನಿರ್ದೇಶನ ನೀಡಿರುತ್ತೇವೆ. ಹಾಗಾಗಿ, ಭ್ರೂಣ ಹತ್ಯೆಯನ್ನು ತಡೆಗಟ್ಟುವ ವಿಚಾರದಲ್ಲಿ ಸರ್ಕಾರದಿಂದ ಈ ರೀತಿಯ ಪ್ರಯತ್ನಗಳು ನಡೆಯುತ್ತಿವೆ. ಆದಾಗ್ಯೂ, ಈ ವಿಚಾರದಲ್ಲಿ ಈಗಾಗಲೇ ನಾವು ಕೆಲವು ಕ್ರಮಗಳನ್ನು ತೆಗೆದುಕೊಂಡಿದ್ದು, ಇದರ ಜೊತೆಗೆ, ಸ್ವಲ್ಪ ಹೆಚ್ಚು ಅಧಿಕಾರವನ್ನು decentralize ಮಾಡಿದ್ದೇವೆ. ಅದೇ ರೀತಿ, A.N.C. (Antenatal Care) registration ಕೂಡ ಬಹಳ ಮುಖ್ಯವಾಗಿರುತ್ತದೆ. ಅದನ್ನು 10ನೇ ವಾರಕ್ಕೆ ಕಡ್ಡಾಯ ಮಾಡುವುದಕ್ಕೆ ಆದೇಶ ಮಾಡಿರುತ್ತೇವೆ. ಇದರಿಂದಾಗಿ, ಭ್ರೂಣ ಹತ್ಯೆಯನ್ನು ಇನ್ನು ಸರಿಯಾದಂತಹ ರೀತಿಯಲ್ಲಿ track ಮಾಡುವುದಕ್ಕೆ ಅವಕಾಶವಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಐವನ್ ಡಿ' ಸೋಜಾ:–** ಮಾನ್ಯ ಸಭಾಪತಿಯವರೇ, ನಾನು ಒಂದು ವಿಷಯದ ಬಗ್ಗೆ ಸ್ಪಷ್ಟೀಕರಣ ಕೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ಭ್ರೂಣ ಹತ್ಯೆ ವಿಚಾರಕ್ಕೆ ಸಂಬಂಧಿಸಿದಂತೆ ಸುಮಾರು 150 ಪ್ರಕರಣಗಳನ್ನು ಪತ್ತೆ ಹಚ್ಚಿ, ಅದರಲ್ಲಿ ಕೇವಲ 80 ಪ್ರಕರಣಗಳಿಗೆ ದಂಡ ವಿಧಿಸಲಾಗಿರುತ್ತದೆ ಹಾಗೂ 70 ಪ್ರಕರಣಗಳು ನ್ಯಾಯಾಲಯದಲ್ಲಿ ವಿವಿಧ ಹಂತದಲ್ಲಿ ಬಾಕಿಯಿರುತ್ತದೆ ಎಂದು ಹೇಳಿರುತ್ತಾರೆ. ಅದರಂತೆ, prove ಆಗಿರುವ ಪ್ರಕರಣಗಳಲ್ಲಿ ಕೇವಲ ದಂಡ ವಿಧಿಸುವ ಶಿಕ್ಷೆ ಆದರೆ, ಇನ್ನು ಸಾವಿರ ಭ್ರೂಣ ಹತ್ಯೆ ಪ್ರಕರಣಗಳು ಮುಂದುವರೆಯಲು ಸಾಧ್ಯವಿರುತ್ತದೆ. ಹಾಗಾಗಿ, ಇಂತಹ ಪ್ರಕರಣಗಳಲ್ಲಿ ತಪ್ಪಿತಸ್ಥರ ವಿರುದ್ಧ ಏನಾದರೂ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುತ್ತಾರೆಯೇ ಅಥವಾ ಈ ಬಗ್ಗೆ ಗಟ್ಟಿಯಾದಂತಹ ಕಾನೂನು ಏನಾದರೂ ತರುತ್ತಾರೆಯೇ ಎನ್ನುವುದು ನನ್ನ ಪ್ರಶ್ನೆಯಾಗಿರುತ್ತದೆ.

**ಶ್ರೀ ದಿನೇಶ್ ಗುಂಡೂರಾವ್:–** ಮಾನ್ಯ ಸಭಾಪತಿಯವರೇ, ಈ ಪ್ರಕರಣಗಳಲ್ಲಿ ನಮ್ಮ ಅಧಿಕಾರಿಗಳು ಇರಬಹುದು, ಸ್ಕ್ಯಾನಿಂಗ್ ಸೆಂಟರ್‌ಗಳು ಇರಬಹುದು ಅಥವಾ ಅವುಗಳ ಮಾಲೀಕರು ಅಥವಾ ವೈದ್ಯರ ವಿಚಾರದಲ್ಲಿ ಏನಾದರೂ ಲೋಪ–ದೋಷಗಳು ಆಗಿರಬಹುದು, ಅಲ್ಟ್ರಾಸೌಂಡ್ ಮೆಷಿನ್‌ಗಳಲ್ಲಿ ಡಾಕ್ಯುಮೆಂಟೇಷನ್‌ಗಳು ಸರಿ ಇಲ್ಲದಂತಹ, ಅಂತಹ ಪ್ರಕರಣಗಳು ಕೂಡ ಇದರಲ್ಲಿವೆ. ಎಲ್ಲಾ ಪ್ರಕರಣಗಳು ಕೂಡ ಭ್ರೂಣ ಹತ್ಯೆಗೆ ನೇರವಾಗಿ ಸೇರಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಭ್ರೂಣಹತ್ಯೆ ಆಗಿರುವಂತಹ ಪ್ರಕರಣದಲ್ಲಿ ಬೇರೆ ರೀತಿಯಾದಂತಹ ಕಾನೂನಿನ ಪ್ರಕಾರ ಕ್ರಮ ಆಗಿರುತ್ತದೆ. ಅದಕ್ಕೆ ಸಂಬಂಧಪಟ್ಟಂತೆ ನಾವು ಪ್ರಕರಣ ದಾಖಲಿಸಿರುತ್ತೇವೆ. ಅದರಂತೆ, ಕ್ರಮ ಆಗುತ್ತದೆ. ಇವುಗಳು ಬೇರೆ–ಬೇರೆ ರೀತಿಯಾದಂತಹ ಪ್ರಕರಣಗಳಾಗಿರುತ್ತವೆ. ಅದಕ್ಕೋಸ್ಕರ ಕೆಲವು ಪ್ರಕರಣಗಳಲ್ಲಿ ನಾವು ಕೇವಲ ದಂಡ ವಿಧಿಸಿ, ಅವುಗಳನ್ನು ಸರಿಪಡಿಸುವಂತಹ ಕೆಲಸ ಮಾಡಿರುತ್ತೇವೆ. ಇನ್ನುಳಿದ ಪ್ರಕರಣಗಳನ್ನು ನಾವು ಮುಂದುವರೆಸಿರುತ್ತೇವೆ.

**ಪ್ರಶ್ನೆ ಸಂಖ್ಯೆ: 629+578**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಡಾ: ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ಇವೊತ್ತಿನ ದಿವಸ ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿಗಳು ಇಲ್ಲದೇ ಇರುವುದರಿಂದ, ಸಾರ್ವಜನಿಕರು ವೈದ್ಯರುಗಳಿಗೆ ಬೈಯುತ್ತಿದ್ದಾರೆ. ಅಲ್ಲದೇ, ಕನಿಷ್ಠ ಔಷಧಿಗಳನ್ನು ಸಂಗ್ರಹ ಮಾಡಿಟ್ಟುಕೊಳ್ಳಬೇಕೆಂದು ಅಧಿಕಾರಿಗಳು ವೈದ್ಯರುಗಳಿಗೆ ನೋಟಿಸ್ ನೀಡುತ್ತಿದ್ದಾರೆ. ಒಂದು ರೀತಿಯಲ್ಲಿ "ಇಂಗು ತಿಂದ ಮಂಗನ ಹಾಗೆ" ಸರ್ಕಾರಿ ವೈದ್ಯರುಗಳ ಪರಿಸ್ಥಿತಿ ಆಗಿರುತ್ತದೆ.

"ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೆ,
ಧರೆ ಹತ್ತಿ ಉರಿದಡೆ ನಿಲಲುಬಾರದು.
ಏರಿ ನೀರುಂಬಡೆ, ಬೇಲಿ ಕೆಯ್ಯ ಮೇವಡೆ,
ನಾರಿ ತನ್ನ ಮನೆಯಲ್ಲಿ ಕಳುವಡೆ,
ತಾಯ ಮೊಲೆವಾಲು ನಂಜಾಗಿ ಕೊಲುವಡೆ,
ಇನ್ನಾರಿಗೆ ದೂರುವೆ ಕೂಡಲಸಂಗಮದೇವಾ!
ಇನ್ನಾರಿಗೆ ದೂರುವೆ ಕೂಡಲಸಂಗಮದೇವಾ!"

ಎನ್ನುವ ನಿಟ್ಟಿನಲ್ಲಿ ಎಲ್ಲಾ ವೈದ್ಯರು ನಾಳೆಯಿಂದ ಮುಷ್ಕರವನ್ನು ಮಾಡುತ್ತಿದ್ದಾರೆ. ನಾನು ಮಾನ್ಯ ಸಚಿವರಿಗೆ ಮೂರು ಅಂಶಗಳನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ನಾನು ಒಬ್ಬ ವೈದ್ಯನಾಗಿ ಸುಮಾರು P.H.C. (Primary Health Centre) ಮತ್ತು C.H.C. (Community Health Centre) ಗಳ ವೈದ್ಯರುಗಳನ್ನು ನಾನು ಪ್ರಶ್ನೆ ಮಾಡಿದಾಗ, ಸಾಮಾನ್ಯವಾಗಿ ಬರುವಂತಹ ಕೆಮ್ಮು, ಶೀತ, ನೆಗಡಿ ಮತ್ತು ಜ್ವರ. ಕಾಯಿಲೆಗಳಿಗೆ ಸಾಮಾನ್ಯವಾಗಿ Paracetamol, Cetirizine, Antibiotic ಮತ್ತು Salbutamol syrup ಔಷಧಗಳನ್ನು ಬರೆಯುತ್ತಾರೆ. ನಾನು ಸುಮಾರು 20 ರಿಂದ 25 ಜನ ಸರ್ಕಾರಿ ವೈದ್ಯರುಗಳಿಗೆ phone ಮಾಡಿ ಎಷ್ಟು ಔಷಧಿಗಳು ಸಿಗುತ್ತವೆ ಎಂದು ಕೇಳಿದರೆ,..

**ಸಭಾಪತಿಯವರು:-** ಈ ವಿಚಾರದಲ್ಲಿ ಏನು ಆಗಬೇಕೆಂಬುದನ್ನು ಹೇಳಿ.

**ಡಾ॥ ಧನಂಜಯ ಸರ್ಜಿ:-** ಮಾನ್ಯ ಸಭಾಪತಿಯವರೇ, ನಾನು ಅದನ್ನೇ ಹೇಳುತ್ತಿದ್ದೇನೆ. ಒಂದೇ ಒಂದು ಮೆಡಿಸನ್ ಸಿಗುತ್ತಿಲ್ಲ. ಶೇಕಡ 30 ರಷ್ಟು ಸೌಲಭ್ಯಗಳಿಲ್ಲದೇ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಲ್ಯಾಬೋರೇಟರಿ ಪರೀಕ್ಷೆಗಳು ಅಂದರೆ, C.B.C. (Complete Blood Count) test ಕೂಡ ಆಗದೇ ಇರುವಂತಹ ಪರಿಸ್ಥಿತಿ ಇದೆ. ಅಂದರೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ C.B.C. test ಆಗಬೇಕೆಂದರೆ, ಮರುಭೂಮಿಯಲ್ಲಿ ಮರೀಚಿಕೆ ಸಿಕ್ಕಂತೆ ಆಗಿರುತ್ತದೆ. ಈ ವಿಚಾರಕ್ಕೆ ಸಂಬಂಧಿಸಿದಂತೆ, ಮಾನ್ಯ ಸಚಿವರ ವರದಿ ಪ್ರಕಾರ ನಾನು ಒಂದು ಅಂಕಿ-

ಅಂಶವನ್ನು ಉಲ್ಲೇಖ ಮಾಡುತ್ತೇನೆ. 2023-24ರಲ್ಲಿ ಇಡೀ ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಓ.ಪಿ.ಡಿ. (Outpatient Department) ಮತ್ತು ಐ.ಪಿ.ಡಿ. (Inpatient Department) ಸುಮಾರು 14 ಕೋಟಿ ಜನರು ಚಿಕಿತ್ಸೆ ಪಡೆದಿರುತ್ತಾರೆ. 2024-25ನೇ ಸಾಲಿನಲ್ಲಿ 15 ಕೋಟಿ ಮತ್ತು 2025-26ನೇ ಸಾಲಿನಲ್ಲಿ 15 ರಿಂದ 16 ಕೋಟಿ ರೋಗಿಗಳು ಚಿಕಿತ್ಸೆ ಪಡೆಯಬಹುದೆಂದು ಅಂದಾಜಿಸಲಾಗಿದೆ. ಅದೇ ರೀತಿ, ಸುಮಾರು ತಾಲ್ಲೂಕುಗಳ ಅಂಕಿ-ಅಂಶಗಳನ್ನು ತೆಗೆದುಕೊಂಡಾಗ...

**ಸಭಾಪತಿಯವರು:-** ಮಾನ್ಯ ಧನಂಜಯ ಸರ್ಜಿಯವರು ಸಾಕು, ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಸಚಿವರು ತಮ್ಮ ಪ್ರಶ್ನೆಗೆ ಉತ್ತರ ನೀಡಿದ ನಂತರ, ತಾವು ಉಪ ಪ್ರಶ್ನೆ ಕೇಳಿ.

**ಡಾ॥ ಧನಂಜಯ ಸರ್ಜಿ:-** ಮಾನ್ಯ ಸಭಾಪತಿಯವರೇ, ಇಲ್ಲ ಆಗುವುದಿಲ್ಲ.

**ಸಭಾಪತಿಯವರು:-** ಪ್ರಶ್ನೋತ್ತರ ಅವಧಿಯಲ್ಲಿ ಭಾಷಣ ಮಾಡುವುದಕ್ಕೆ ಅವಕಾಶವಿಲ್ಲ. ಹಾಗಾಗಿ, ಮಾನ್ಯ ಸಚಿವರು ಉತ್ತರ ನೀಡಿದ ನಂತರ, ತಾವು ಸ್ಪಷ್ಟೀಕರಣ ಕೇಳಿ.

**ಡಾ॥ ಧನಂಜಯ ಸರ್ಜಿ:-** ಮಾನ್ಯ ಸಭಾಪತಿಯವರೇ, ಇದೊಂದು ಅಂಶಕ್ಕೆ ಮಾನ್ಯ ಸಚಿವರು ಉತ್ತರ ನೀಡಿರುವುದಿಲ್ಲ.

**ಸಭಾಪತಿಯವರು:-** ಇಲ್ಲ, ತಾವು ದಯಮಾಡಿ ಕುಳಿತುಕೊಳ್ಳಿ.

**ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಔಷಧಿಗಳ ವಿಚಾರದಲ್ಲಿ ಈಗಾಗಲೇ ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ನಮ್ಮ ಔಷಧಿ ಉಗ್ರಾಣ Karnataka State Medical Supplies Corporation Limited (K.S.M.S.C.L.) ಬಗ್ಗೆ ನಾನು ಈಗಾಗಲೇ ಉತ್ತರದಲ್ಲಿ ತಿಳಿಸಿರುತ್ತೇನೆ. ಅದರಂತೆ, ಎಷ್ಟು ಔಷಧಿಗಳ ಪೂರೈಕೆಗೆ ಟೆಂಡರ್ ಕರೆಯಲಾಗಿದೆ; ಎಷ್ಟು ಔಷಧಿಗಳಿಗೆ ಖರೀದಿ ಆದೇಶ (Purchase Order) ನೀಡಿದ್ದೇವೆ; ಎಂದು ನಾವು ಉತ್ತರ ನೀಡಿದ್ದೇವೆ. ಕಳೆದ ಆಗಸ್ಟ್ ತಿಂಗಳಿನಲ್ಲಿಯೇ ನಾವು ಈ ವರ್ಷದಲ್ಲಿ ಬೇಕಾಗುವಂತಹ ಔಷಧಿಗಳ ಪಟ್ಟಿ ತಯಾರಿಸಿ, ಆದೇಶ ಮಾಡಿರುತ್ತೇವೆ. ಈ ಹಿಂದೆ K.S.M.S.C.L. ನಲ್ಲಿ ಏನಾಗುತ್ತಿತ್ತು ಎಂದರೆ, ಬಹಳಷ್ಟು ಔಷಧಿಗಳನ್ನು ನಾವು ಏನು ಖರೀದಿ ಮಾಡುತ್ತಿದ್ದೆವು, ಅದರ ಅವಶ್ಯಕತೆ ಇಲ್ಲದೇ ಇದ್ದರೂ ಸಹ, ಸರಿಯಾದ ತಪಾಸಣೆ ಆಗದೆಯೇ ಆ ಔಷಧವನ್ನು ಖರೀದಿ ಮಾಡುವಂಥದ್ದು ಆಗುತ್ತಿತ್ತು. ಅಲ್ಲದೇ, ಆ ಔಷಧ ಎಷ್ಟು ಪ್ರಮಾಣದಲ್ಲಿ ನಮಗೆ ಅವಶ್ಯಕತೆ ಇದೆ, ಎಷ್ಟು ಔಷಧವನ್ನು ಖರೀದಿ ಮಾಡಬೇಕು ಎಂಬುದನ್ನು ತಪಾಸಣೆ ಮಾಡದೇ, ಹೆಚ್ಚು ಔಷಧಗಳನ್ನು ಖರೀದಿ ಮಾಡುವಂಥದ್ದು ಆಗುತ್ತಿತ್ತು. ಇದರ ಜೊತೆಗೆ, ಬಹಳಷ್ಟು ಔಷಧಗಳ ಅವಧಿ ಮುಕ್ತಾಯವಾಗುವಂತಹ ಸನ್ನಿವೇಶಗಳು ಕೂಡ ಬರುತ್ತಿತ್ತು. ಹಾಗಾಗಿ, ನಾವು ಅದನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿ, The Indian Public Health Standards (I.P.H.S.) norms ಪ್ರಕಾರ ಏನಿದೆ, ಮತ್ತು ಬೇರೆ ಬೇರೆ ರಾಜ್ಯಗಳನ್ನು ಹೋಲಿಕೆ ಮಾಡಿಕೊಂಡು, ಯಾವ ರಾಜ್ಯದಲ್ಲಿ ಉನ್ನತವಾದಂತಹ ಆರೋಗ್ಯ ಸೇವೆಯನ್ನು

ನೀಡುತ್ತಿವೆ, ಉದಾಹರಣೆಗೆ, Tamil Nadu Medical Services Corporation Limited (T.N.M.S.C.L.) ನಲ್ಲಿ ಬಹಳ ಉನ್ನತವಾದಂತಹ ಆರೋಗ್ಯ ಸೇವೆಯನ್ನು ನೀಡುತ್ತಿದ್ದಾರೆ. ಅವರು ಯಾವ ರೀತಿ ಉನ್ನತವಾದಂತಹ ಆರೋಗ್ಯ ಸೇವೆಯನ್ನು ನೀಡುತ್ತಿದ್ದಾರೆ; ನಮಗೂ ಅವರಿಗೂ ಏನು ಲೋಪ–ದೋಷಗಳಿವೆ; ಅವೆಲ್ಲವನ್ನೂ ಪರಿಶೀಲನೆ ಮಾಡುತ್ತಿದ್ದೇವೆ. ಇದರ ಜೊತೆಗೆ, ನಮ್ಮ ಟೆಂಡರ್ ಕಂಡೀಷನ್‌ಗಳಲ್ಲಿದ್ದಂತಹ ಕಂಡೀಷನ್ ಪ್ರಕಾರ ಏನಾಗುತ್ತಿತ್ತು ಎಂದರೆ, ಔಷಧ ಪೂರೈಕೆಗೆ ಹೆಚ್ಚು ಬಿಡ್‌ದಾರರು ಬರುತ್ತಲೇ ಇರಲಿಲ್ಲ. ಏಕೆಂದರೆ, ಈಗಾಗಲೇ ಇರುವಂತಹ ಟೆಂಡರ್‌ದಾರರಿಗೆ ಔಷಧ ಪೂರೈಕೆ ಟೆಂಡರ್ ಸಿಗುವ ರೀತಿಯಲ್ಲಿ ಕಂಡೀಷನ್‌ಗಳು ಇದ್ದವು. ಇವೆಲ್ಲವನ್ನೂ ನಾವು ತಪಾಸಣೆ ಮಾಡಿ, ಯಾವ ಔಷಧಿಗಳು ನಮಗೆ ಅಗತ್ಯವಿದೆ; ಎಷ್ಟು ಪ್ರಮಾಣದಲ್ಲಿ ಅಗತ್ಯವಿದೆ; ಮತ್ತು ಹೇಗೆ ಟೆಂಡರ್‌ನಲ್ಲಿ ಹೆಚ್ಚು ಬಿಡ್‌ದಾರರು ಭಾಗವಹಿಸುವಂಥದ್ದು ಆಗಬೇಕು; ಈ ಎಲ್ಲಾ ವಿಚಾರಗಳನ್ನು ನಾವು ಕೂಲಂಕಷವಾಗಿ ಪರಿಶೀಲನೆ ಮಾಡಿ, ಇದರಲ್ಲಿ ನಾವು ಒಂದು ಪಾರದರ್ಶಕ ವ್ಯವಸ್ಥೆ ತರಬೇಕೆಂದು ಚಿಂತನೆ ಮಾಡಿರುತ್ತೇವೆ. ಇದರ ಜೊತೆಗೆ, ಔಷಧಗಳ ಗುಣಮಟ್ಟದಲ್ಲಿಯೂ ಸಹ ನಾವು ಜಾಗ್ರತೆ ವಹಿಸುತ್ತಿದ್ದೇವೆ. ಉದಾಹರಣೆಗೆ ಹೇಳುವುದಾದರೆ, ಪ್ರಸ್ತುತ ನಾವು ಯಾವುದಾದರೂ ಔಷಧವನ್ನು ಖರೀದಿ ಮಾಡುವುದಕ್ಕೆ ಖರೀದಿ ಆದೇಶವನ್ನು ಇಶ್ಯೂ ಮಾಡಿ, ಔಷಧ ಖರೀದಿ ಮಾಡಿದ ನಂತರ ಅದು ಉಗ್ರಾಣಕ್ಕೆ ಹೋದರೂ ಸಹ, ಅಲ್ಲಿಂದ ಆ ಔಷಧ ನೇರವಾಗಿ ನಮ್ಮ ಆರೋಗ್ಯ ಕೇಂದ್ರಗಳಿಗೆ ಹೋಗುವುದಿಲ್ಲ. ಏಕೆಂದರೆ, ನಾವು ಪ್ರತಿಯೊಂದು ಔಷಧಿಯ ಗುಣಮಟ್ಟವನ್ನು ಪರಿಶೀಲಿಸಿದ ನಂತರವೇ, ರೋಗಿಗಳಿಗೆ ತಲುಪಿಸಬೇಕು ಎಂದು ನಾವು ತೀರ್ಮಾನ ಮಾಡಿರುತ್ತೇವೆ. ಆದರೆ, ಈ ಹಿಂದೆ ಔಷಧಗಳು ಆರೋಗ್ಯ ಕೇಂದ್ರಗಳಿಗೆ ಸರಬರಾಜು ಆದ ನಂತರ, ಅದರ ಗುಣಮಟ್ಟವನ್ನು ಪರಿಶೀಲನೆ ಮಾಡಲಾಗುತ್ತಿತ್ತು. ಆದರೆ, ಈಗ ಔಷಧ ಸರಬರಾಜು ಆಗುವುದಕ್ಕೆ ಮೊದಲೇ ಗುಣಮಟ್ಟ ಪರಿಶೀಲನೆ ಮಾಡಲಾಗುತ್ತಿದೆ. ಈ ಎಲ್ಲಾ ಕ್ರಮಗಳನ್ನು ನಾವು ಈಗಾಗಲೇ ತೆಗೆದುಕೊಂಡಿರುತ್ತೇವೆ. ಇದರಿಂದಾಗಿ, ಕೆಲವು ಕಡೆಗಳಲ್ಲಿ ಸ್ವಲ್ಪ ವಿಳಂಬ ಆಗಿರುತ್ತದೆ. ಆದರೂ ಸಹ, ಎಲ್ಲಾ ಜಿಲ್ಲೆಗಳ D.H.O. (District Health Officer) ಗಳೊಂದಿಗೆ ಈಗಾಗಲೇ ನಾವು ಮಾತನಾಡಿದ್ದು, ಎಲ್ಲಾ D.H.O. ಗಳ head of account ನಲ್ಲಿ ಹಣ ಇದೆ. ಪ್ರತಿ ತಿಂಗಳು ಏನು Ayushman Bharat–Arogya Karnataka (A.B.–Ar.K.),**Arogya Raksha Samithi** (A.R.S.) ಗಳಿಗೆ ದುಡ್ಡು ಹೋಗುತ್ತದೆ, ಅದರಂತೆ, ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಪ್ರಸ್ತುತ ಸುಮಾರು ರೂ.200 ರಿಂದ ರೂ.300 ಕೋಟಿಗಳಷ್ಟು opening balance ಹಣ ಇರುತ್ತದೆ. ಇದರ ಜೊತೆಗೆ, ನಾವು ಕೂಡ ರಿವ್ಯೂ ಮೀಟಿಂಗ್ ಮಾಡಿದಾಗ ಕೆಲವು ಸರ್ಕಾರಿ ಆಸ್ಪತ್ರೆಗಳಲ್ಲಿ ಕಡಿಮೆ ಹಣ ಇತ್ತು. ಅಂತಹ ಆಸ್ಪತ್ರೆಗಳಿಗೂ ಕೂಡ ನಾವು ರೂ.30 ಕೋಟಿಗಳ ಹಣ ನೀಡಿರುತ್ತೇವೆ. ಅದನ್ನು ತಾತ್ಕಾಲಿಕವಾಗಿ ಒಂದೆರಡು ತಿಂಗಳು ಯಾವ ಔಷಧಗಳ ಕೊರತೆ ಇದೆ, ಅವುಗಳನ್ನು ಖರೀದಿ ಮಾಡಿಕೊಳ್ಳುವುದಕ್ಕೆ ಹಣ ನೀಡಿರುತ್ತೇವೆ. ಆದರೆ, ಈಗ ಏನು ಪ್ರೋಸೆಸ್ ಮಾಡುತ್ತಿದ್ದೇವೆ, ಇದು ನಮ್ಮ K.S.M.S.C.L. ಗೆ ಸುಧಾರಣೆ ಮಾಡುವಂತಹ ಕ್ರಮವಾಗಿರುತ್ತದೆ.

ಏಕೆಂದರೆ, ಇದು ಒಂದು ಶಕ್ತಿಶಾಲಿಯಾದಂತಹ ಕಾರ್ಪೋರೇಷನ್ ಆಗಬೇಕು ಮತ್ತು ಪಾರದರ್ಶಕವಾಗಿ ಒಳ್ಳೆಯ ರೀತಿಯಲ್ಲಿ ನಡೆಯಬೇಕು ಎಂಬ ಕಾರಣಕ್ಕಾಗಿ, ಈ ಕಾರ್ಪೋರೇಷನ್‌ಗೆ ಈಗ ಒಬ್ಬ ಐ.ಎ.ಎಸ್., ಅಧಿಕಾರಿಯನ್ನು ಎಂ.ಡಿ. ಮಾಡಿರುತ್ತೇವೆ. ಮೊದಲು ಇದು ಇರಲಿಲ್ಲ. ಆದರೆ, ಈಗ ಕಡ್ಡಾಯವಾಗಿ ಒಬ್ಬ ಐ.ಎ.ಎಸ್., ಅಧಿಕಾರಿ ಎಂ.ಡಿ. ಯಾಗಿರಬೇಕು ಎಂದು ಅವರನ್ನು ಹಾಗೂ ಕೆ.ಎ.ಎಸ್. ಅಧಿಕಾರಿಗಳನ್ನು ಸಹ ಹಾಕಿದ್ದೇವೆ. ಅಲ್ಲದೇ, ಇದನ್ನು staggered supply ಮಾಡಿದ್ದೇವೆ. ಆದರೆ, ಈ ಹಿಂದೆ ಇಡೀ ವರ್ಷಕ್ಕೆ ಬೇಕಾಗುವಷ್ಟು ಔಷಧಗಳು ಒಂದೇ ಬಾರಿಗೆ ಸರಬರಾಜು ಆಗುತ್ತಿತ್ತು. ಆದರೆ, ಈಗ ನಾವು ಏನು ಮಾಡಿದ್ದೇವೆಂದರೆ, ಪ್ರತಿ ಮೂರು ಅಥವಾ ನಾಲ್ಕು ತಿಂಗಳಿಗೆ ಎಷ್ಟೆಷ್ಟು ಔಷಧಗಳ ಅವಶ್ಯಕತೆ ಇದೆ, ಅದರ ಆಧಾರದ ಮೇಲೆ ಶೇಕಡ 25 ರಷ್ಟು ಔಷಧಗಳನ್ನು ಸರಬರಾಜು ಮಾಡಬೇಕೆಂದು ತಿಳಿಸಿರುತ್ತೇವೆ. ಇದರಿಂದಾಗಿ, ನಮಗೆ ಎಷ್ಟು ಔಷಧಗಳು ಬೇಕೋ ಅಷ್ಟನ್ನು ನಾವು ಖರೀದಿ ಮಾಡಬಹುದು ಮತ್ತು ಆ ಔಷಧಗಳ ದಾಸ್ತಾನು ಕೂಡ ಕಡಿಮೆಯಾಗಿ, ಬೇರೆ ರೀತಿಯ ಸಮಸ್ಯೆಗಳು ಸಹ ಬರುವುದಿಲ್ಲ. ಇದರ ಜೊತೆಗೆ, ಔಷಧಗಳ ಅವಧಿ ಕೂಡ ಮುಕ್ತಾಯವಾಗುವುದಿಲ್ಲ. ಏಕೆಂದರೆ, ಒಂದು ವರ್ಷಕ್ಕೆ ಬೇಕಾಗುವಷ್ಟು ಔಷಧಗಳನ್ನು ನಾವು ಮೊದಲೇ ತೆಗೆದುಕೊಂಡರೆ, ಅದನ್ನು ಉಪಯೋಗ ಮಾಡಿಕೊಳ್ಳುವಷ್ಟರಲ್ಲಿ ಆ ಔಷಧಿಯ ಅವಧಿ ಮುಕ್ತಾಯವಾಗುವ ಹಂತಕ್ಕೆ ಬಂದಿರುತ್ತದೆ. ಹಾಗಾಗಿ, staggered supply ಮಾಡಿದ್ದೇವೆ. ಈ ರೀತಿಯ ಸಾಕಷ್ಟು ಸುಧಾರಣೆಗಳನ್ನು ತಂದಿರುತ್ತೇವೆ. ಈ ರೀತಿಯ ಸುಧಾರಣೆಯಾಗುವ ಸಂದರ್ಭದಲ್ಲಿ ಕೆಲವು ಔಷಧಿಗಳನ್ನು ಏಪ್ರಿಲ್ ತಿಂಗಳಿನಿಂದ ಈ ತಿಂಗಳವರೆಗೂ ಸುಮಾರು ರೂ.232 ಕೋಟಿಗಳಷ್ಟು ಔಷಧಗಳನ್ನು ಈಗಾಗಲೇ ನಾವು ಸರಬರಾಜು ಮಾಡಿರುತ್ತೇವೆ. ಅದನ್ನು ನಮ್ಮ ಹಳೆಯ ನಾರ್ಮ್ಸ್ ಪ್ರಕಾರ ಸರಬರಾಜು ಮಾಡಿರುತ್ತೇವೆ. ಇದರ ಜೊತೆಗೆ, ಯಾವ ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಗಳ ಕೊರತೆ ಇದೆ, ಆ ಆಸ್ಪತ್ರೆಗಳು ತಮ್ಮ ಹಂತದಲ್ಲಿಯೇ ಔಷಧ ಖರೀದಿ ಮಾಡುವುದಕ್ಕೆ ನಾವು ಹಣ ನೀಡಿರುತ್ತೇವೆ. ಆದಾಗ್ಯೂ, ನಮ್ಮ ಸರ್ಕಾರಿ ಆಸ್ಪತ್ರೆಗಳಲ್ಲಿ ಯಾವುದೇ ರೀತಿಯಿಂದಲೂ ಔಷಧ ಕೊರತೆ ಆಗದೇ ಇರುವ ರೀತಿ ನೋಡಿಕೊಳ್ಳಬೇಕು ಎಂದು ನಮ್ಮ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿರುತ್ತೇವೆ. ಆದುದರಿಂದ, ಜನರಿಗೆ ಅವಶ್ಯವಾಗಿರುವಂತಹ ಔಷಧ ಸಿಗಬೇಕು. ಈಗಾಗಲೇ ಸುಮಾರು 496 ಡ್ರಗ್ಸ್‌ಗಳಿಗೆ ಈಗಾಗಲೇ ನಾವು ಏನು ಟೆಂಡರ್ ಕರೆದಿದ್ದು, ಅದರಲ್ಲಿ ಸುಮಾರು ಔಷಧಗಳ ಖರೀದಿಗೆ ಈಗಾಗಲೇ ಖರೀದಿ ಆದೇಶ ನೀಡಲಾಗಿರುತ್ತದೆ. ಕೆಲವು ಔಷಧಗಳ ಖರೀದಿಗೆ P.O. (Purchase Order) & N.O.A. (Notification of Award) ಸಹ ಅಪ್ರೂವ್ ಆಗಿದೆ. ಅದರಂತೆ, ಇನ್ನುಳಿದಿರುವಂತಹ ಔಷಧಗಳು ಈ ತಿಂಗಳು ಅಥವಾ ಮುಂದಿನ ತಿಂಗಳಿನಲ್ಲಿ ಸರಬರಾಜು ಆಗುತ್ತವೆ. ಆದುದರಿಂದ, ಒಂದು ಹೊಸ ವ್ಯವಸ್ಥೆಗೆ ನಮ್ಮ K.S.M.S.C.L. ಸಂಸ್ಥೆಯನ್ನು ತೆಗೆದುಕೊಂಡು ಹೋಗುತ್ತಿದ್ದೇವೆ. ಮುಂದಿನ ದಿನಗಳಲ್ಲಿ ಯಾವ ಒಂದು ಔಷಧಕ್ಕೆ ಬೇಡಿಕೆ, ಅವಶ್ಯಕತೆ, ಲಭ್ಯತೆ ಇವೆಲ್ಲವನ್ನೂ ನೋಡಿಕೊಂಡು ಪಾರದರ್ಶಕವಾಗಿ ಔಷಧ ಖರೀದಿ ಮಾಡುವಂತಹ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ.

**ಡಾ॥ ಧನಂಜಯ ಸರ್ಜಿ:–** ಮಾನ್ಯ ಸಭಾಪತಿಯವರೇ, ಇದು ರಾಜ್ಯದ ಜ್ವಲಂತ ಸಮಸ್ಯೆಯಾಗಿದೆ. ಇಲ್ಲಿ ಏನಾಗಿದೆ ಎಂಬುದಕ್ಕೆ ನಾನು ಕೆಲವೊಂದು ಅಂಕಿ–ಅಂಶಗಳನ್ನು ಹೇಳುವುದಕ್ಕೆ ತಾವು ದಯಮಾಡಿ ಅವಕಾಶ ಮಾಡಿಕೊಡಬೇಕು. ಕಳೆದ ವರ್ಷ ಹಾಗೂ ಅದರ ಹಿಂದಿನ ವರ್ಷಕ್ಕೆ ಹೋಲಿಕೆ ಮಾಡಿದರೆ, ಶೇಕಡ 50 ರಷ್ಟು ಔಷಧ procurement ನಲ್ಲಿ ಕಡಿಮೆಯಾಗಿರುತ್ತದೆ.

**ಸಭಾಪತಿಯವರು:–** ಈ ವಿಷಯವನ್ನು ತಾವು ಅರ್ಧ ಗಂಟೆ ಕಾಲಾವಧಿಯಲ್ಲಿ ಚರ್ಚೆ ಮಾಡುವುದಕ್ಕೆ ಬರೆದುಕೊಡಿ. ಅದರಂತೆ, ತಮಗೆ ಚರ್ಚೆ ಮಾಡಲು ನಾನು ಅವಕಾಶ ನೀಡುತ್ತೇನೆ.

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಅರ್ಧ ಗಂಟೆ ಕಾಲಾವಧಿಯಲ್ಲಿ ಚರ್ಚೆ ಮಾಡುವುದೇ ಸೂಕ್ತ ಎಂದು ನನಗನ್ನಿಸುತ್ತದೆ.

**ಸಭಾಪತಿಯವರು:–** ಮಾನ್ಯ ರವಿಯವರೇ, ಆ ವಿಚಾರವನ್ನು ನಾನೇ ಹೇಳುತ್ತಿದ್ದೇನೆ. ತಾವು ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಧನಂಜಯ ಸರ್ಜಿಯವರೇ, ಈ ವಿಚಾರವನ್ನು ಬಹಳ ದೀರ್ಘವಾಗಿ ಚರ್ಚೆ ಮಾಡುವ ಸಲುವಾಗಿ ತಾವು ಅರ್ಧ ಗಂಟೆ ಕಾಲಾವಧಿ ಚರ್ಚೆಯಲ್ಲಿ ಅವಕಾಶ ನೀಡಬೇಕೆಂದು ನನಗೆ ಬರೆದು ಕೊಡಿ. ಅದರಂತೆ, ನಾನು ಅರ್ಧ ಗಂಟೆ ಕಾಲಾವಧಿಯಲ್ಲಿ ಚರ್ಚೆ ಮಾಡಲು ಅವಕಾಶ ನೀಡುತ್ತೇನೆ.

**ಡಾ॥ ಧನಂಜಯ ಸರ್ಜಿ:–** ಮಾನ್ಯ ಸಭಾಪತಿಯವರೇ, ಆದರೆ ತಾವು ದಯಮಾಡಿ ನನಗೆ ಅವಕಾಶ ನೀಡಬೇಕು.

**ಸಭಾಪತಿಯವರು:–** ಅವಕಾಶ ನೀಡುತ್ತೇನೆಂದು ನಾನೇ ಹೇಳುತ್ತಿದ್ದೇನೆ.

**ಪ್ರಶ್ನೆ ಸಂಖ್ಯೆ: 579**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಶಾಂತರಾಮ್ ಬುಡ್ನ ಸಿದ್ದಿ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ಆ ಉತ್ತರ ಅಷ್ಟು ಸಮಂಜಸವಾಗಿರುವುದಿಲ್ಲ ಎಂದು ನನಗನ್ನಿಸುತ್ತದೆ. ನಾನು, ಕಳೆದ 40 ವರ್ಷಗಳಿಂದ ರಾಜ್ಯದ ಬೇರೆ ಬೇರೆ ಜಿಲ್ಲೆಗಳ ಅರಣ್ಯ ಪ್ರದೇಶಗಳಲ್ಲಿ ಸಾಗುವಳಿ ಮಾಡಿಕೊಂಡು ವಾಸಿಸುತ್ತಿರುವ ಬುಡಕಟ್ಟು ಜನರ ಕುಟುಂಬಗಳನ್ನು ಅರಣ್ಯ ಇಲಾಖೆಯ ಬೃಹತ್ ಯೋಜನೆಗಳ ಕಾರಣಕ್ಕಾಗಿ ಒಕ್ಕಲೆಬ್ಬಿಸುವ ಕಾರ್ಯ ನಡೆಸುತ್ತಿರುವುದು ನಿಜವೇ; ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟು ಬುಡಕಟ್ಟು ಕುಟುಂಬಗಳನ್ನು ಒಕ್ಕಲೆಬ್ಬಿಸಲಾಗಿದೆ ಎಂಬ ಪ್ರಶ್ನೆಯನ್ನು ನಾನು ಕೇಳಿದ್ದೆನು.

(ಮುಂದು)

(252) 09.03.2026 ವೈಎಲ್–ಎಂಡಿ 1.20 (ಸಭಾಪತಿಯವರ ಉಪಸ್ಥಿತಿ)

ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ಮುಂದು):–

ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟು ಬುಡಕಟ್ಟು ಕುಟುಂಬಗಳನ್ನು ಒಕ್ಕಲೆಬ್ಬಿಸಲಾಗಿದೆ; ಎನ್ನುವಂಥ ಪ್ರಶ್ನೆಯನ್ನು ಕೇಳಿದ್ದು, ಅದಕ್ಕೆ ಮಾನ್ಯ ಸಚಿವರು 'ಅರಣ್ಯ ಪ್ರದೇಶಗಳಲ್ಲಿ ಸಾಗುವಳಿ ಮಾಡಿಕೊಂಡು ವಾಸಿಸುತ್ತಿರುವ ಬುಡಕಟ್ಟು ಜನರ ಕುಟುಂಬಗಳನ್ನು ಅರಣ್ಯ ಇಲಾಖೆಯ ಬೃಹತ್ ಯೋಜನೆಗಳ ಕಾರಣಕ್ಕಾಗಿ ಒಕ್ಕಲೆಬ್ಬಿಸುವ ಯಾವುದೇ ಪ್ರಕರಣ ಇರುವುದಿಲ್ಲ' ಎನ್ನುವಂಥ ಉತ್ತರವನ್ನು ನೀಡಿದ್ದಾರೆ.

**ಸಭಾಪತಿಯವರು:–** ಮಾನ್ಯ ಶಾಂತಾರಾಮ್ ಬುಡ್ನ ಸಿದ್ದಿರವರೇ, ತಾವು ಪ್ರಶ್ನೆ ಹಾಗೂ ಉತ್ತರವನ್ನು ಪುನಃ ಉಲ್ಲೇಖ ಮಾಡುವುದಕ್ಕೆ ಹೋಗುವುದು ಬೇಡ. ಅದನ್ನು ಹೊರತುಪಡಿಸಿ ಏನಾಗಬೇಕಾಗಿದೆ ಎಂಬುದನ್ನು ಕೇಳಿ.

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಓದಲಿಲ್ಲವೆಂದರೆ ನಾನು ಕೇಳಿರುವ ಪ್ರಶ್ನೆ ಬಗ್ಗೆ ಮಾನ್ಯ ಸಚಿವರಿಗೆ ಹೇಗೆ ಗೊತ್ತಾಗುವುದು? ಏಕೆಂದರೆ, ನಾನು ಕೇಳಿರುವಂತಹ ನಾಲ್ಕು ಪ್ರಶ್ನೆಗಳಿಗೂ ಮಾನ್ಯ ಸಚಿವರು 'ಉದ್ಭವಿಸುವುದಿಲ್ಲ' ಎನ್ನುವಂಥ ಉತ್ತರವನ್ನು ನೀಡಿದ್ದಾರೆ.

**ಸಭಾಪತಿಯವರು:–** ತಾವು ಪ್ರಶ್ನೆ ಕೇಳಿದ್ದು, ಅದಕ್ಕೆ ಉತ್ತರ ನೀಡಿದ್ದಾರೆ. ಅದನ್ನು ಹೊರತುಪಡಿಸಿ ಬೇರೆ ಏನಾದರೂ ಪ್ರಶ್ನೆ ಇದ್ದರೆ ಕೇಳಿ.

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ:–** ಮಾನ್ಯ ಸಭಾಪತಿಯವರೇ, ನಾನು ಕೇಳಿದ ಪ್ರಶ್ನೆ ಸರಿಯಿಲ್ಲವೇನೋ ಎಂದು ನನಗೆ ಅನುಮಾನ ಮೂಡಿದೆ. ಏಕೆಂದರೆ, ಮಾನ್ಯ ಸಚಿವರು ನಾನು ಕೇಳಿರುವಂಥ ನಾಲ್ಕು ಪ್ರಶ್ನೆಗಳಿಗೂ 'ಉದ್ಭವಿಸುವುದಿಲ್ಲ, ಇರುವುದಿಲ್ಲ' ಎಂದು ಉತ್ತರ ನೀಡಿದ್ದಾರೆ. ಹಾಗಾಗಿ, ಮತ್ತೊಮ್ಮೆ ಮಾನ್ಯ ಸಚಿವರಿಗೆ ಅರ್ಥವಾಗಿಸಬೇಕೆಂದು ಪ್ರಶ್ನೆಯನ್ನು ಓದಿದ್ದೆನು. ಮಾನ್ಯ ಸಚಿವರ ಉತ್ತರವನ್ನು ಆಧರಿಸಿ ಮಾತನಾಡುವುದಾದರೆ, ಎಲ್ಲಿಯೂ ಅರಣ್ಯ ಪ್ರದೇಶಗಳಲ್ಲಿ ಸಾಗುವಳಿ ಮಾಡಿಕೊಂಡು ವಾಸಿಸುತ್ತಿರುವ ಬುಡಕಟ್ಟು ಜನರ ಕುಟುಂಬಗಳನ್ನು

ಒಕ್ಕಲೆಬ್ಬಿಸಿಲ್ಲ ಎನ್ನುವಂಥ ಮಾತನ್ನು ಹೇಳಿದ್ದಾರೆ. ಅದಕ್ಕೆ ನಾನು ಸಣ್ಣ ಉದಾಹರಣೆ ನೀಡುವುದಾದರೆ, ಮೈಸೂರು ಜಿಲ್ಲೆಯ ಪಿರಿಯಾ ಪಟ್ಟಣ ತಾಲ್ಲೂಕಿನಲ್ಲಿ 1990 ರಲ್ಲಿ 3,600 ಬುಡಕಟ್ಟು ಕುಟುಂಬಗಳನ್ನು ಒಕ್ಕಲೆಬ್ಬಿಸಲಾಗಿತ್ತು. ಆಮೇಲೆ ಪ್ರೊಫೆಸರ್ ಮುಜಾಫರ್ ಅಸ್ಸಾದಿರವರು ಅದರ ಬಗ್ಗೆ ಅಧ್ಯಯನ ಮಾಡಿ, ಸರ್ಕಾರಕ್ಕೆ ವರದಿ ನೀಡಿದ್ದು, ಆ ವರದಿಗೆ 2014ನೇ ಇಸವಿಯಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು 'ಅಲ್ಲಿರುವಂಥ 3,600 ಕುಟುಂಬಗಳೇನಿವೆ, ಅವರಿಗೆ ಅರಣ್ಯ ಇಲಾಖೆಯವರು ಭೂಮಿ ನೀಡಬೇಕು ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯನ್ನು ಯಾರು ನಿರ್ವಹಿಸುತ್ತಾರೆ, ಅವರು ಅವರಿಗೆ ಪುನರ್ ವಸತಿ ಕೇಂದ್ರವನ್ನು ಮಾಡಬೇಕೆಂದು' ಆದೇಶ ನೀಡಿತ್ತು. ಇಲ್ಲಿಯವರೆಗೂ ಆ ವ್ಯವಸ್ಥೆಗಳು ಪೂರ್ತಿಯಾಗಿಲ್ಲ ಎಂದು ಅಲ್ಲಿಯ ಜನರು ಹೇಳುತ್ತಾರೆ. ಯಾವ ಅಧಿಕಾರಿಗಳು ಮಾನ್ಯ ಸಚಿವರಿಗೆ ಉತ್ತರ ನೀಡಿದ್ದಾರೆ, ಅವರು ಈಗಲೇ ನನ್ನ ಜೊತೆ ಬಂದರೆ ಅಲ್ಲಿಯ ವ್ಯವಸ್ಥೆ ಬಗ್ಗೆ ತೋರಿಸುತ್ತೇನೆ. ಹಾಗೆಯೇ ಮತ್ತೊಂದು ಉದಾಹರಣೆ ನೀಡುವುದಾದರೆ, ಪಕ್ಕದ ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ, ಎರೆಹಳ್ಳಿ ಗ್ರಾಮ, ಗೊಲ್ಲರದೊಡ್ಡಿ ಗ್ರಾಮ, ಬಸವನಗುಡಿ ಹಾಡಿ, ಜೋಡುಗಟ್ಟೆ ಹಾಡಿ, ಅಜ್ಜನಹಳ್ಳಿ ಈ ರೀತಿಯಾಗಿ ಬೇರೆ ಬೇರೆ ಜಿಲ್ಲೆಗಳಲ್ಲಿ ಚಾಮರಾಜನಗರ, ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಸಾವಿರಾರು ಉದಾಹರಣೆಗಳಿವೆ. ಕೊನೆಪಕ್ಷ ಹತ್ತಿರವಾದ ಉತ್ತರವಾದರೂ ಕೊಡಬೇಕು. ಅದನ್ನು ಬಿಟ್ಟು ಎಲ್ಲಾ ಪ್ರಶ್ನೆಗಳಿಗೂ 'ಇರುವುದಿಲ್ಲ' ಎಂದು ಉತ್ತರ ನೀಡಿದರೆ, ಹೇಗೆ ಎನ್ನುವಂಥ ಪ್ರಶ್ನೆಯನ್ನು ಮಾನ್ಯ ಸಚಿವರಿಗೆ ಕೇಳಬಯಸುತ್ತೇನೆ.

**ಶ್ರೀ ಈಶ್ವರ ಬಿ. ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು):-** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರು ಅರಣ್ಯ ಪ್ರದೇಶಗಳಲ್ಲಿ ಸಾಗುವಳಿ ಮಾಡಿಕೊಂಡು ವಾಸಿಸುತ್ತಿದ್ದ ಬುಡಕಟ್ಟು ಜನರ ಕುಟುಂಬಗಳನ್ನು ಸರ್ಕಾರ ಅರಣ್ಯ ಇಲಾಖೆಯ ಬೇರೆ ಬೇರೆ ಬೃಹತ್ ಯೋಜನೆಗಳ ಕಾರಣಕ್ಕಾಗಿ ಒಕ್ಕಲೆಬ್ಬಿಸುವ ಕಾರ್ಯ ನಡೆಸುತ್ತಿರುವುದು ನಿಜವೇ; ಎನ್ನುವಂಥ ಪ್ರಶ್ನೆ ಕೇಳಿದ್ದಾರೆ. ಆದರೆ, ಮಾನ್ಯ ಸದಸ್ಯರು ಪ್ರಶ್ನೆ ಕೇಳಿರುವುದೇ ಬೇರೆಯಾಗಿದ್ದು, ಈಗ ಹೇಳುತ್ತಿರುವುದು ಬೇರೆ ವಿಚಾರವಾಗಿದೆ. ಅದಕ್ಕಾಗಿ ಮಾನ್ಯ ಸದಸ್ಯರು ಏನು ಪ್ರಶ್ನೆ ಕೇಳಿದ್ದಾರೆ, ಅದಕ್ಕೆ ನಮ್ಮ ಇಲಾಖೆಯವರು ಉತ್ತರ ನೀಡಿದ್ದಾರೆ. ಹಾಗಾಗಿ, ಬಹಳ ಸ್ಪಷ್ಟವಾಗಿ ಪ್ರಶ್ನೆ ಕೇಳಬೇಕಾಗಿತ್ತು. ಅರಣ್ಯ ಇಲಾಖೆ ವತಿಯಿಂದ ಯಾವುದೇ ಅರಣ್ಯ ವಾಸಿಗಳನ್ನು ಒಕ್ಕಲೆಬ್ಬಿಸಿಲ್ಲ. ಯಾವಾಗ ಅರಣ್ಯ ಇಲಾಖೆ ವತಿಯಿಂದ ನಾವು 'ಅಭಯಧಾಮ, ಸಂರಕ್ಷಿತ ಪ್ರದೇಶ' ಎಂದು ಘೋಷಣೆ ಮಾಡಿದ್ದು, ಆ ಘೋಷಣೆ ಮಾಡಿದಂಥ ಸಂದರ್ಭದಲ್ಲಿ ಯಾರು ಅರಣ್ಯ ವಾಸಿಗಳು ಅಲ್ಲಿ ನೆಲೆಸಿದರು ಅಂಥವರಿಗೆ ಎರಡೂ ರೀತಿಯ ಪ್ಯಾಕೇಜ್‌ಗಳನ್ನು ಮಾಡಲಾಗಿದೆ. ಇವತ್ತು ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿ ಸುಮಾರು 1,300 ಪರಿವಾರಗಳಿದ್ದು, ಅದರಲ್ಲಿ ಸ್ವ-ಇಚ್ಛೆಯಿಂದ 300 ಪರಿವಾರಗಳು relocate ಆಗುತ್ತೇವೆ, ಬೇರೆ ಕಡೆ ಮುಖ್ಯವಾಹಿನಿಗೆ ಹೋಗುತ್ತೇವೆ ಎಂದು ಹೇಳಿದರೆ, ಅಂಥವರಿಗಾಗಿ 2005ನೇ ಇಸವಿಯಲ್ಲಿ ವಿಶೇಷ ಪ್ಯಾಕೇಜ್‌ನ್ನು ಸರ್ಕಾರ ಘೋಷಣೆ ಮಾಡಿದೆ. ಅರಣ್ಯದವರು ಒತ್ತಾಯಪೂರ್ವಕವಾಗಿ ಯಾವುದೇ ಅರಣ್ಯ ವಾಸಿಗಳನ್ನು ಒಕ್ಕಲೆಬ್ಬಿಸುವಂಥ ಕೆಲಸ ಮಾಡಿಲ್ಲ. ಯಾರು ಅರಣ್ಯದೊಳಗೆ ವಾಸ ಮಾಡುತ್ತಿದ್ದಾರೆ, ಅಂತಹವರನ್ನು ಸ್ವ-ಇಚ್ಛೆಯಿಂದ 300 ಪರಿವಾರಗಳನ್ನು

ಸ್ಥಳಾಂತರ ಮಾಡಲಾಗಿದೆ. ಅದೇ ರೀತಿ ಇನ್ನೂ ಸುಮಾರು 300 ಪರಿವಾರಗಳು ಹೋಗಲಿಕ್ಕೆ ತಯಾರಿದ್ದು, ಅದಕ್ಕೆ ಅನುದಾನದ ವ್ಯವಸ್ಥೆ ಮಾಡಬೇಕಾಗಿದೆ. 600 ಪರಿವಾರಗಳನ್ನು ಬಿಟ್ಟು 700 ಪರಿವಾರಗಳು ಅಲ್ಲಿಯೇ ಇದ್ದಾರೆ. ಅದೇ ರೀತಿ ಎರಡನೇ ಪ್ಯಾಕೇಜ್ ಏನೆಂದರೆ, ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ, N.T.C.A (National Tiger Conservation Authority) ಮಾರ್ಗಸೂಚಿ ಪ್ರಕಾರ ಒಂದು ಪರಿವಾರಕ್ಕೆ ಪತಿ–ಪತ್ನಿಗೆ ರೂ.15 ಲಕ್ಷ ಪರಿಹಾರ ನೀಡಲಾಗುವುದು. ಆ ಪತಿ–ಪತ್ನಿ ಹೊರತುಪಡಿಸಿ, ಅವರಿಗೆ 18 ವರ್ಷದ ಮಗನಿದ್ದರೆ ಆತನಿಗೆ ರೂ.15 ಲಕ್ಷ ಹಾಗೂ 18 ವರ್ಷದ ಮಗಳಾದರೆ ಆಕೆಗೂ ರೂ.15 ಲಕ್ಷ ನೀಡಲಾಗುವುದು. ಅಂಗವಿಕಲರೂ ಯಾರೇ ಇರಲಿ ಅವರಿಗೂ ರೂ.15 ಲಕ್ಷ ನೀಡಲಾಗುವುದು. ಈ ರೀತಿಯಾಗಿ ಎರಡೂ ಪ್ಯಾಕೇಜ್‌ಗಳು ಜಾರಿಯಲ್ಲಿವೆ. ಎರಡೂ ಪ್ಯಾಕೇಜ್‌ಗಳ ವ್ಯಾಪ್ತಿಯಲ್ಲಿ ಎಷ್ಟು ಜನ ಸ್ಥಳಾಂತರಗೊಳ್ಳುತ್ತೇವೆ ಎಂದು ಅರ್ಜಿ ಕೊಡುತ್ತಾರೆ; ಆ ಅರ್ಜಿಯನ್ನಿಟ್ಟುಕೊಂಡು ಸರ್ಕಾರದಿಂದ ಅನುದಾನ ಕೊಡಲಾಗುತ್ತದೆ. ಈ ಹಿಂದೆ ಕೇಂದ್ರ ಸರ್ಕಾರದಿಂದಲೂ ಅನುದಾನ ಬರುತ್ತಿತ್ತು. ಈಗ ಅದೆಲ್ಲವೂ ಸ್ಥಗಿತಗೊಂಡಿದ್ದು, ರಾಜ್ಯ ಸರ್ಕಾರದಿಂದಲೇ ಅನುದಾನ ಕೊಡಬೇಕಾಗುತ್ತದೆ. ಆ ದೃಷ್ಟಿಯಿಂದಾಗಿ ಸುಮಾರು ರೂ.1,000 ಕ್ಕೂ ಹೆಚ್ಚಿನ ಪರಿವಾರಗಳಿವೆ. ನಮ್ಮಲ್ಲಿ ಸಂರಕ್ಷಿತ ಪ್ರದೇಶಗಳಾದ ನಾಗರಹೊಳೆ, ಭದ್ರಾ, ಕಾಳಿಯಲ್ಲಿ ಯಾರು ವಾಸಿಸುತ್ತಿದ್ದಾರೆ, ಅಂಥವರು ಸ್ವ–ಇಚ್ಛೆಯಿಂದ ಮುಂದೆ ಬಂದಿರುವಂಥ ಸುಮಾರು 600, 700 ಪರಿವಾರಗಳಿದ್ದು, ಅದಕ್ಕಾಗಿ ಅನುದಾನವನ್ನು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರನ್ನು ಕೇಳಿದ್ದು, ಹಂತಹಂತವಾಗಿ ಪುನರ್ ವಸತಿ ಮಾಡುವಂಥದು ಮತ್ತು ಸ್ಥಳಾಂತರ ಮಾಡುವಂಥ ಕೆಲಸವನ್ನು ಸರ್ಕಾರ ಮಾಡುತ್ತದೆ.

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ:–** ಮಾನ್ಯ ಸಭಾಪತಿಯವರೇ, ಕಳೆದ 40 ವರ್ಷಗಳಿಂದ ಎಂದು ಸ್ಪಷ್ಟವಾಗಿ ಪ್ರಶ್ನೆ ಕೇಳಿದ್ದರೆ, ಮಾನ್ಯ ಸಚಿವರು ಕಳೆದ 10 ವರ್ಷಗಳಿಂದ ಇಚ್ಛೆಯಾಗಿರುವಂಥ ಯೋಜನೆ ಬಗ್ಗೆ ಹೇಳುತ್ತಿದ್ದಾರೆ. ನಾನು ಪಿರಿಯಾ ಪಟ್ಟಣದ ಮತ್ತು ಹುಣಸೂರು ತಾಲ್ಲೂಕುಗಳಿಗೆ ಸಂಬಂಧಿಸಿದಂತೆ 1990 ರ ನಂತರ ಉದಾಹರಣೆಯನ್ನು ಕೊಟ್ಟು ಹೇಳಿದ್ದೇನೆ. ಅಂದಿನಿಂದ ಮಾಹಿತಿ ಕೇಳಿದ್ದು, ಆ ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿಲ್ಲ. ಈ ರೀತಿ ಉತ್ತರ ಕೊಡುವುದಾದರೆ, ನಾನು ಕೇಳಿರುವುದಕ್ಕೆ ಸಂಬಂಧಿಸಿದಂತೆ ಉತ್ತರ ಕೊಡಬಹುದಾಗಿತ್ತು. ಅದನ್ನು ಬಿಟ್ಟು ನಾಲ್ಕು ಪ್ರಶ್ನೆಗಳಿಗೂ ಉದ್ಭವಿಸುವುದಿಲ್ಲ ಎಂದು ಖಾಲಿ ಪೇಪರ್ ರೀತಿ ಉತ್ತರ ಕೊಟ್ಟಿದ್ದಾರೆ. ಅದಕೋಸ್ಕರ ನಾನು ಹೇಳುವುದೇನೆಂದರೆ, ಈ ರೀತಿಯ ಉತ್ತರವು ಒಪ್ಪುವಂತಿಲ್ಲ. ಸುಮಾರು 25, 30 ವರ್ಷಗಳಿಂದ ಸುಮಾರ 40 ವರ್ಷಗಳ ಹಳೆಯ ಪ್ರಕರಣಗಳ ಬಗ್ಗೆ ಮಾಹಿತಿ ಕೇಳಿದ್ದೇನೆ. ಅದರ ಬಗ್ಗೆ ಮಕ್ಕಳನ್ನು ಕೇಳಿದರೂ ಹೇಳುತ್ತಾರೆ. ಮೈಸೂರು, ಕೊಡಗು, ರಾಮನಗರ ಜಿಲ್ಲೆಗಳಲ್ಲಿ ಮಾಸ್ತಿಗುಡಿ, ಶೆಟ್ಟಿಹಳ್ಳಿ ಬೇರೆ ಬೇರೆ ರೀತಿಯ ಪುನರ್ ವಸತಿ ಕೇಂದ್ರಗಳಿದ್ದು, ಒಕ್ಕಲೆಬ್ಬಿಸಿಲ್ಲವೆಂದಾದರೆ ಪುನರ್ ವಸತಿ ಕೇಂದ್ರಗಳು ಹೇಗೆ ಮಾಡುತ್ತಾರೆ? ಆ ಪುನರ್ ವಸತಿ ಕೇಂದ್ರಗಳು ಒಂದು ಸಹ ಪೂರ್ಣವಾಗಿ ವ್ಯವಸ್ಥಿತ ರೀತಿಯಲ್ಲಿ ಕೆಲಸವಾಗಿಲ್ಲ. ಅದರ ಬಗ್ಗೆ ಕೇಳಿದ್ದು, ಕಳೆದ 40 ವರ್ಷಗಳಿಂದ ಎಂದು ಸ್ಪಷ್ಟವಾಗಿ ಪ್ರಶ್ನೆ ಕೇಳಿದ್ದೇನೆ. ಮಾನ್ಯ ಸಚಿವರು ಹೇಳಿದ

ಹಾಗೆ ಕಳೆದ 10 ವರ್ಷಗಳಂದಿಚೇ ಆಗಿರುವಂಥ ಯೋಜನೆ ಬಗ್ಗೆ ನನಗೂ ಮಾಹಿತಿ ಇದೆ. ಹಾಗಾಗಿ, ಮಾನ್ಯ ಸಚಿವರು ನೀಡಿರುವಂಥ ಉತ್ತರವು ತೃಪ್ತಿಯಾಗಿಲ್ಲದ ಪ್ರಯುಕ್ತ ಸದರಿ ವಿಚಾರವಾಗಿ ಚರ್ಚಿಸಲು ಅರ್ಧ ಗಂಟೆ ಕಾಲಾವಧಿ ಅಡಿಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:–** ಅರ್ಧ ಗಂಟೆ ಕಾಲಾವಧಿ ಅಡಿ ಚರ್ಚಿಸಲು ಬರೆದು ಕಳುಹಿಸಿಕೊಡಿ.

**ಶ್ರೀ ಈಶ್ವರ ಬಿ ಖಂಡ್ರೆ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂಥ ಪ್ರಶ್ನೆಗೆ ಬಹಳ ಸ್ಪಷ್ಟವಾಗಿ ಉತ್ತರವನ್ನು ಕೊಟ್ಟಿದ್ದೇನೆ. ಹಾಗೆಯೇ ಮಾನ್ಯ ಸದಸ್ಯರು ಏನು ಹೇಳಿದ್ದಾರೆ, ಅದಕ್ಕೆ ಸಂಬಂಧಿಸಿದಂತೆ ಬೇಕಾದರೆ ಮಾತನಾಡಲು ಅರ್ಧ ಗಂಟೆ ಕಾಲಾವಕಾಶದಡಿ ಚರ್ಚಿಸಲು ಅವಕಾಶ ಮಾಡಿಕೊಡಿ. ವಿಸ್ತೃತವಾಗಿ ಚರ್ಚೆಯಾಗಲಿ.

**ಸಭಾಪತಿಯವರು:–** ಒಂದು ವಿಚಾರವನ್ನು ತಿಳಿಯಪಡಿಸುವುದೇನೆಂದರೆ, ಇವತ್ತು ಪ್ರಶ್ನೋತ್ತರ ಅವಧಿಯನ್ನು ಬೆಳಗ್ಗೆ 11 ಗಂಟೆ 30 ನಿಮಿಷಕ್ಕೆ ಪ್ರಾರಂಭಗೊಂಡಿದ್ದು, ಈಗಾಗಲೇ ಸುಮಾರು ಮಧ್ಯಾಹ್ನ 1 ಗಂಟೆ 30 ನಿಮಿಷವಾಗಿದ್ದು, ಪ್ರಶ್ನೋತ್ತರ ಅವಧಿಯೇ ಎರಡು ತಾಸು ನಡೆದಿದೆ. ದಯವಿಟ್ಟು ಮಾನ್ಯ ಸದಸ್ಯರು ನಾನು ಬೆಲ್ ಹೊಡೆದ ಮೇಲೆ ಕುಳಿತುಕೊಳ್ಳಬೇಕು. ಅದನ್ನು ಬಿಟ್ಟು ಎರಡು ತಾಸು ಪ್ರಶ್ನೋತ್ತರ ಅವಧಿಯ ಮೇಲೆ ಚರ್ಚಿಸಿದರೆ ಹೇಗೆ ಎಂಬುದನ್ನು ತಾವೇ ವಿಚಾರ ಮಾಡಿ ನೋಡಿ. ಈ ವಿಚಾರ ಮಾನ್ಯ ಮಂತ್ರಿಗಳು ಒಳಗೊಂಡ ಹಾಗೆ ಎಲ್ಲರಿಗೂ ಅನ್ವಯಿಸುತ್ತದೆ.

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ: 09ನೇ ಮಾರ್ಚ್ 2026ರ, ಸಮೂಹ–1ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 142 ಪ್ರಶ್ನೆಗಳ ಪೈಕಿ 43 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಸಭಾಪತಿಯವರು:–** ಮಂಡಿಸಲಾಯಿತು.

## ೩. ಹಕ್ಕುಚ್ಯುತಿ ಪ್ರಸ್ತಾವ

**ಶ್ರೀ ರಮೇಶ್ ಬಾಬು(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಆಹಾರ ಇಲಾಖೆಗೆ ಸಂಬಂಧಿಸಿದಂತೆ ಹಕ್ಕುಚ್ಯುತಿ ಮಂಡಿಸಲು ಪತ್ರ ಕೊಟ್ಟಿದ್ದೆನು. ನಾನು ಸಂಬಂಧಪಟ್ಟ ಜಿಲ್ಲಾಧಿಕಾರಿಯವರಿಗೆ ಕರೆ ಮಾಡಿದರೂ ಕರೆಯನ್ನು ಸ್ವೀಕರಿಸುವುದಿಲ್ಲ ಮತ್ತು Additional Chief Secretary (Food and Civil Supplies, Consumer Affairs Department) ಪತ್ರ ಬರೆದರೂ ಪ್ರತಿಕ್ರಿಯಿಸುವುದಿಲ್ಲ. ದಯವಿಟ್ಟು ಅದಕ್ಕೆ ತಾವು ನಿರ್ದೇಶನ ನೀಡಬೇಕು.

**ಸಭಾಪತಿಯವರು:–** ಈಗಾಗಲೇ ಓದಿದ್ದು, ಹಕ್ಕುಚ್ಯುತಿಗೆ ಕೊಡುತ್ತೇನೆ.

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೇ, ಎಲ್ಲಾ ಸದಸ್ಯರ ಇನ್ನೊಂದು ವಿನಂತಿ ಏನೆಂದರೆ ಪಕ್ಕದಲ್ಲಿರುವಂಥ ಕ್ಯಾಂಟೀನ್‌ನಿಂದ ಬಹಳ ಸಮಸ್ಯೆ ಇದೆ. ಸರಿಯಾಗಿ ಒಂದು ಕಾಫಿ ಸಹ ಸಿಗುತ್ತಿಲ್ಲ. ಇದರಿಂದ ಎಲ್ಲಾ ಸದಸ್ಯರಿಗೂ ತೊಂದರೆಯಾಗುತ್ತಿದೆ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ ಎಂಬುದನ್ನು ನೋಡಿ, ಅದಕ್ಕೆ ಒಂದು ವ್ಯವಸ್ಥೆ ಮಾಡಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

## 4. ನಿಯಮ 58ರ ಮೇರೆಗೆ ಶೂನ್ಯವೇಳೆ ಪ್ರಸ್ತಾವಗಳು

**ಅ) ವಿಷಯ:** ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (**BDA**) ಸರ್. ಎಂ. ವಿಶ್ವೇಶ್ವರಯ್ಯ ಬಡಾವಣೆಯ 3ನೇ ಬ್ಲಾಕ್‌ನಲ್ಲಿ ರಾಜಕಾಲುವೆ, ಉದ್ಯಾನವನ ಮತ್ತು ಬೆಲೆಬಾಳುವ ನಿವೇಶನ ಒತ್ತುವರಿ ಮಾಡಿ ಅನಧಿಕೃತ ರಸ್ತೆ ನಿರ್ಮಾಣ ಮಾಡುತ್ತಿರುವ ಬಗ್ಗೆ.

*****

**ಶ್ರೀ ಟಿ.ಎನ್.ಜವರಾಯಿಗೌಡ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕೆಂಗೇರಿ ಬಳಿ ಇರುವ ವಿಶ್ವೇಶ್ವರಯ್ಯ ಬಡಾವಣೆಯಲ್ಲಿರುವ ನಿವೇಶನ, ರಾಜಕಾಲುವೆ ಮತ್ತು ಉದ್ಯಾನವನದ ಜಾಗದಲ್ಲಿ ಕೆಲ ಖಾಸಗಿ ವ್ಯಕ್ತಿಗಳು ಅನಧಿಕೃತ ರಸ್ತೆ ನಿರ್ಮಾಣ ಮಾಡುತ್ತಿರುವ ಬಗ್ಗೆ ದಿನಾಂಕ: 06.03.2026ರ 'ವಿಜಯ ಕರ್ನಾಟಕ' ದಿನ ಪತ್ರಿಕೆಯಲ್ಲಿ ವರದಿಯಾಗಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು 2003–04 ರಲ್ಲಿ ಸರ್.ಎಂ.ವಿಶ್ವೇಶ್ವರಯ್ಯ ಬಡಾವಣೆಯನ್ನು ನಿರ್ಮಿಸಿದೆ. ಈ ಬಡಾವಣೆಯ 3ನೇ ಬ್ಲಾಕ್‌ನಲ್ಲಿರುವ ಸುಮಾರು 1,200 ಚದರ ಅಡಿಗೂ ಹೆಚ್ಚು ವಿಸ್ತೀರ್ಣದ ಖಾಲಿ ನಿವೇಶನವಿದ್ದು, ಈ ನಿವೇಶನ ಕೋಟ್ಯಾಂತರ ರೂಪಾಯಿ ಬೆಲೆ ಬಾಳುತ್ತದೆ. ಈ ನಿವೇಶನ ಈಗಲೂ ಸಹ ಬಿ.ಡಿ.ಎ. ಸ್ವಾಧೀನದಲ್ಲಿದೆ. ಈ ಜಾಗವು ಸೇರಿದಂತೆ, ಬಿ.ಡಿ.ಎ.ಗೆ ಸೇರಿದ ಉದ್ಯಾನವನ, ರಾಜಕಾಲುವೆ ಮೇಲೆ ಸೇತುವೆ ನಿರ್ಮಿಸಿ, ಉಲ್ಲಾಳಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ನಿರ್ಮಾಣಕ್ಕೆ ಪ್ರಯತ್ನಿಸಲಾಗುತ್ತಿದೆ.

ಈ ಅನಧಿಕೃತ ರಸ್ತೆ ನಿರ್ಮಾಣದಿಂದ ಬಡಾವಣೆಯ ನಿವಾಸಿಗಳು ಸೇರಿದಂತೆ, ಇತರೆ ಜನರಿಗೆ ಯಾವುದೇ ರೀತಿಯಲ್ಲೂ ಅನುಕೂಲವಾಗುವುದಿಲ್ಲ. ಉತ್ತರ ದಿಕ್ಕಿನಲ್ಲಿರುವ ಖಾಸಗಿ ವ್ಯಕ್ತಿಗಳು ತಮ್ಮ ಅನುಕೂಲಕ್ಕಾಗಿ ರಸ್ತೆ ನಿರ್ಮಿಸುತ್ತಿದ್ದಾರೆ. ಕೆಲ ವ್ಯಕ್ತಿಗಳು ತಮ್ಮ ಸ್ವತ್ತಿಗೆ ದಾರಿ ಮಾಡಿಕೊಳ್ಳಲು ಖಾಲಿ ನಿವೇಶನ, ಉದ್ಯಾನವನ ಮತ್ತು ರಾಜಕಾಲುವೆಯನ್ನು ಒತ್ತುವರಿ ಮಾಡಿಕೊಂಡಿದ್ದಾರೆ. ಈ ಬಗ್ಗೆ ಆ ಬಡಾವಣೆಯ ನಿವಾಸಿಗಳು ಹಲವಾರು ದೂರುಗಳನ್ನು ಬಿ.ಡಿ.ಎ. ಗೆ ನೀಡಿದರೂ ಸಹ ಇಲ್ಲಿಯ ತನಕ ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ಈ ಪ್ರಕರಣದಲ್ಲಿ ಅಲ್ಲಿನ ಸ್ಥಳೀಯ ಅಧಿಕಾರಿಗಳು ಭಾಗಿಯಾಗಿ ಸರ್ಕಾರದ ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ನಿವೇಶನ, ರಾಜಕಾಲುವೆ ಮತ್ತು ಉದ್ಯಾನವನದ ಜಾಗವನ್ನು ಸಂರಕ್ಷಣೆ ಮಾಡಬೇಕಾದ ಸರ್ಕಾರದ ಅಧಿಕಾರಿಗಳೇ ಭಕ್ಷಕರಾಗಿದ್ದಾರೆ. ಆದ್ದರಿಂದ ಸರ್ಕಾರ ಬಿ.ಡಿ.ಎ. ಗೆ ಸೇರಿರುವ ನಿವೇಶನ, ರಾಜಕಾಲುವೆ ಮತ್ತು ಉದ್ಯಾನವನದ ಜಾಗದಲ್ಲಿ ಖಾಸಗಿ ವ್ಯಕ್ತಿಗಳು ಅನಧಿಕೃತ ರಸ್ತೆ ಮಾಡುತ್ತಿರುವುದನ್ನು ಕೂಡಲೇ ತಡೆಹಿಡಿಯಲು ತಕ್ಷಣವೇ ಕ್ರಮ ತೆಗೆದುಕೊಳ್ಳಬೇಕೆಂದು ಹಾಗೂ ಈ ಪ್ರಕರಣದಲ್ಲಿ ಭಾಗಿಯಾಗಿರುವ ಅಧಿಕಾರಿಗಳ ಮೇಲೆ ಕಾನೂನು ರೀತಿಯ ಕಠಿಣ ಕ್ರಮ ಜರುಗಿಸಬೇಕೆಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಲಾಗುವುದು.

(ಮುಂದು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

**(253) 09.03.2026/1.30/ ಎಸ್‌ಕೆ.ಎಂಡಿ** **(ಸಭಾಪತಿಯವರ ಉಪಸ್ಥಿತಿ)**

**ಆ) ವಿಷಯ:** ರಾಜ್ಯದಲ್ಲಿ ಕಳೆದ 25 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ 'ಸಾಂತ್ವನ ಕೇಂದ್ರ'ಗಳನ್ನು ಸ್ಥಗಿತಗೊಳಿಸುವ ಸರ್ಕಾರದ ನಿರ್ಧಾರವನ್ನು ಕೈಬಿಡುವ ಬಗ್ಗೆ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಇಡೀ ನಾಡು ಸಂಭ್ರಮದಿಂದ ಆಚರಿಸುತ್ತಿದೆ. ಆದರೆ, ಇದೇ ಸಂದರ್ಭದಲ್ಲಿ ರಾಜ್ಯದ ಮಹಿಳೆಯರ ಪಾಲಿಗೆ ಆತಂಕಕಾರಿ ಸುದ್ದಿಯೊಂದು 'ಪ್ರಜಾಪ್ರಗತಿ' ಪತ್ರಿಕೆಯಲ್ಲಿ ದಿನಾಂಕ 08.03.2026 ರಂದು ವರದಿಯಾಗಿರುತ್ತದೆ.

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸಂಕಷ್ಟದಲ್ಲಿರುವ ಮಹಿಳೆಯರಿಗೆ ಆಸರೆಯಾಗಿದ್ದ 'ಸಾಂತ್ವನ ಕೇಂದ್ರ'ಗಳನ್ನು 2026–27ನೇ ಸಾಲಿನಿಂದ ಸ್ಥಗಿತಗೊಳಿಸಲು ಸರ್ಕಾರ ಸುತ್ತೋಲೆ ಹೊರಡಿಸಿದೆ ಎಂಬ ಆಘಾತಕಾರಿ ವರದಿ ಪತ್ರಿಕೆಯಲ್ಲಿ ಪ್ರಕಟವಾಗಿರುತ್ತದೆ ಕಳೆದ 25 ವರ್ಷಗಳಿಂದ ಕೌಟುಂಬಿಕ ದೌರ್ಜನ್ಯ ಮಾನಸಿಕ ಹಿಂಸೆ ಮತ್ತು ಸಾಮಾಜಿಕ ಸಮಸ್ಯೆಗಳಿಗೆ ತುತ್ತಾದ ಮಹಿಳೆಯರಿಗೆ ಈ ಕೇಂದ್ರಗಳು ಕಾನೂನು ನೆರವು ಹಾಗೂ ಆಸರೆ ನೀಡುತ್ತಿದ್ದವು.. ಈಗ ಇವುಗಳನ್ನು ಮುಚ್ಚುವುದರಿಂದ ಸಾವಿರಾರು ಮಹಿಳೆಯರು ಅನಾಥರಾಗಲಿದ್ದಾರೆ. ಈ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೂರಾರು ನೌಕರರು ಮತ್ತು ಸಮಾಜ ಸೇವಕರು ಇದ್ದಕ್ಕಿದ್ದಂತೆ ಉದ್ಯೋಗ ಕಳೆದುಕೊಂಡು ಬೀದಿಗೆ ಬೀಳುವ ಭೀತಿಯಲ್ಲಿದ್ದಾರೆ.

ಆದುದರಿಂದ ಜಿಲ್ಲಾ ಸಾಂತ್ವನ ಕೇಂದ್ರಗಳನ್ನು ಸ್ಥಗಿತಗೊಳಿಸಲು ಹೊರಡಿಸಿರುವ ಆದೇಶ ಅಥವಾ ಸುತ್ತೋಲೆಯನ್ನು ಸರ್ಕಾರ ಕೂಡಲೇ ಹಿಂಪಡೆಯಬೇಕು. ಈ ಕೇಂದ್ರಗಳ ಸುಗಮ ನಿರ್ವಹಣೆಗೆ ಬಜೆಟ್‌ನಲ್ಲಿ ಅಗತ್ಯ ಅನುದಾನವನ್ನು ಮೀಸಲಿಡಬೇಕು. ಕೇಂದ್ರ ಸರ್ಕಾರದ 'ಸಖಿ' ಯೋಜನೆಯೊಂದಿಗೆ ರಾಜ್ಯದ 'ಸಾಂತ್ವನ' ಕೇಂದ್ರಗಳನ್ನು ವಿಲೀನಗೊಳಿಸುವ ಬದಲು, ಎರಡೂ ಯೋಜನೆಗಳು ಪೂರಕವಾಗಿ ಕೆಲಸ ಮಾಡುವಂತೆ ಕ್ರಮ ಕೈಗೊಳ್ಳಬೇಕು. ಮಹಿಳಾ ದಿನಾಚರಣೆಯಂದೇ ಇಂತಹ ವರದಿಗಳು ಬಂದಿರುವುದು ರಾಜ್ಯದ ಮಹಿಳೆಯರಲ್ಲಿ ಆತಂಕ ಮೂಡಿಸಿದ್ದು, ಮಹಿಳೆಯರ ಸುರಕ್ಷತೆ ಮತ್ತು ಹಕ್ಕುಗಳಿಗೆ ಆಸೆರಯಾಗಿರುವ ಕೇಂದ್ರಗಳನ್ನೇ ಮುಚ್ಚುವುದು ಸರಿಯಲ್ಲ. ಸರ್ಕಾರ ಈ ಕೂಡಲೇ ಮಧ್ಯಪ್ರವೇಶಿಸಿ ಸಾಂತ್ವನ ಕೇಂದ್ರಗಳು ಮುಂದುವರಿಯುವಂತೆ ಕ್ರಮ ಕೈಗೊಳ್ಳಬೇಕೆಂದು ಶೂನ್ಯ ವೇಳೆಯಲ್ಲಿ ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಲಾಗುವುದು.

**ಇ) ವಿಷಯ:- "ಮದ್ಯ ಮಾರಾಟಗಾರರ ಬೃಹತ್ ಪ್ರತಿಭಟನೆ"ಕುರಿತು.**

- - - - -

**ಶ್ರೀ ಸಿ.ಟಿ ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ದಿನಾಂಕ 06.03.2026ರ "ವಿಜಯವಾಣಿ" ದಿನಪತ್ರಿಕೆಯಲ್ಲಿ ಪ್ರಕಟವಾಗಿರುವ "ಮದ್ಯ ಮಾರಾಟಗಾರರ ಬೃಹತ್ ಪ್ರತಿಭಟನೆ" ಎಂಬ ಶಿರೋನಾಮೆಯಡಿ ಬಂದಿರುವ ವರದಿಯನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಲು ಅವಕಾಶ ಕೋರುತ್ತೇನೆ.

ಅಬಕಾರಿ ಇಲಾಖೆಯಲ್ಲಿನ ಮೀತಿಮೀರಿದ ಲಂಚದ ಹಾವಳ ಆರೋಪ ಮತ್ತು ಅಧಿಕಾರಿಗಳ ಕಿರುಕುಳವನ್ನು ಖಂಡಿಸಿ ಮದ್ಯ ಮಾರಾಟಗಾರರು ಗುರುವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು.

ರಾಜ್ಯದ ಪ್ರತಿ ಜಿಲ್ಲೆಯಲ್ಲೂ ಅಧಿಕಾರಿಗಳು ಮಾಸಿಕ ಲಂಚವನ್ನು ನಿಗದಿಪಡಿಸಿದ್ದಾರೆ. ಪ್ರತಿ ತಿಂಗಳು ಇಂತಿಷ್ಟು ಹಣ ನೀಡಲೇಬೇಕು ಎಂದು ಒತ್ತಾಯಿಸುತ್ತಿದ್ದಾರೆ. ಒಂದು ವೇಳೆ ಲಂಚ ನೀಡಲು ನಿರಾಕರಿಸಿದರೆ, ಸಣ್ಣಪುಟ್ಟ ತಾಂತ್ರಿಕ ಕಾರಣಗಳನ್ನು ಮುಂದಿಟ್ಟುಕೊಂಡು ಕೇಸ್ ದಾಖಲಿಸುವುದು ಅಥವಾ ವ್ಯಾಪಾರ ಮಾಡಲು ಬಿಡದೆ ಕಿರುಕುಳ ನೀಡುತ್ತಿದ್ದಾರೆ ಎಂದು ಮದ್ಯ ಮಾರಾಟಗಾರರು ಅಳಲು ತೋಡಿಕೊಂಡಿದ್ದಾರೆ.

ಮದ್ಯ ಮಾರಾಟಗಾರರ ಒಕ್ಕೂಟವು ಒಟ್ಟು 9ಕ್ಕೂ ಹೆಚ್ಚು ಪ್ರಮುಖ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟಿದೆ. ಚಿಲ್ಲರೆ ಮದ್ಯ ಮಾರಾಟದ ಮೇಲೆ ಕನಿಷ್ಟ ಶೇಕಡಾ 20 ರಷ್ಟು ಲಾಭಾಂಶ ನೀಡಬೇಕು. ಮದ್ಯದ ಸನ್ನದುಗಳನ್ನು ಹರಾಜು ಮಾಡುವ ಪ್ರಕ್ರಿಯೆಗಳನ್ನು ಕೂಡಲೇ ಕೈಬಿಡಬೇಕು. ಇತ್ತೀಚೆಗೆ ಹೆಚ್ಚಳ ಮಾಡಿರುವ ಸನ್ನದ್ದು ಶುಲ್ಕ ಮತ್ತು ಹೆಚ್ಚುವರಿ ಅಬಕಾರಿ ಪ್ರಕ್ರಿಯೆಯನ್ನು ಕೂಡಲೇ ಕೈಬಿಡಬೇಕು. ಇತ್ತೀಚೆಗೆ ಹೆಚ್ಚಳ ಮಾಡಿರುವ ಸನ್ನದು ಶುಲ್ಕ ಮತ್ತು ಹೆಚ್ಚುವರಿ ಅಬಕಾರಿ ಸುಂಕವನ್ನು ಕಡಿತಗೊಳಿಸಬೇಕು. ಕಾನೂನಿನ ಚೌಕಟ್ಟಿನಲ್ಲಿ ಸಿ.ಎಲ್.-2 ಮತ್ತು ಸಿ.ಎಲ್.-9 ಸನ್ನದ್ದುಗಳಂತೆ ಸಿಎಲ್-7 ಸನ್ನದ್ದುಗಳನ್ನೂ ಸ್ಥಳಾಂತರ ಮಾಡಲು ಅವಕಾಶ ನೀಡಬೇಕು. ಅಬಕಾರಿ ಇಲಾಖೆಯಲ್ಲಿ ಬೇರು ಬಿಟ್ಟಿರುವ ಭ್ರಷ್ಟಾಚಾರವನ್ನು ಕಿತ್ತೊಗೆಯಬೇಕು ಮತ್ತು ಅಧಿಕಾರಿಗಳ ಕಿರುಕುಳವನ್ನು ನಿಲ್ಲಿಸಬೇಕು. ಭ್ರಷ್ಟಚಾರ ಪ್ರತಿಬಂಧಕ ಕಾಯ್ದೆ ಜಾರಿಗೊಳಿಸುವುದು ಸೇರಿ ಇತರ ಬೇಡಿಕೆಗಳನ್ನು ಈಡೇರಿಸುವಂತೆ ಪ್ರತಿಭಟನಾಕಾರರು ಒತ್ತಾಯಿಸಿದರು. ಇದನ್ನು ಸದನದಲ್ಲಿ ಪ್ರಸ್ತಾಪಿಸಲು ಅವಕಾಶ ನೀಡಬೇಕೆಂದು ಕೊರುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಲಾಗುವುದು

**ಈ) ವಿಷಯ:- ಕಾಸರಗೋಡು ಕನ್ನಡಿಗರ ಭಾಷಾ ಹಕ್ಕುಗಳ ಮೇಲೆ ಮಲಯಾಳ ಸವಾರಿ: ಕಾಯ್ದೆ ತಿದ್ದುಪಡಿಗೆ ಮತ್ತು ಸರ್ಕಾರದ ಮಧ್ಯಪ್ರವೇಶಕ್ಕೆ ಆಗ್ರಹ ಕುರಿತು.**

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ದಿನಾಂಕ ೦೬.೦೩.೨೦೨೬ ರಂದು ರಾಜ್ಯದ ಪರಿಷ್ಕೃತ ದಿನಪತ್ರಿಕೆಯಾದ ವಿಜಯವಾಣಿ ಕನ್ನಡ ದಿನ ಪತ್ರಿಕೆಯಲ್ಲಿ "ಗಡಿನಾಡ ಕನ್ನಡಿಗರಿಗೆ ಭಾಷಾತಂಕ" ಎಂಬ ಶೀರ್ಷಿಕೆಯಡಿ ವರದಿ ಪ್ರಕಟಿಸಿದೆ.

ಮಲಯಾಳಾ ಭಾಷೆಗೆ ಕೇರಳದ ಏಕೈಕ ಅಧಿಕೃತ ಭಾಷಾ ಸ್ಥಾನಮಾನ ನೀಡುವ ಉದ್ದೇಶದಿಂದ ಕೇರಳ ಸರ್ಕಾರ ಮಂಡಿಸಿದ್ದ "ಮಲಯಾಳ ಭಾಷಾ ಮಸೂದೆ-೨೦೨೫"ಕ್ಕೆ ರಾಜ್ಯಪಾಲ ರಾಜೇಂದ್ರ ಅರ್ಲೇಕರ್ ಅಂಕಿತ ಹಾಕುತ್ತಿದ್ದಂತೆ ಗಡಿನಾಡ ಕನ್ನಡಿಗರಲ್ಲಿ ಮತ್ತೆ ಆತಂಕ ಆರಂಭಗೊಂಡಿದೆ.

ಕಡ್ಡಾಯ ಮಲಯಾಳ ಹೇರಿಕೆ ವಿರುದ್ಧ ಕನ್ನಡಿಗರಿಂದ ಪ್ರತಿಭಟನೆ ನಡಯುತ್ತಿರುವ ಮಧ್ಯೆ ರಾಜ್ಯಪಾಲರು ಅಂಕಿತ ಹಾಕಿರುವುದು ಕನ್ನಡಿಗರ ಪಾಲಿಗೆ ನುಂಗಲಾರದ ತುತ್ತಾಗಿದೆ. ಮಸೂದೆ ಕಾಯ್ದೆಯಾಗಿ ಜಾರಿಗೊಂಡಿದ್ದಲ್ಲಿ ಇದು ಗಡಿ ಪ್ರದೇಶದ ಕನ್ನಡಿಗರಿಗೆ ಮತ್ತಷ್ಟು ಸಂಕಷ್ಟ ತಂದೊಡ್ಡಬಹುದು. ಕನ್ನಡ ಭಾಷಾ ಅಲ್ಪಸಂಖ್ಯಾತ ವಿದ್ಯಾರ್ಥಿಗಳೂ ಕಡ್ಡಾಯವಾಗಿ ಮಲಯಾಳ ಕಲಿಬೇಕಾದ ಅನಿವಾರ್ಯತೆ ಎದುರಾಗುವ ಭೀತಿ ಇದೆ.

ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಮಲಯಾಳ ಪ್ರಥಮ ಭಾಷೆಯಾಗಿ ಕಲಿಸುವುದು ಕಡ್ಡಾಯ ಎಂಬ ಅಂಶವನ್ನು ಮಸೂದೆ ಒಳಗೊಂಡಿದ್ದು, ಇನ್ನೊಂದೆಡೆ ಕೇರಳದ ಗಡಿ ಜಿಲ್ಲೆಗಳಲ್ಲಿ ಕನ್ನಡಿಗರಲ್ಲಿ ಆತಂಕ ಯಥಾ ಪ್ರಕಾರ ಮುಂದುವರೆದಿದೆ.

ಮಸೂದೆಯು ಕೇರಳ ನೆರಳಿನಲ್ಲಿ ಗಡಿನಾಡ ಕನ್ನಡಿಗರು ಕಾಲ ಕಳೆಯುತ್ತಿದ್ದು, ಕನ್ನಡ ಭಾಷೆ ಮತ್ತು ಸಂಸ್ಕೃತಿ ಮೇಲೆ ಪ್ರಹಾರ ನೀಡಲಿರುವ ಈ ಮಸೂದೆಗೆ ಅಗತ್ಯ ತಿದ್ದುಪಡಿ ತರುವ ಅವಶ್ಯಕತೆ ಇದೆ. ಭಾಷಾ ಮಸೂದೆ ಸೆಕ್ಷನ್ ೭ರನ್ವಯ ಭಾಷಾ ಅಲ್ಪಸಂಖ್ಯಾತರ ಹಕ್ಕು ಸಂರಕ್ಷಣೆ ಬಗ್ಗೆ ಮಾಹಿತಿಯಿದ್ದರೂ, ಸೆಕ್ಷನ್ ೬ರಲ್ಲಿ ಒಂದರಿಂದ ಕಡ್ಡಾಯ ಮಲಯಾಳ ಕಲಿಕೆಗೆ ಆದೇಶವಿದ್ದು, ಭಾಷಾ ಅಲ್ಪಸಂಖ್ಯಾತರ ಬಗ್ಗೆ ಸ್ಪಷ್ಟ ಉಲ್ಲೇಖ ಮಾಡದಿರುವುದು ಮಸೂದೆ ಬಗ್ಗೆ ಸಂಶಯಕ್ಕೆ ಎಡೆಮಾಡಿಕೊಟ್ಟಿದೆ.

ಈ ಕುರಿತು ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಕೇರಳದ ಮಾನ್ಯ ಮುಖ್ಯಮಂತ್ರಿಗಳಿಗೆ ಈ ವಿಷಯದ ಬಗ್ಗೆ ಪತ್ರವನ್ನು ಬರೆದಿರುತ್ತಾರೆ. ಮುಂದುವರೆದು, ಕೇರಳದ ಮುಖ್ಯಮಂತ್ರಿಗಳೊಂದಿಗೆ ನೇರ ಮಾತುಕತೆ ನಡೆಸಿ, ಕಾಸರಗೋಡು ಜಿಲ್ಲೆಯನ್ನು ಈ ಮಸೂದೆಯ ವ್ಯಾಪ್ತಿಯಿಂದ ಹೊರಗಿಡಲು ಅಥವಾ ಅಲ್ಲಿನ ಕನ್ನಡ ಶಾಲೆಗಳಿಗೆ ವಿಶೇಷ ವಿನಾಯಿತಿ ನೀಡಲು ಒತ್ತಡ ಹೇರಬೇಕಿದೆ ಹಾಗೂ ಉಭಯ ರಾಜ್ಯಗಳ ಉನ್ನತ

ಅಧಿಕಾರಿಗಳ ಸಮಿತಿಯನ್ನು ರಚಿಸಿ ಭಾಷಾ ಅಲ್ಪಸಂಖ್ಯಾತರ ಸಮಸ್ಯೆಗಳನ್ನು ಬಗೆಹರಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ನಾನು ತಮ್ಮ ಮೂಲಕ ಶೂನ್ಯವೇಳೆಯಲ್ಲಿ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟ ಮಾನ್ಯ ಮುಖ್ಯಂತ್ರಿಗಳಿಂದ ಉತ್ತರ ಒದಗಿಸಲಾಗುವುದು

**ಉ) ವಿಷಯ:- ರಾಜ್ಯದಲ್ಲಿ ಟೈಫಾಯಿಡ್ ಪ್ರಕರಣಗಳ ಏರಿಕೆ: ದೇಶದಲ್ಲೇ ಕರ್ನಾಟಕಕ್ಕೆ 3ನೇ ಸ್ಥಾನ - ಸರ್ಕಾರದ ತುರ್ತು ಕ್ರಮಕ್ಕೆ ಆಗ್ರಹ ಕುರಿತು**

- - - - -

**ಶ್ರೀ ಜಗದೇವ ಗುತ್ತೇದಾರ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಟೈಫಾಯಿಡ್ ಪ್ರಕರಣಗಳಲ್ಲಿ ರಾಜ್ಯಕ್ಕೆ ಮೂರನೇ ಸ್ಥಾನ ಎಂದು "ವಿಜಯ ಕರ್ನಾಟಕ" ದಿನಪತ್ರಿಕೆಯಲ್ಲಿ ಪ್ರಕಟವಾಗಿದ್ದು, ಬಹಳ ಆತಂಕದ ವಿಷಯವಾಗಿದೆ. ಚಳಿಗಾಲ ಕಳೆದು ಬೇಸಿಗೆ ಆರಂಭವಾಗುತ್ತಿದ್ದಂತೆ ಬೆಂಗಳೂರು ಸೇರಿದಂತೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ಹೆಚ್ಚಿರುವ ರಾಜ್ಯಗಳ ಪೈಕಿ ಕರ್ನಾಟಕ ಕೂಡ ಟಾಪ್ 5 ಪಟ್ಟಿಯಲ್ಲಿರುವುದು ಎಚ್ಚರಿಕೆಯ ಕರೆಗಂಟೆ ನೀಡಿದಂತಾಗಿದೆ. ಕೇಂದ್ರ ಆರೋಗ್ಯ ಸಚಿವಾಲಯದ ವರದಿಯಲ್ಲಿ ಈ ಅಂಶ ಬಹಿರಂಗಗೊಂಡಿದೆ. ಕಳೆದ ವರ್ಷಗಳಲ್ಲಿ ರಾಜ್ಯ ಹಾಗೂ ರಾಜಧಾನಿ ಬೆಂಗಳೂರು ಸೇರಿದಂತೆ ವಿವಿಧ ನಗರಗಳಲ್ಲಿ ಟೈಫಾಯಿಡ್ ಹಾಗೂ ಅತಿಸಾರ ಸೋಂಕಿನ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ದಾಖಲಾಗಿವೆ. 2021 ರಿಂದ 2025ರ ವರೆಗೆ ಅಂಕಿ ಅಂಶಗಳನ್ನು ಅವಲೋಕಿಸಿದಾಗ ಕರ್ನಾಟಕ ಇಡೀ ದೇಶದಲ್ಲಿ ಅತಿ ಹೆಚ್ಚು ಪ್ರಕರಣ ದಾಖಲಾದ ರಾಜ್ಯಗಳ ಪೈಕಿ ಟಾಪ್ 5 ಸ್ಥಾನ ಪಡೆದಿದೆ. ಟೈಫಾಯಿಡ್ ಪ್ರಕರಣಗಳಲ್ಲಿ ಮೂರನೇ ಸ್ಥಾನ ಅತಿಸಾರ, ಜಲ ಸಂಬಂಧಿತ ಸೋಂಕುಗಳು ಪೈಕಿ 5ನೇ ಸ್ಥಾನದಲ್ಲಿದೆ. ಬೇಸಿಗೆ ತಾಪಮಾನದ ಜೊತೆಗೆ ವಾತಾವರಣದ ಬದಲಾವಣೆಗಳಿಂದ ನಾನಾ ರೋಗಗಳು ಹೆಚ್ಚಿನ ಪ್ರಮಾಣದಲ್ಲಿ ಕಾಣಿಸಿಕೊಳ್ಳುತ್ತಿದ್ದು, ಕಳೆದ ಐದು ವರ್ಷಗಳಲ್ಲಿ ರಾಜ್ಯದಲ್ಲಿ 8,697 ಇಲಿ ಜ್ವರ ಪ್ರಕರಣಗಳು ಕೂಡ ದಾಖಲಾಗಿವೆ. ವಾರ್ಷಿಕ ಲೆಕ್ಕಾಚಾರದ ಪ್ರಕಾರ ಪ್ರತಿ ವರ್ಷ 739 ಕೇಸ್‌ಗಳು ಪತ್ತೆಯಾಗಿವೆ. ವೈದ್ಯರ ಮಾಹಿತಿ ಪ್ರಕಾರ ಗ್ರಾಮೀಣ ಪ್ರದೇಶಗಳಿಗೆ ಹೋಲಿಸಿದರೆ ನಗರ ಪ್ರದೇಶಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನೀರಿನ ಸಂಬಂಧಿತ ಕಾಯಿಲೆಗಳು ಏರಿಕೆ ಕಂಡಿದೆ. ಕಲುಷಿತ ನೀರಿನ ಪೂರೈಕೆ, ನೈರ್ಮಲ್ಯ ವ್ಯವಸ್ಥೆಯ ಕೊರತೆಗಳಿಂದ ಸೋಂಕಿನ ಪ್ರಮಾಣ ಹೆಚ್ಚಳವಾಗುತ್ತಿದೆ. ನಗರ ಪ್ರದೇಶಗಳಲ್ಲಿ ಮಿತಿಮೀರಿದ ಜನದಟ್ಟಣೆಗೆ ನೀರು ಪೂರೈಕೆ ಮಾಡುವ ವೇಳೆ ಸೋಂಕು ಹೆಚ್ಚಾಗುವ ಅಪಾಯ ಹೆಚ್ಚಿದೆ ಎಂದು ವೈದ್ಯರು ಅಭಿಪ್ರಾಯಪಟ್ಟಿದ್ದಾರೆ. ಅಧಿಕ ಜಲ ವಸತಿ ಪ್ರದೇಶಗಳು, ಕೊಳಗೇರಿಗಳು, ಟ್ಯಾಂಕರ್ ನೀರಿನ ಪೂರೈಕೆ ಅವಲಂಬಿಸಿರುವ ಅಪಾರ್ಟ್‌ಮೆಂಟ್‌ಗಳಲ್ಲಿ ಟೈಫಾಯಿಡ್ ರೀತಿಯ ರೋಗಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ. ಬೆಂಗಳೂರಿನಲ್ಲಿ ಬೇಸಿಗೆ ಹಾಗೂ ಮಾನ್ಸೂನ್ ಸಂದರ್ಭದಲ್ಲಿ ಪ್ರತಿನಿತ್ಯ ಆಹಾರದಿಂದ 10 ರೋಗಿಗಳು ಆಸ್ಪತ್ರೆಗೆ ದಾಖಲಾಗುವ ಸ್ಥಿತಿ ಕಂಡು ಬಂದ ಉದಾಹರಣೆಗಳಿವೆ. ವಾಂತಿ ಭೇದಿ ಪ್ರಕರಣಗಳು ಕೂಡ ಕಾಣಿಸಿಕೊಂಡಿದ್ದು, ಹಿರಿಯ ನಾಗರೀಕರು ಹಾಗೂ ಮಕ್ಕಳಲ್ಲಿಯೇ ಹೆಚ್ಚಾಗಿ ಸಮಸ್ಯೆಗಳು ಕಂಡುಬರುತ್ತವೆ ಎಂದು ವೈದ್ಯರು ಮಾಹಿತಿ ಬಿಚ್ಚಿಟ್ಟಿದ್ದಾರೆ. ಕೇಸ್ ಹೆಚ್ಚಳಕ್ಕೆ ಕಾರಣಗಳೇನು? ಹಳೆಯ ಪೈಪ್‌ಲೈನ್‌ಗಳ ಮೂಲಕ ನೀರು ಪೂರೈಕೆ ವೇಳೆ ನೀರು ಕಲುಷಿತವಾಗುವುದು. ಕೆರೆಗಳ ಒಡಲಿಗೆ ತ್ಯಾಜ್ಯ ಕೈಗಾರಿಕೆಗಳ ನೀರು ಸೇರಿ ಅಂತರ್ಜಲ ಮಲಿನವಾಗುವುದು.

ವಾಟರ್ ಟ್ಯಾಂಕರ್ ಮೂಲಕ ಪೂರ್ಣವಾಗಿ ಸಂಸ್ಕರಿಸಿದ ನೀರು ಪೂರೈಕೆ ಆಗದಿರುವುದು, ಸರಿಯಾಗಿ ಬೇಯಿಸದ ಹೊರಗಿನ ಆಹಾರ, ಜಂಕ್ ಫುಡ್‌ಗಳ ಅತಿಯಾದ ಸೇವನೆ. ರಾಜ್ಯದಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ ಬಗ್ಗೆ ಹೇಳಬೇಕಾದರೆ ಟೈಫಾಯಿಡ್ 2025ರಲ್ಲಿ 1.8 ಲಕ್ಷ. 2024ರಲ್ಲಿ 1.8 ಲಕ್ಷ. 2023 ರಲ್ಲಿ 1.4 ಲಕ್ಷ. 2022ರಲ್ಲಿ 1.3 ಲಕ್ಷ 2023ರಲ್ಲಿ 3.3 ಲಕ್ಷ. ಅತಿಸಾರ 2025ರಲ್ಲಿ 39,348, 2024ರಲ್ಲಿ 45,641, 2023ರಲ್ಲಿ 42,096, 2022ರಲ್ಲಿ 29,232, 2021ರಲ್ಲಿ 30,021. ಆದ್ದರಿಂದ ಟೈಫಾಯಿಡ್ ಪ್ರಕರಣಗಳಲ್ಲಿ ರಾಜ್ಯ ಸ್ಥಾನ ಪಡೆಯುವುದನ್ನು ತಪ್ಪಿಸಲು ಸರ್ಕಾರ ಕ್ರಮ ಕೈಗೊಂಡು ಟೈಫಾಯಿಡ್‌ಗೆ ಕಡಿವಾಣ ಹಾಕುವ ವ್ಯವಸ್ಥೆಯನ್ನು ಮಾಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಲಾಗುವುದು

**(ಮುಂದು)**

(254) 09.03.2026 1.40 TCH-AK (ಸಭಾಪತಿಯವರ ಉಪಸ್ಥಿತಿ)

**ಊ) ವಿಷಯ:- ಹೋಳಿ ಆಚರಣೆಗಾಗಿ ಪರೀಕ್ಷೆ ತಪ್ಪಿಸಲು ವಿದ್ಯಾರ್ಥಿನಿಯ ಮೇಲೆ ಒತ್ತಡ: ಕೊಪ್ಪಳದಲ್ಲಿ ಶಿಕ್ಷಣ ಹಕ್ಕಿನ ಮೇಲೆ ನಡೆದ ದೌರ್ಜನ್ಯದ ಬಗ್ಗೆ.**

-----

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕಾಗಿ ಧನ್ಯವಾದಗಳು. ದ್ವಿತೀಯ ಪಿ.ಯು.ಸಿ. ಉರ್ದು ಪರೀಕ್ಷೆಗೆ ಒಬ್ಬಳೇ ವಿದ್ಯಾರ್ಥಿನಿ ಪರೀಕ್ಷೆಗೆ ಹಾಜರಾಗದಂತೆ ಒತ್ತಡ. ಕೊಪ್ಪಳ ಸಂಸದ ಅವರ ಕನಸಿನ ಕೂಸಾಗಿರುವ ಜಿಲ್ಲಾ ಅಥ್ಲೇಟಿಕ್ಸ್ ಸಂಸ್ಥೆಯ ಕೆಲವು ಉತ್ಸಾಹಿಗಳು, ಮಾರ್ಚ್ 4 ಬುಧವಾರದಂದು ಈ ಪರೀಕ್ಷೆಗೆ ಹಾಜರಾಗದಂತೆ ಪಿ.ಯು.ಸಿ ದ್ವಿತೀಯ ವರ್ಷದ ಪರೀಕ್ಷಾ ಅಭ್ಯರ್ಥಿಯೊಬ್ಬರಿಗೆ ಒತ್ತಡ ಹೇರಿರುವ ಆರೋಪಗಳು ಕೇಳಬಂದಿವೆ. ಜಿಲ್ಲಾ ಅಥ್ಲೇಟಿಕ್ಸ್ ಸಂಸ್ಥೆಯ ವತಿಯಿಂದ ಎರಡನೇ ವರ್ಷ, ಕೊಪ್ಪಳ ನಗರದ ತಾಲ್ಲೂಕು ಕ್ರೀಡಾಂಗಣದಲ್ಲಿ ಮಾರ್ಚ್ 4 ಬುಧವಾರದಂದು ಸಾರ್ವಜನಿಕ ಹೋಳಿ ಆಚರಣೆಗೆ ವೇದಿಕೆ ಸಿದ್ಧವಾಗಿದೆ. ಆದರೆ ಪಿ.ಯು.ಸಿ ಪರೀಕ್ಷೆ ಮುಗಿದ ನಂತರವೇ ಹೋಳಿ ಆಚರಣೆಗೆ ಅವಕಾಶ ಎಂದು ಜಿಲ್ಲಾಧಿಕಾರಿಗಳು ಕಾರ್ಯಕ್ರಮದ ಆಯೋಜಕರಿಗೆ ಸ್ಪಷ್ಟಪಡಿಸಿದ್ದಾರೆ. ಪರೀಕ್ಷೆ ಮುಗಿಯುವುದು ಮಧ್ಯಾಹ್ನ 1 ಗಂಟೆಗೆ, ಅದಾದ ನಂತರ ಹೋಳಿ ಆಚರಣೆಗೆ ಉತ್ಸಾಹ ಉಳಿಯದು ಎಂಬ ಆತಂಕ ಆಯೋಜಕರದ್ದು.

ಅವರ ಅದೃಷ್ಟಕ್ಕೋ ಅಥವಾ ಅಭ್ಯರ್ಥಿಯ ದುರಾದೃಷ್ಟಕ್ಕೋ ಮಾರ್ಚ್ 4 ರಂದು ತಾಲ್ಲೂಕು ಕ್ರೀಡಾಂಗಣ ಸಮುಚ್ಚಯದಲ್ಲಿರುವ ಪರಿಕ್ಷಾ ಕೇಂದ್ರದಲ್ಲಿ ಉರ್ದು ಭಾಷೆಯ ಪರೀಕ್ಷೆ ಇದೆ. ಕೇವಲ ಒಬ್ಬಳೇ ವಿದ್ಯಾರ್ಥಿನಿ ಈ ಪರೀಕ್ಷೆಯನ್ನು ಬರೆಯಬೇಕಿದೆ. ಆದರೆ, ಒಬ್ಬರಿರಲಿ ಅಥವಾ ಎಷ್ಟೇ ಸಂಖ್ಯೆಯ ಅಭ್ಯರ್ಥಿಗಳಿರಲಿ, ಪಿ.ಯು.ಸಿ ಪರೀಕ್ಷೆ ನಡೆಸುವುದು ಖಚಿತ. ಪ್ರತಿಯೊಂದು ಪರೀಕ್ಷಾ ಕೇಂದ್ರದಲ್ಲಿಯೂ ಬೆಳಗ್ಗೆ 10 ಗಂಟೆಗೆ ಪರೀಕ್ಷೆ ಪ್ರಾರಂಭವಾಗುತ್ತದೆ. ಯಾರಾದರೂ ತಡವಾಗಿ ಬಂದರೆ, ಹತ್ತೂವರೆ ಒಳಗೆ ಬಂದರೆ ಅಂಥವರಿಗೆ ಪರೀಕ್ಷೆ ಬರೆಯಲು ಅವಕಾಶ ನೀಡಲಾಗುತ್ತದೆ. ಬುಧವಾರ ಉರ್ದು ಪರೀಕ್ಷೆ ಬರೆಯಬೇಕಿರುವ ಏಕೈಕ ವಿದ್ಯಾರ್ಥಿನಿ ಏನಾದರೂ ಗೈರು ಹಾಜರಾದರೆ, ಹತ್ತೂವರೆವರೆಗೆ ಕಾಯ್ದು ಪರೀಕ್ಷಾ ಕೇಂದ್ರದ ಅಧಿಕಾರಿಗಳು ಕೇಂದ್ರಕ್ಕೆ ಬೀಗ ಹಾಕಿಕೊಂಡು ಹೋಗುತ್ತಾರೆ.

ಆದ್ದರಿಂದ ವಿದ್ಯಾರ್ಥಿನಿಯನ್ನು ಬರೆಯದಂತೆ ತಡೆದುಬಿಟ್ಟರೆ, ಬುಧವಾರ ಬೆಳಗ್ಗೆ ಹತ್ತೂವರೆಯಿಂದಲೇ ಆಚರಣೆ ಪ್ರಾರಂಭಿಸಬಹುದು ಎಂಬುದು ಕೆಲ ಉತ್ಸಾಹಿಗಳ ಲೆಕ್ಕಾಚಾರ. ಈ ಕಾರಣಕ್ಕಾಗಿ ಅವರು ಸದರಿ ವಿದ್ಯಾರ್ಥಿನಿಯ ಮೇಲೆ ಒತ್ತಡ ಹೇರಿರುವುದಾಗಿ ಆರೋಪಗಳು ಕೇಳಬಂದಿವೆ.

ಈ ಕುರಿತು ಪತ್ರಿಕೆಯವರು ವಿಚಾರಿಸಿದ್ದಕ್ಕೆ ಹಿರೇಸಿಂದೋಗಿ ಸರಕಾರಿ ಪಿ.ಯು. ಕಾಲೇಜಿನ ಈ ವಿದ್ಯಾರ್ಥಿನಿ ಅಲಿಯಾ ಆಮೀರ್ ಹಮ್ಜಾ ಕುಟುಂಬದ ಸದಸ್ಯರೊಬ್ಬರು ಪರೀಕ್ಷೆಗೆ ಗೈರು ಹಾಜರಾಗುವಂತೆ

ಕೆಲವರು ತಮ್ಮಲ್ಲಿ ವಿನಂತಿಸಿಕೊಂಡಿದ್ದನ್ನು ದೃಢಪಡಿಸಿದರು. ಹೇಗಿದ್ದರೂ ಇನ್ನೂ ಎರಡು ಅವಕಾಶಗಳು ಇರುತ್ತವೆ, ಬರೆದರಾಯಿತು. ಇದು ದೊಡ್ಡ ಕಾರ್ಯಕ್ರಮವಾಗಿದ್ದು, ಒಬ್ಬ ವಿದ್ಯಾರ್ಥಿನಿಯ ಸಲುವಾಗಿ ಮಧ್ಯಾಹ್ನದವರೆಗೂ ಕಾಯುವಂತಾಗಬಾರದು' ಎಂದು ವಿನಂತಿಸಿದ್ದಾಗಿ ಹೇಳಿದ್ದಾರೆ. ಈ ಬಗ್ಗೆ ಇಲಾಖೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಒತ್ತಾಯಿಸುತ್ತೇನೆ.

**ಶ್ರೀ ಎಸ್.ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಸಚಿವರು):–** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಲಾಗುವುದು.

**ಸಭಾಪತಿಯವರು: –** ಮಾನ್ಯ ಮಧು ಬಂಗಾರಪ್ಪನವರೇ, ಉತ್ತರವನ್ನು ಆಮೇಲೆ ಕೊಡುತ್ತೀರಾ?

**ಶ್ರೀ ಎಸ್.ಮಧು ಬಂಗಾರಪ್ಪ:–** ಮಾನ್ಯ ಸಭಾಪತಿಯವರೇ, ಹೌದು.

**ಖ) ವಿಷಯ: ಮುಧೋಳದ ಮಹಾರಾಜ ಕಾಲೋನಿಯಲ್ಲಿ ಅಂತರ್ಜಲ ವಿಷಮಯವಾಗಿದ್ದು, ನಲ್ಲಿಗಳಲ್ಲಿ ಕಲುಷಿತ ನೀರು ಹರಿಯುತ್ತಿದ್ದು ನಾಗರಿಕರ ಜೀವಕ್ಕೆ ಆಪತ್ತು ಎದುರಾಗಿರುವ ಕುರಿತು**

-------

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅಂತರ್ಜಲ ಸಂಪೂರ್ಣ ಕಲುಷಿತ, ಕೊಳಚೆ ಗುಂಡಿಯಂತಾದ ಕೆರೆ, ಕಣ್ಮುಚ್ಚಿ ಕುಳಿತ ನಗರಸಭೆ, ಮಹಾರಾಜ ಕಾಲೋನಿಗೆ ಜಲಕಂಟಕ" ಎಂಬ ವಿಶೇಷ ಶೀರ್ಷಿಕೆಯು ದಿನಾಂಕ 09.03.2026 ರಂದು ಕನ್ನಡ ದಿನ ಪತ್ರಿಕೆಯಲ್ಲಿ ಪ್ರಕಟಣೆಗೊಂಡಿರುವ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಕೋರುತ್ತೇನೆ.

"ಬಾಗಲಕೋಟೆ ಜಿಲ್ಲೆಯಲ್ಲಿನ ಘಟಪ್ರಭಾ ನದಿ ದಟದ ಐತಿಹಾಸಿಕ ನಗರ ಮುಧೋಳದ ನಾಗರಿಕರು ಈಗ ನೀರಿನ ದೋಷದಿಂದಾಗಿ ಜೀವ ಕೈಯಲ್ಲಿ ಹಿಡಿದುಕೊಂಡು ಬದುಕುವಂತಾಗಿದ್ದು, ಇಲ್ಲಿನ ಜನರು ನಿತ್ಯವು ಕಲುಷಿತ ನೀರು ಕುಡಿಯುತ್ತಿರುವುದರಿಂದಾಗಿ ಅನಾರೋಗ್ಯಕ್ಕೆ ತುತ್ತಾಗುವಂತೆ ಮಾಡಿದೆ. ನಗರದ ಮಹಾರಾಜ ಕಾಲೋನಿಯ ಭಾಗದಲ್ಲಿ ಅಂತರ್ಜಲ ಸಂಪೂರ್ಣ ವಿಷವಾಗಿ ಮಾರ್ಪಟ್ಟಿದ್ದು, ಪ್ರತಿ ಮನೆಯ ನಲ್ಲಿಯನ್ನು ತಿರುಗಿಸಿದರೆ ಸಾಕು, ಕಲುಷಿತ ನೀರು, ಕೆಟ್ಟ ನೀರು, ಬುರುಗು ಸಹಿತ ಮತ್ತು ದುರ್ವಾಸನೆಯಿಂದ ತುಂಬಿದ ಮಿಶ್ರಿತ ನೀರು ಬರುತ್ತಿದೆ. ಈ ನೀರನ್ನು ಬಳಸುತ್ತಿರುವ ಸ್ಥಳೀಯ ನಾಗರಿಕರು ಸಾಂಕ್ರಾಮಿಕ ರೋಗದ ಭೀತಿಯಿಂದ ಬಳಲುತ್ತಿರುವುದು ಅತ್ಯಂತ ನೋವು ತರುವ ಸಂಗತಿ.

ಈ ಭಾಗದ ಜನರಿಗೆ ಜಲ ಮೂಲವಾಗಿದ್ದ ಮತ್ತು ಅಂತರ್ಜಲ ವೃದ್ಧಿಗೆ ಕಾರಣವಾಗಿದ್ದ ಐತಿಹಾಸಿಕ ಮಹಾರಾಜ ಕಾಲೋನಿ ಕೆರೆ ಇಂದು ಕಣ್ಮುಚ್ಚಿ ಕುಳಿತಿರುವ ನಗರ ಸಭೆಯ ನಿರ್ಲಕ್ಷ್ಯದ ಪರಾಕಾಷ್ಠೆಯಿಂದ ಅಕ್ಷರಶಃ ಕೊಳಚೆ ಗುಂಡಿಯಾಗಿ ಪರಿಣಮಿಸಿದೆ. ಸುತ್ತಮುತ್ತಲಿನ ಕಲುಷಿತ ಚರಂಡಿ ನೀರೆಲ್ಲವೂ ಅವ್ಯಾಹತವಾಗಿ ಈ ಕೆರೆಗೆ ಸೇರುತ್ತಿರುವುದರಿಂದ, ಕೆರೆಯ ನೀರು ಸಂಪೂರ್ಣ ಕಲುಷಿತಗೊಂಡಿದೆ. ಈ ವಿಷಪೂರಿತ ನೀರು ನಿಂತು, ನಿಂತು ಮಳಿನ ನೀರು ಸಂಗ್ರಹವಾಗಿ ಅಲ್ಲಿನ ಸುತ್ತಮುತ್ತ ಅಸಹನೀಯ ವಾಸನೆ ಹರಡುತ್ತಿದೆ. ಅಷ್ಟೇ ಅಲ್ಲದೇ ಈ ಕಲುಷಿತ ನೀರು ಅಲ್ಲೇ ಇಂಗುವುದರಿಂದ ಬೋರ್‌ವೆಲ್‌ಗಳಲ್ಲಿ ಇದರ ಪರಿಣಾಮ ಬೀರುತ್ತಿದೆ. ಈ ಕಲುಷಿತ ನೀರಿನ ಸಮಸ್ಯೆಗಳಿಂದ ವಯೋವೃದ್ಧರು, ಚಿಕ್ಕಮಕ್ಕಳು ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ದಿನನಿತ್ಯ ಸ್ನಾನಕ್ಕೂ ಬಳಸದಾಗದಂತಹ ಸ್ಥಿತಿ ಬಂದು ನಿಂತಿದೆ" ಎಂದು ವರದಿಯಾಗಿದೆ.

ಒಟ್ಟಾರೆ ಹೇಳುವುದಾದರೆ ಈ ಭಾಗದ ಜನರಿಗೆ ಕಲುಷಿತ ನೀರಿನಿಂದಾಗುವ ಎಲ್ಲಾ ಸಮಸ್ಯೆಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ, ನಿರ್ಲಕ್ಷ್ಯ ವಹಿಸುತ್ತಿರುವ ನಗರ ಸಭೆ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳುವ ಮೂಲಕ ಕಲುಷಿತ ನೀರಿನ ಬಳಕೆಯಿಂದ ಬಳಲುತ್ತಿರುವ ನಾಗರಿಕರಿಗೆ ನ್ಯಾಯ ಒದಗಿಸಬೇಕೆಂದು ಈ ಮೂಲಕ ತಮ್ಮ ಮೂಲಕ ಸರ್ಕಾಕ್ಕೆ ಒತ್ತಾಯಿಸುತ್ತೇನೆ.

ಮಾನ್ಯ ಸಭಾಪತಿಯವರೇ, ಇನ್ನು ಒಂದು ವಿಷಯ ಹೇಳುತ್ತೇನೆ. ತಾವು ಕೂಡ ಅಲ್ಲೇ ಮುಧೋಳದಲ್ಲಿ ಕಲಿತವರಾಗಿದ್ದು, ತಾವು ಭಾಷಣ ಮಾಡುವಂಥ ಸಂದರ್ಭದಲ್ಲಿ ಆ ಕೆರೆಯ ನೀರನ್ನು ನಾವು ಹೊತ್ತು ತಂದಿದ್ದೇವೆಂದು ಮೇಲಿನಿಂದ ಮೇಲೆ ಹೇಳಿದ್ದೀರಿ. ಅಂತಹ ಪವಿತ್ರವಾದಂತಹ ನದಿಯ ನೀರನ್ನು ನಗರ ಸಭೆ ಇವತ್ತು ಕಲುಷಿತಗೊಳಿಸಿದೆ. ದಯಮಾಡಿ ಅದಕ್ಕೆ ಪರಿಹಾರ ಒದಗಿಸುವ ತೀರ್ಮಾನ ಮಾನ್ಯ ಸಚಿವರು ಮಾಡಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ.

**ಶ್ರೀ ರಹೀಂ ಖಾನ್ (ಪೌರಾಡಳಿತ ಮತ್ತು ಹಜ್ ಸಚಿವರು):–** ಮಾನ್ಯ ಸಭಾಪತಿಯವರೇ, ಶ್ರೀ ಪಿ.ಹೆಚ್.ಪೂಜಾರ್ ರವರ ಜೊತೆ discuss ಮಾಡಿ ಆ ನೀರಿನ ಸಮಸ್ಯೆಯನ್ನು solve ಮಾಡುತ್ತೇನೆ.

**ಸಭಾಪತಿಯವರು:–** ಮಾನ್ಯ ರಹೀಂಖಾನ್ ರವರೇ, ತಾವು ಮಾನ್ಯ ಪಿ.ಹೆಚ್.ಪೂಜಾರ್‌ರವರ ಜೊತೆ discuss ಮಾಡಿ ಮತ್ತು ನನ್ನ ಜೊತೆ ಕೂಡ discuss ಮಾಡಿ; ನಾನು ಕೂಡ ಹೇಳುತ್ತೇನೆ. ಮೂಲತಃ ನಾನು ಕೂಡ ಅದೇ ಊರಿನವನು. ಎಲ್ಲಾ ನನಗೆ ಗೊತ್ತಿದೆ.

**ಶ್ರೀ ಪಿ.ಹೆಚ್.ಪೂಜಾರ್:–** ಮಾನ್ಯ ಸಭಾಪತಿಯವರು ಕೂಡ ಅದೇ ಊರಿನವರು.

**ಸಭಾಪತಿಯವರು:–** ನಾವೆಲ್ಲರೂ ಅದರ ಬಗ್ಗೆ ಚರ್ಚೆ ಮಾಡೋಣ. ಆ ಕೆರೆಯಿಂದಲೇ ನೀರು ತಂದಿದ್ದೇವೆ. ಅದು ಬಹಳ ಪವಿತ್ರವಾದ ಕೆರೆ ಎಂದು ನಾನು ಹೇಳುತ್ತೇನೆ. ಇದರ ಬಗ್ಗೆ ಕರೆಸಿ ಮಾತನಾಡುತ್ತೇನೆ.

**Sri RAHIM KHAN:** Yes sir.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

**ಎ) ವಿಷಯ:- ರಾಯಚೂರಿನ ಜೋಳ ಖರೀದಿ ಕೇಂದ್ರಗಳಲ್ಲಿ ನಡೆಯುತ್ತಿರುವ ಅವ್ಯವಹಾರದ ಬಗ್ಗೆ.**

------

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ದಿನಾಂಕ 06.03.2026 ರಂದು 'ವಿಜಯ ಕರ್ನಾಟಕ' ಪತ್ರಿಕೆಯಲ್ಲಿ ಪ್ರಕಟಗೊಂಡ ' ದಾಖಲೆಯಲ್ಲಿ ಜೋಳ ಬೆಳೆದ ರಾಯಚೂರು ರೈತರು' ಎಂಬ ಶೀರ್ಷಿಕೆಯಡಿ, "ರಾಯಚೂರು ಜಿಲ್ಲೆಯಲ್ಲಿ ಕೆಲವು ಅಪರೂಪದ ಕೃಷಿಕರು ಬೆಳಕಿಗೆ ಬಂದಿದ್ದಾರೆ. ಈ ಮಾದರಿ ರೈತರು ಕಂದಾಯ ಇಲಾಖೆಯ 'ಬೆಳೆ ದರ್ಶಕ' ಆಪ್‌ನಲ್ಲಿ ಬೆಳೆ ಸಮೀಕ್ಷೆ ವೇಳೆ ಹೊಲದಲ್ಲಿ ತೊಗರಿ, ಹತ್ತಿ ಮತ್ತು ಭತ್ತ ಇದ್ದರೂ ಜೋಳವೆಂದು ನಮೂದಿಸಿದ್ದಾರೆ. ಜಮೀನಿನಲ್ಲಿ ಯಾವುದೇ ಬೆಳೆ ಇಲ್ಲದಿದ್ದರೂ 'ಜೋಳ' ಬೆಳೆದಿದ್ದಾರೆ. ಮತ್ತೊಂದು ಸೋಜಿಗವೆಂದರೆ, ಬೇರೆ ತಾಲ್ಲೂಕಿನ ಜಮೀನನ್ನು ಸಿಂಧನೂರು ತಾಲ್ಲೂಕಿಗೆ ಹೊತ್ತು ತಂದಿದ್ದಾರೆ.

"ರಾಯಚೂರು ಜಿಲ್ಲೆಯಲ್ಲಿ 2025-26ನೇ ಸಾಲಿನಲ್ಲಿ ಹಿಂಗಾರು ಮತ್ತು ಮುಂಗಾರು ಹಂಗಾಮಿನಲ್ಲಿ ಒಟ್ಟು 15.26 ಲಕ್ಷ ಕ್ವಿಂಟಾಲ್ ಜೋಳ ಮಾರಾಟಕ್ಕೆ ನೋಂದಣಿ ಮಾಡಲಾಗಿದೆ. ಸಿಂಧನೂರು ತಾಲ್ಲೂಕು ಒಂದರಲ್ಲೇ 16,430 ರೈತರು 8.72 ಲಕ್ಷ ಕ್ವಿಂಟಾಲ್ ಜೋಳ ಮಾರಾಟಕ್ಕೆ ನೋಂದಣಿ ಮಾಡಿಸಿಕೊಂಡಿರುವುದೇ ಅನುಮಾನದ ಮೂಲವಾಗಿದೆ" ಎಂದು ವರದಿಯಾಗಿದೆ.

ಸಿಂಧನೂರು ತಾಲ್ಲೂಕಿನ ಖರೀದಿ ಕೇಂದ್ರಗಳಲ್ಲಿ ದೇವದುರ್ಗ, ಸಿರವಾರ, ಮಸ್ಕಿ, ಮಾನ್ವಿ ಮತ್ತು ರಾಯಚೂರು ತಾಲ್ಲೂಕುಗಳಿಂದ ವಲಸೆ ಬಂದು ಖದೀಮರು ಆಯ್ದ ಖರೀದಿ ಕೇಂದ್ರಗಳಲ್ಲಿ ಜೋಳ ಮಾರಾಟಕ್ಕೆ ಹೆಸರು ನೋಂದಾಯಿಸಿದ್ದಾರೆ. ಅಚ್ಚರಿಯ ಸಂಗತಿಯೆಂದರೆ ಕೆಲವು ತಾಲ್ಲೂಕುಗಳಲ್ಲಿ ಜೋಳ ಬೆಳೆ ಪ್ರದೇಶ ಕಡಿಮೆ ಇದ್ದರೂ ಅಪಾರ ಫಸಲು ಮಾರಾಟಕ್ಕೆ ಸಾವಿರಾರು ರೈತರು ಹೆಸರು ನೋಂದಾಯಿಸಿದ್ದಾರೆ. ಇದರಿಂದ ನೈಜ ರೈತರು ಸಂಕಷ್ಟಕ್ಕೆ ಸಿಲುಕುವಂತಾಗಿದೆ. ಬೆಳೆ ನೋಂದಣಿ ನೊಂದಿಗೆ ಪ್ರಕ್ರಿಯೆಯನ್ನು ನಿಗದಿತ ಸ್ಥಳದಲ್ಲಿ ಮಾಡದೇ, ಇವತ್ತಿನ ದಿವಸ ನಕಲಿ ವ್ಯಾಪಾರಸ್ಥರು ಇದ್ದಲ್ಲಿಗೆ ಲ್ಯಾಪ್‌ಟಾಪ್ ತೆರಳಿ ನೋಂದಣಿ ಮಾಡಿಕೊಳ್ಳಲಾಗಿದೆ. ಈ ಬಗ್ಗೆಯೂ ತನಿಖೆ ನಡೆದರೆ ಖರೀದಿ ಕೇಂದ್ರದ ಅಧಿಕಾರಿಗಳ ತಲೆದಂಡವಾಗುವುದು ನಿಶ್ಚಿತ ಎಂಬ ಮಾತು ಕೇಳಿಬಂದಿದೆ ಎಂಬುದಾಗಿ ವರದಿಯಾಗಿರುವುದನ್ನು ಪ್ರಸ್ತಾಪಿಸುವ ಮೂಲಕ ಶೂನ್ಯವೇಳೆಯಲ್ಲಿ ಸದನದ ಮೂಲಕ ಸರ್ಕಾರದ ಗಮನಕ್ಕೆ ತರಬಯಸುತ್ತಿದ್ದೇನೆ.

**ಶ್ರೀ ಎನ್.ಎಸ್.ಬೋಸ್‌ರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಏ) ವಿಷಯ:– ಪದೋನ್ನತಿ ಪಡೆದ ಐ.ಎ.ಎಸ್ ಅಧಿಕಾರಿಗಳಿಂದ ಕಡ್ಡಾಯ 'ಇಂಡಕ್ಷನ್ ತರಬೇತಿ ಉಲ್ಲಂಘನೆ: ಆಡಳಿತಾತ್ಮಕ ದಕ್ಷತೆಗೆ ಎದುರಾದ ಹಿನ್ನಡೆ ಕುರಿತು**

------

**ಶ್ರೀ ರಮೇಶ್ ಬಾಬು (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಕರ್ನಾಟಕ ರಾಜ್ಯ ಸರ್ಕಾರವು ಕರ್ನಾಟಕದಲ್ಲಿ ಹಿರಿಯ ಕೆ.ಎ.ಎಸ್ ಅಧಿಕಾರಿಗಳಿಗೆ ಅವರ ಸೇವಾ ಹಿರಿತನ ಮತ್ತು ನಿಯಮಾವಳಿಗಳ ಅನ್ವಯ ಐ.ಎ.ಎಸ್ ಹುದ್ದೆಗೆ ಪದೋನ್ನತಿಯನ್ನು ನೀಡುತ್ತದೆ. ಕೇಂದ್ರ ಸರ್ಕಾರದ ಲೋಕಸೇವಾ ಆಯೋಗದ ಮೂಲಕ ಐ.ಎ.ಎಸ್ ಪದವಿಯನ್ನು ಪಡೆದು ಆಯ್ಕೆಯಾದ ಅಧಿಕಾರಿಗಳು ಕೇಂದ್ರ ಸರ್ಕಾರದ ಮತ್ತು ಲೋಕಸೇವಾ ಆಯೋಗದ ನಿಯಮಾವಳಿಗಳಿಗೆ ಅನುಗುಣವಾಗಿ ಮುಸ್ಸೋರಿಯಲ್ಲಿರುವ ಲಾಲ್ ಬಹದ್ದೂರ್ ಶಾಸ್ತ್ರಿ ರಾಷ್ಟ್ರೀಯ ಆಡಳಿತ ಅಕಾಡಮಿಯಲ್ಲಿ ಇಂಡಕ್ಷನ್ ತರಬೇತಿ ಕಾರ್ಯಕ್ರಮ (ಐ.ಟಿ.ಪಿ) ಅಡಿಯಲ್ಲಿ ಕಡ್ಡಾಯವಾಗಿ ತರಬೇತಿಯನ್ನು ಪಡೆಯಬೇಕಾಗುತ್ತದೆ. ಅದೇರೀತಿ ರಾಜ್ಯದಲ್ಲಿ ಐ.ಎ.ಎಸ್ ಹುದ್ದೆಗೆ ಪದೋನ್ನತಿ ಪಡೆದ ಅಧಿಕಾರಿಗಳು, ರಾಜ್ಯದಲ್ಲಿ ಐ.ಎ.ಎಸ್ ಹುದ್ದೆಯನ್ನು ನಿರ್ವಹಿಸುವ ಮೊದಲು ಕಡ್ಡಾಯವಾಗಿ ಇಂಡಕ್ಷನ್ ತರಬೇತಿಯನ್ನು ಪಡೆಯಬೇಕಾಗಿರುತ್ತದೆ. ಈ ತರಬೇತಿಯನ್ನು ಹೊಂದದೇ ಪದೋನ್ನತಿ ಹೊಂದಿದವರು ನೇರವಾಗಿ ಐ.ಎ.ಎಸ್ ಹುದ್ದೆಯನ್ನು ಹೊಂದಲು ಅಥವಾ ಕಾರ್ಯನಿರ್ವಹಿಸಲು ಅವಕಾಶ ಇರುವುದಿಲ್ಲ.

ಕರ್ನಾಟಕದಲ್ಲಿ 2016, 2018, 2019, 2020, 2021 ಮತ್ತು 2022ರಲ್ಲಿ ಸುಮಾರು 26 ಹಿರಿಯ ಕೆ.ಎ.ಎಸ್ ಅಧಿಕಾರಿಗಳಿಗೆ ರಾಜ್ಯ ಸರ್ಕಾರವು ಐ.ಎ.ಎಸ್ ಅಧಿಕಾರಿಗಳಾಗಿ ಪದೋನ್ನತಿ ನೀಡಿರುತ್ತದೆ. ಪದೋನ್ನತಿ ಪಡೆದ ಅಧಿಕಾರಿಗಳನ್ನು ರಾಜ್ಯ ಸರ್ಕಾರವು ಇಂಡಕ್ಷನ್ ತರಬೇತಿಗೆ ನಿಯೋಜನೆ ಮಾಡಿರುತ್ತದೆ. ಆದರೆ ಐ.ಎ.ಎಸ್ ಪದೋನ್ನತಿ ಪಡೆದ ರಾಜ್ಯದ ಸುಮಾರು 25 ಅಧಿಕಾರಿಗಳು ನಿಯಮಾನುಸಾರ ಇಂಡಕ್ಷನ್ ತರಬೇತಿ ಕಾರ್ಯಕ್ರಮಕ್ಕೆ ಒಳಪಟ್ಟಿರುವುದಿಲ್ಲ. ತರಬೇತಿ ಪಡೆಯುವುದರಿಂದ ಸರ್ಕಾರದ ನೀತಿಗಳು, ಕೆಲಸದ ಜವಾಬ್ದಾರಿಗಳು, ಹೊಂದಾಣಿಕೆ, ಜವಾಬ್ದಾರಿಯ ಉದ್ದೇಶ ಮತ್ತು ದಕ್ಷತೆಯ ಸೇವೆಗೆ ಸಹಕಾರಿಯಾಗುತ್ತದೆ. ಪದೋನ್ನತಿ ಪಡೆದ ಅಧಿಕಾರಿಗಳು ತರಬೇತಿ ಪಡೆಯದಿರುವ ಕುರಿತು ಮತ್ತು ಇಂಡಕ್ಷನ್ ತರಬೇತಿ ಪಡೆಯದ ಹೊರತು ಅವರನ್ನು ಐ.ಎ.ಎಸ್ ಅಧಿಕಾರಿಗಳೆಂದು ಪರಿಗಣಿಸಲು ಸಾಧ್ಯವಿಲ್ಲವೆಂದು ಮಾಧ್ಯಮಗಳಲ್ಲಿ ವರದಿಯಾಗಿರುತ್ತದೆ. ಆದುದರಿಂದ ರಾಜ್ಯ ಸರ್ಕಾರವು ಐ.ಎ.ಎಸ್ ಪದೋನ್ನತಿ ಪಡೆದ ಅಧಿಕಾರಿಗಳನ್ನು ತರಬೇತಿಗೆ ಒಳಪಡಿಸುವುದು ಅನಿವಾರ್ಯವಾಗಿದ್ದು, ಸಾರ್ವಜನಿಕ ಮಹತ್ವವುಳ್ಳ ಈ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುವ ಮೂಲಕ ರಾಜ್ಯ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಡಿ.ಪಿ.ಎ.ಆರ್) ಕ್ರಮ ಕೈಗೊಳ್ಳಲು ಕೋರುತ್ತೇನೆ.

**ಶ್ರೀ ಎನ್.ಎಸ್.ಬೋಸ್‌ರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರವನ್ನು ಒದಗಿಸಲಾಗುವುದು.

**(ಮುಂದು)**

(255)9.3.2026/1.50/ಎಂ.ಎಂ-ಎ.ಕೆ (ಸಭಾಪತಿಯವರ ಉಪಸ್ಥಿತಿ)

**(ಐ) ವಿಷಯ:- ಮಕ್ಕಳ ಆರೋಗ್ಯದ ಜೊತೆ ಸರ್ಕಾರದ ಚೆಲ್ಲಾಟ: ಹುಳು ಹಿಡಿದ ರವಾ, ಎಕ್ಸ್‌ಪೈರಿ ಆದ ಲಡ್ಡು ವಿತರಿಸಿದವರ ವಿರುದ್ಧ ಕ್ರಮಕ್ಕೆ ಆಗ್ರಹ ಕುರಿತು**

**- - - - -**

**ಶ್ರೀ ಎಂ. ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ದಿನಾಂಕ 25.2.2026ರಂದು ''ಬೆಳಗಾವಿ ಅಂಗನವಾಡಿ ಮಕ್ಕಳಿಗೆ ಎಕ್ಸ್‌ಪೈರಿ ಮಿಲೆಟ್ ಲಡ್ಡು'' ಎಂದು ಸಂಯುಕ್ತ ಕರ್ನಾಟಕ ದಿನ ಪತ್ರಿಕೆಯಲ್ಲಿ ಸುದ್ದಿ ಪ್ರಕಟವಾಗಿರುತ್ತದೆ. ''ರಾಜ್ಯದ ಅಂಗನವಾಡಿ ಮಕ್ಕಳಿಗೆ ನೀಡಲಾಗುತ್ತಿರುವ ಪೌಷ್ಠಿಕ ಆಹಾರದಲ್ಲೇ ಭಾರಿ ಅಕ್ರಮ ನಡೆದಿರುವುದು ಬೆಳಕಿಗೆ ಬಂದಿದೆ. ಮಕ್ಕಳಿಗೆ ನೀಡಲಾಗುತ್ತಿರುವ ಹಲವು ಆಹಾರ ಪದಾರ್ಥಗಳು ಮೂರರಿಂದ ಆರು ತಿಂಗಳ ಹಿಂದೆ ಅವಧಿ ಮೀರಿದ್ದರೂ ಇನ್ನೂ ವಿತರಿಸಲಾಗುತ್ತಿದೆ ಎಂದು ಸಮಾಜದ ಪರ ಹೋರಾಟಗಾರ್ತಿ ಆರೋಪಿಸಿದ್ದಾರೆ.

ಸಾಮಾಜಿಕ ಜಾಲತಾಣಗಳಲ್ಲಿ ಹರಡಿದ ವೀಡಿಯೋಗಳಲ್ಲಿ ಹುಳು ಬಿದ್ದ ರವಾ ಹಾಗೂ ಅಕ್ಟೋಬರ್ 2025 ಅವಧಿ ತೋರಿಸುವ ಸಜ್ಜೆ ಲಡ್ಡು, ಸಾಂಬಾರ್ ಪುಡಿ ಮತ್ತು ಸಾಸಿವೆ ಕಾಳುಗಳ ಪ್ಯಾಕೆಟ್‌ಗಳು ಕಾಣಿಸುತ್ತವೆ ಎಂದು ಹೇಳಲಾಗಿದೆ. ಕೆಲ ಅಂಗನವಾಡಿ ಕಾರ್ಯಕರ್ತೆಯರಿಗೆ ಆಹಾರ ಸಾಮಗ್ರಿಗಳ ಅವಧಿ ಮೀರಿರುವುದು ಗೊತ್ತಿರಲಿಲ್ಲ ಎಂದು ಹೋರಾಟಗಾರ್ತಿ ಹೇಳಿದ್ದಾರೆ. ಮಕ್ಕಳಿಗೆ ವಿತರಿಸಲಾಗುತ್ತಿರುವ ಮಿಲೆಟ್ ಲಡ್ಡು (ಸಿರಿಧಾನ್ಯ ಲಡ್ಡು) ಪ್ಯಾಕೆಟ್‌ಗಳ ಅವಧಿ 2025ರಲ್ಲೇ ಮುಗಿದಿರುವುದು ಪತ್ತೆಯಾಗಿದೆ. ಆದರೂ ಅದನ್ನೇ 2026ರಲ್ಲೂ ಮಕ್ಕಳಿಗೆ ನೀಡಲಾಗುತ್ತಿದೆ ಎಂಬುದು ಪೋಷಕರ ಆರೋಪ. ಪೌಷ್ಠಿಕ ಆಹಾರವೇ ಮಕ್ಕಳ ಶಾರೀರಿಕ ಹಾಗೂ ಬೌದ್ಧಿಕ ಬೆಳವಣಿಗೆಯ ಆಧಾರ. ಆದರೆ ಅವಧಿ ಮೀರಿದ ಆಹಾರ ಸೇವನೆಯಿಂದ ಅಜೀರ್ಣ, ವಾಂತಿ ಮತ್ತು ಜ್ವರ ಮುಂತಾದ ತೊಂದರೆಗಳು ಆಹಾರ ವಿಷಬಾಧೆ ಸಂಭವಿಸುವ ಸಾಧ್ಯತೆ ಮತ್ತು ದೀರ್ಘಾವಧಿಯಲ್ಲಿ ಪೌಷ್ಠಿಕ ಕೊರತೆ ಎಂಬ ಆತಂಕವನ್ನು ವೈದ್ಯರು ವ್ಯಕ್ತಪಡಿಸಿದ್ದಾರೆ'' ಎಂದು ದಿನಪತ್ರಿಕೆಯಲ್ಲಿ ಪ್ರಕಟವಾಗಿರುವ ಪ್ರಯುಕ್ತ ಇಲಾಖಾ ಸಿಬ್ಬಂದಿ ಮತ್ತು ಅಂಗನವಾಡಿ ಕೇಂದ್ರಗಳ ಸಿಬ್ಬಂದಿಯ ನಿರ್ಲಕ್ಷ್ಯತೆ ವಿರುದ್ಧ ಕ್ರಮ ಕೈಗೊಳ್ಳುವಂತೆ ಹಾಗೂ ಅವಧಿ ಮೀರಿದ ಪ್ಯಾಕೆಟ್‌ಗಳನ್ನು ವಿಲೆಗೊಳಿಸಲು ಕ್ರಮ ಕೈಗೊಳ್ಳಲು ಸೂಚಿಸುವಂತೆ ಮಾನ್ಯ ಮಹಿಳಾ ಮತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಸಚಿವರನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**೫. ಪ್ರಕಟಣೆ**

**ವಿಷಯ: ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಿಗೆ ಆಯವ್ಯಯ ನಿರ್ವಹಣೆ ಕುರಿತು ವಿಶೇಷ ತರಬೇತಿ ಶಿಬಿರ ಏರ್ಪಡಿಸಿರುವ ಬಗ್ಗೆ.**

----

**ಸಭಾಪತಿಯವರು:-** ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳು ಆಯವ್ಯಯ ಅಧಿವೇಶನದಲ್ಲಿ ಸಕ್ರಿಯವಾಗಿ ಭಾಗವಹಿಸಲು ಅನುಕೂಲವಾಗುವಂತೆ ''ಆಯವ್ಯಯ ರಾಜಸ್ವಗಳ ಸಂಗ್ರಹಣೆ, ಅನುದಾನಗಳ ವರ್ಗೀಕರಣ ಮತ್ತು ಹಂಚಿಕೆ ಹಾಗೂ ಆಯವ್ಯಯ ಅನುದಾನಗಳ ಬಳಕೆ, ನಿರ್ವಹಣೆ'' ಎಂಬ ವಿಷಯದ ಕುರಿತು ತರಬೇತಿ ಶಿಬಿರವನ್ನು ದಿನಾಂಕ: ೯.೩.೨೦೨೬ರ ಸೋಮವಾರದಂದು ಬೆಂಗಳೂರಿನ ಹೋಟೆಲ್ ಲಲಿತ್ ಅಶೋಕ್‌ನಲ್ಲಿ ಸಂಜೆ ೦೪.೩೦ ಗಂಟೆಗೆ ಏರ್ಪಡಿಸಲಾಗಿದ್ದು, ಸನ್ಮಾನ್ಯ ಮುಖ್ಯಮಂತ್ರಿಗಳು ತರಬೇತಿಯನ್ನು ನೀಡಲಿದ್ದಾರೆ.

ಆದ್ದರಿಂದ, ಸದರಿ ತರಬೇತಿ ಶಿಬಿರದಲ್ಲಿ ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳು ಭಾಗವಹಿಸುವ ಮೂಲಕ ತರಬೇತಿಯ ಪ್ರಯೋಜನ ಪಡೆಯುವಂತೆ ಈ ಮೂಲಕ ತಿಳಿಸಲಾಗಿದೆ.

## ೬. ಸಭೆಯ ಮುಂದಿಡಲಾದ ಕಾಗದಪತ್ರಗಳು

**(**ಮೊದಲನೇಪಟ್ಟಿ) **ಮತ್ತು** (ಎರಡನೇಪಟ್ಟಿ)

**ಸಭಾಪತಿಯವರು:-** ಮಂಡಿಸಲಾಯಿತು.

**7 ಕಳೆದ ಅಧಿವೇಶನದಲ್ಲಿ ತಮ್ಮ ಮೇಲೆ ಕೈಗೊಂಡ ಅಮಾನತ್ತಿನ ಬಗ್ಗೆ ಸ್ಪಷ್ಟನೆ ಕೋರಿ ಪ್ರಸ್ತಾಪ.**

– – – – –

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇದು ನ್ಯಾಯದ ಪೀಠ. ಕಳೆದ ತಿಂಗಳು ದಿನಾಂಕ 4.2.2026ರಂದು ಅಧಿವೇಶನ ನಡೆದಾಗ ನನ್ನ ವಿಷಯದಲ್ಲಿ ನ್ಯಾಯ ಸಿಕ್ಕಿಲ್ಲ ಎನ್ನುವುದು ನನ್ನ ಭಾವನೆಯಾಗಿದೆ. ನಾನು 'ಆರ್ಟ್ ಆಫ್ ಲಿವಿಂಗ್'ಗೆ ಒಂದು ಕಾರ್ಯಕ್ರಮಕ್ಕೆ ಹೋಗುತ್ತಿದ್ದೇನೆಂದು 4ನೇ ತಾರೀಖನಂದು 4.00 ಗಂಟೆಯ ಸುಮಾರಿಗೆ ತಮ್ಮ ಚೇಂಬರ್‌ನಲ್ಲಿ ನಿಮಗೆ ಹೇಳಿಯೇ ನಾನು ಹೋದೆ. ಆ ಸಂದರ್ಭದಲ್ಲಿ ವಿಪಕ್ಷ ನಾಯಕರು ಮತ್ತು ಚೀಫ್ ವಿಪ್‌ರವರು ಸಹ ಇದ್ದರು. ನನಗೆ ಆಮೇಲೆ ಇಲ್ಲಿಗೆ ಬರುವುದಕ್ಕೆ ಹೇಳಿದ್ದಾರೆ ಎಂದು ಒಂದು ಸಂದೇಶ ಬಂತು. ನಾನು ಆ ಸಮಯದಲ್ಲಿ ಮೆಸೇಜ್ ನೋಡಿದ ಮೇಲೆ ನಾನು ಅಲ್ಲಿಂದ ಬರುವುದಕ್ಕೆ ನಿಮಗೆ ಫೋನ್ ಮಾಡಿದೆ. ನೀವು ಫೋನ್ ಎತ್ತಲಿಲ್ಲ. ಬಹುಶಃ ತಾವು ಪೀಠದಲ್ಲಿದ್ದಿರಿ ಎಂದು ಕಾಣುತ್ತದೆ.

**ಸಭಾಪತಿಯವರು:–** ಸದನದಲ್ಲಿದ್ದಾಗ ಫೋನ್ ತೆಗೆದುಕೊಳ್ಳುವ ಹಾಗಿಲ್ಲ.

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ತಾವು ಫೋನ್ ಎತ್ತಲಿಲ್ಲ. ಅದಾದ ಮೇಲೆ ನಾನು ತಮಗೆ ಮೆಸೇಜ್ ಕೂಡ ಹಾಕಿದೆ. "ನನಗೆ, due to traffic, ಸಮಯಕ್ಕೆ ಇಲ್ಲಿಗೆ ಸರಿಯಾಗಿ ತಲುಪುವುದಕ್ಕೆ ಸಾಧ್ಯವಾಗುವುದಿಲ್ಲ" ಎಂದು ಮೆಸೇಜ್ ಕೂಡ ಕಳುಹಿಸಿದ್ದೇನೆ, ಅದರ ಪ್ರತಿಯನ್ನು ನಿಮಗೆ ಕಳುಹಿಸುತ್ತೇನೆ.

**ಸಭಾಪತಿಯವರು:–** ನಿಮ್ಮ ಜೊತೆ ನಾನು ಮಾತನಾಡಿ ತಿಳಿಸುತ್ತೇನೆ.

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ಅಷ್ಟಾದ ಮೇಲೆ ನನ್ನದಲ್ಲದ ತಪ್ಪಿಗೆ ನನಗೆ ಅಮಾನತ್ತಾಗಿದೆ ಎಂಬುದು ನನಗೆ ನೋವನ್ನುಂಟು ಮಾಡಿದೆ. ನಾನು ಕಳೆದ 40 ವರ್ಷಗಳಿಂದ ಸಾರ್ವಜನಿಕ ಜೀವನದಲ್ಲಿದ್ದೇನೆ. ನಿಯಮಾವಳಿಗಳಿಗೆ ವಿರುದ್ಧವಾಗಿ ನಾನು ನಡೆದುಕೊಂಡಿಲ್ಲ. ಪೀಠಕ್ಕೆ ಅಗೌರವವನ್ನು ತೋರಿಸಿಲ್ಲ ಹಾಗೂ ಅಗೌರವವನ್ನು ತೋರಿಸುವುದಿಲ್ಲ. ಹಾಗಾಗಿ ನನ್ನ ಅಮಾನತ್ತಿಗೆ ನಾನೇನು ತಪ್ಪು ಮಾಡಿದ್ದೇನೆ ಎಂಬುದು ನನಗೆ ಗೊತ್ತಾಗಲಿಲ್ಲ. ಅದಕ್ಕಾಗಿ ನನ್ನದೇನು ತಪ್ಪಿದೆ, ಯಾವ ತಪ್ಪಿಗೆ ಶಿಕ್ಷೆಯಾಗಿದೆ ಎನ್ನುವುದನ್ನು ಪೀಠದ ಮುಂದೆ ನಿವೇದನೆ ಮಾಡಬಯಸುತ್ತೇನೆ.

**ಸಭಾಪತಿಯವರು:–** ನಿಮ್ಮ ಜೊತೆ ಚರ್ಚಿಸಿ ನಂತರ ತಿಳಿಸುತ್ತೇನೆ. ನಿಮ್ಮ ಜೊತೆ ಮಾತನಾಡುತ್ತೇನೆ.

## ೮. ಗಮನ ಸೆಳೆಯುವ ಸೂಚನೆಗಳು

**ಅ) ವಿಷಯ:–** ಕಲ್ಯಾಣ ಕರ್ನಾಟಕ ಭಾಗದ ರಾಯಚೂರು ಜಿಲ್ಲಾ ಕೇಂದ್ರದಿಂದ 91 ಕಿ.ಮೀ ದೂರದಲ್ಲಿರುವ ಸಿಂಧನೂರು ತಾಲ್ಲೂಕು ಅತೀ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಹೊಂದಿದ್ದು, ವಿದ್ಯಾರ್ಥಿಗಳ ಸಂಖ್ಯೆ ಮತ್ತು ಭೌಗೋಳಿಕ ವ್ಯಾಪ್ತಿಯನ್ನು ಪರಿಗಣಿಸಿ ಸಿಂಧನೂರು ತಾಲ್ಲೂಕನ್ನು ನೂತನ ಶೈಕ್ಷಣಿಕ ಜಿಲ್ಲೆ ಎಂದು ಘೋಷಿಸುವ ಕುರಿತು.

– – – –

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕಲ್ಯಾಣ ಕರ್ನಾಟಕ ಭಾಗದ ರಾಯಚೂರು ಜಿಲ್ಲಾ ಕೇಂದ್ರದಿಂದ 91 ಕಿ.ಮೀ ದೂರದಲ್ಲಿರುವ ಸಿಂಧನೂರು ತಾಲ್ಲೂಕು ಅತೀ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಹೊಂದಿದ್ದು, ವಿದ್ಯಾರ್ಥಿಗಳ ಸಂಖ್ಯೆ ಮತ್ತು ಭೌಗೋಳಿಕ ವ್ಯಾಪ್ತಿಯನ್ನು ಪರಿಗಣಿಸಿ ಸಿಂಧನೂರು ತಾಲ್ಲೂಕನ್ನು ನೂತನ ಶೈಕ್ಷಣಿಕ ಜಿಲ್ಲೆ ಎಂದು ಘೋಷಿಸುವ ಕುರಿತು ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಶಿಕ್ಷಣ ಸಚಿವರ ಗಮನವನ್ನು ಸೆಳೆಯುತ್ತೇನೆ.

**ಶ್ರೀ ಎಸ್. ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):–** ಮಾನ್ಯ ಸಭಾಪತಿಯವರೇ, ವಿವರವಾದ ಉತ್ತರವನ್ನು ಕೊಟ್ಟಿದ್ದೇನೆ.

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಬಸನಗೌಡ ಬಾದರ್ಲಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈಗ ಉತ್ತರ ಕೊಟ್ಟಿದ್ದಾರೆ. ಇತ್ತೀಚಿಗೆ ಮಧುಗಿರಿಯಲ್ಲಿ, ಚಿಕ್ಕೋಡಿಯಲ್ಲಿ, ಶಿರಸಿ ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಯನ್ನು ಶೈಕ್ಷಣಿಕ ಜಿಲ್ಲೆಯನ್ನಾಗಿ ಮಾಡಿದ್ದಾರೆ. ಅದೇ ರೀತಿ ನಮ್ಮ ಸಿಂಧನೂರನ್ನು ಶೈಕ್ಷಣಿಕ ಜಿಲ್ಲೆಯನ್ನಾಗಿ ಘೋಷಣೆ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿದ್ದೆ. ಅದಕ್ಕೆ ಉತ್ತರವನ್ನು ಈಗತಾನೇ ಕಳುಹಿಸಿದ್ದಾರೆ. ಅದನ್ನು ಪರಿಗಣಿಸಬೇಕೆಂದು ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

**ಶ್ರೀ ಎಸ್. ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೇ, geographically ಅದು ಬಹಳ ದೊಡ್ಡ ಪ್ರದೇಶವಾಗಿರುವುದರಿಂದ ನಾವು ಮುಂಚೆ ಬೆಳಗಾಂ, ಚಿಕ್ಕೋಡಿಯನ್ನು ವಿಂಗಡಿಸಿರುವುದು ಮತ್ತು ಶಿರಸಿ ಮತ್ತು ಕಾರವಾರವನ್ನು ವಿಂಗಡಣೆ ಮಾಡಿದ್ದು, ತುಮಕೂರು ಮತ್ತು ಮಧುಗಿರಿಯನ್ನು ಕೆಲವು ವರ್ಷಗಳ ಹಿಂದೆ ವಿಂಗಡಣೆ ಮಾಡಲಾಗಿತ್ತು. ಈಗ ಮಾನ್ಯ ಸದಸ್ಯರು ಪ್ರಸ್ತಾವನೆ ಕೊಟ್ಟಿದ್ದಾರೆ ಹಾಗೂ ವೈಯಕ್ತಿಕವಾಗಿಯೂ ಮನವಿ ಮಾಡಿದ್ದಾರೆ. ಇದು ಆರ್ಥಿಕ ಇಲಾಖೆಗೆ ಕೂಡ ಬರುತ್ತದೆ. ಏಕೆಂದರೆ ಇದಕ್ಕೆ ಎಲ್ಲಾ ಅಧಿಕಾರಿಗಳೂ ಕೂಡ ಬೇಕಾಗುತ್ತಾರೆ. ಅವರು ವೈಯಕ್ತಿಕವಾಗಿ ಕೂಡ ಬಂದು ಮಾತನಾಡಿ ಒತ್ತಾಯ ಮಾಡಿ ಇದನ್ನು ಸರ್ಕಾರದ ಮಟ್ಟದಲ್ಲಿ ಆರ್ಥಿಕ ಇಲಾಖೆಗೆ ಕಳುಹಿಸಿ ಇದರ ಬಗ್ಗೆ ನಾನು ಕೂಡ ಮಾತನಾಡುತ್ತೇನೆಂದು ತಿಳಿಸಿದರು. ಅದನ್ನು ಯಾವ ರೀತಿ ಪರಿಶೀಲನೆ ಮಾಡಬೇಕೆಂದು; ಏಕೆಂದರೆ, as it is ಈಗ ಕೆಲಸ ಮಾಡುವುದಕ್ಕೆ ನಮಗೆ ತೊಂದರೆಯೇನೂ ಇಲ್ಲ. ಅವರು ಬಹಳ ಒತ್ತಡವನ್ನು ಹಾಕುತ್ತಿದ್ದಾರೆ. ಅದು ಬಹಳ ಹಿಂದುಳಿದಿದೆ. ಅಲ್ಲಿ ಶಿಕ್ಷಣ ಸಂಸ್ಥೆಗಳು ಸಹ ಜಾಸ್ತಿ ಇರುವುದರಿಂದ ದಯವಿಟ್ಟು ಅದನ್ನು ಮಾಡಬೇಕೆಂದು ವೈಯಕ್ತಿಕವಾಗಿ ಕೇಳಿಕೊಂಡಿದ್ದಾರೆ. ನಾನು ಸರ್ಕಾರಕ್ಕೆ ಪ್ರಸ್ತಾವನೆಯನ್ನು; ಏಕೆಂದರೆ ಬೇರೆ ಬೇರೆ ಇಲಾಖೆ ಕೂಡ ನಮಗೆ ಕೊಡುತ್ತಾರೆ. ಸದ್ಯಕ್ಕೆ ನಮಗೆ ಇಲಾಖೆಯನ್ನು ನಡೆಸುವುದಕ್ಕೆ ತೊಂದರೆ ಇಲ್ಲ. ಆದರೆ ಅವರು ಏನು ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ ಅದನ್ನು ಆರ್ಥಿಕ ಇಲಾಖೆಗೆ ಕಳುಹಿಸಿ. ಏಕೆಂದರೆ ನಮಗೆ ಎಲ್ಲವೂ DIET ನವರು, DDPIs ಬರಬೇಕಾಗುತ್ತದೆ.

(ಮುಂದು)

(256) 09-03-2026 2-00 KH/RN (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:-** ಮಾನ್ಯ ಬಸನಗೌಡ ಬಾದರ್ಲಿಯವರೇ, ಕುಳಿತುಕೊಳ್ಳಿ.

**ಶ್ರೀ ಎಸ್. ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):-** ಮಾನ್ಯ ಸಭಾಪತಿಯವರೇ, DIET ಗೆ ಎಲ್ಲರೂ ಕೂಡ ಬರುವುದರಿಂದ, ಇದನ್ನು ಆರ್ಥಿಕ ಇಲಾಖೆಗೆ ಕಳುಹಿಸಿ, ಅವರ ಕಡೆಯಿಂದ ವೈಯಕ್ತಿಕವಾಗಿ ಚರ್ಚೆ ಮಾಡಿ, ನಾವು ಯಾವ ರೀತಿ ತೀರ್ಮಾನವನ್ನು ತೆಗೆದುಕೊಳ್ಳಬೇಕೋ, ಆ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ. ಇದಾದ ತಕ್ಷಣ ಬೇರೆ ಜಿಲ್ಲೆಗಳು ಬರುತ್ತವೆ. ಆಗ ಬಹಳ ಒತ್ತಡ ಬರುತ್ತದೆ.

ಅದನ್ನು ನೋಡಿಕೊಂಡು ಮಾನ್ಯ ಸದಸ್ಯರಾದ ಬಸನಗೌಡ ಬಾದರ್ಲಿಯವರ ಹತ್ತಿರ ಮಾತನಾಡುವಂತಹ ವ್ಯವಸ್ಥೆಯನ್ನು ಮಾಡುತ್ತೇನೆ.

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಆರ್ಥಿಕ ಇಲಾಖೆಯ ಬಗ್ಗೆ ಏನು ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ ಇದೆ, ಸಾಕಷ್ಟು ಅನುದಾನ ಇದೆ, ಇದಕ್ಕೆ ಪ್ರತ್ಯೇಕ ಅನುದಾನ ಇರುವುದರಿಂದ, ಏನು ಭಾರ ಆಗುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದನ್ನು ಘೋಷಿಸುವಂತಹ ಕೆಲಸವನ್ನು ಮಾನ್ಯ ಸಚಿವರು ಮತ್ತು ಸರ್ಕಾರದಿಂದ ಆಗಬೇಕೆಂದು ಕೇಳುತ್ತೇನೆ.

**ಸಭಾಪತಿಯವರು:–** ಮಾನ್ಯ ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್ ರವರು ಏನೋ ಹೇಳಬೇಕೆಂದು ಹೇಳಿದ್ದೀರಿ.

**೯.ನಿಯಮ ೫೮ಎ ಅಡಿಯಲ್ಲಿ ಪ್ರಸ್ತಾಪಿಸಿದ ಶೂನ್ಯವೇಳೆ ಪ್ರಸ್ತಾವಕ್ಕೆ ಸಚಿವರಿಂದ ಹೇಳಿಕೆ.**

**ವಿಷಯ: ಮಕ್ಕಳ ಆರೋಗ್ಯದ ಜೊತೆ ಸರ್ಕಾರದ ಚೆಲ್ಲಾಟ: ಹುಳು ಹಿಡಿದ ರವಾ, ಎಕ್ಸ್‌ಪೈರಿ ಆದ ಲಡ್ಡು ವಿತರಿಸಿದವರ ವಿರುದ್ಧ ಕ್ರಮಕ್ಕೆ ಆಗ್ರಹ ಕುರಿತು.**

– – – –

**ಶ್ರೀಮತಿ ಲಕ್ಷ್ಮಿ ಆರ್. ಹೆಬ್ಬಾಳ್ಕರ್ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರು):** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಎಂ. ನಾಗರಾಜು ರವರು ನಾನು ಹೊರಗಡೆ ಲಾಂಜ್‌ನಲ್ಲಿ ಇದ್ದಂತಹ ಸಂದರ್ಭದಲ್ಲಿ ಅಂಗನವಾಡಿಗೆ ಸಂಬಂಧಪಟ್ಟ ಹಾಗೆ ಅಂಗನವಾಡಿಗೆ ಸರಬರಾಜು ಮಾಡುವ ಫುಡ್ ಎಕ್ಸ್‌ಪೈರಿ ಆಗಿತ್ತು, ಅಂತಹ ಫುಡ್‌ನ್ನು ಅಂಗನವಾಡಿಗೆ ಸರಬರಾಜು ಮಾಡಿದ್ದಾರೆ ಎಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ್ದರು. ತಮ್ಮ ಮುಖಾಂತರ ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಯಾವುದೇ ರೀತಿಯ ಎಕ್ಸ್‌ಪೈರಿ ಫುಡ್ ಅನ್ನು ನಾವು ಮಕ್ಕಳಿಗೆ ಕೊಡುವುದಕ್ಕೆ ಸಾಧ್ಯ ಇಲ್ಲ. ನಾನು ಆವತ್ತಿನ ದಿನ ಬೆಳಗಾವಿಯಲ್ಲಿಯೇ ಇದ್ದಾಗ ಡಿಡಿ., ಮತ್ತು ಸಿ.ಡಿ.ಪಿ.ಓ., ರವರನ್ನು ಕಳುಹಿಸಿ, ಪರಿಶೀಲನೆ ಮಾಡಿದಂತಹ ಸಂದರ್ಭದಲ್ಲಿ ಇದು 6 ತಿಂಗಳ ಮುಂಚೆ ಮಾಡಿದಂತಹ ವೀಡಿಯೋ ಆಗಿತ್ತು. ಆ ವೀಡಿಯೋ ಮಾಡಿದ ನಂತರ ಅಲ್ಲಿ ಸ್ವಲ್ಪ ರಾಜಕಾರಣ ನಡೆದಿರುವುದರಿಂದ, 6 ತಿಂಗಳ ನಂತರ ವೀಡಿಯೋ ಬಿಡುಗಡೆ ಮಾಡಿದಾಗ ಆ ದಿನಾಂಕ ಆಗಿರಲಿ, ಅಂಗನವಾಡಿಯ ಕಲರ್ ಆಗಿರಲಿ, ಎಲ್ಲಾ ಬದಲಾವಣೆ ಆಗಿದೆ. ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಒಂದು ಮಾತನ್ನು ಬಹಳ ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ಇಲಾಖೆಯಿಂದ ಬಡವರ ಮಕ್ಕಳಿಗೆ ಪೌಷ್ಠಿಕ ಆಹಾರವನ್ನು ಕೊಡುವುದರಲ್ಲಿ ಈ ರೀತಿ ಯಾರೇ ಕರ್ತವ್ಯ ಲೋಪ ಮಾಡಿರಲಿ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ಆದರೆ, ಯಾವುದೇ ರೀತಿಯಾದಂತಹ ತಪ್ಪುಗಳು ಆಗಿಲ್ಲ. ಇಂತಹ ತಪ್ಪುಗಳು ಆಗದೇ ಇರುವಂತಹ ರೀತಿಯಲ್ಲಿ ನೋಡಿಕೊಳ್ಳುತ್ತೇವೆ. ಆ ರೀತಿ ಏನಾದರೂ ತಪ್ಪುಗಳು ಆದರೆ ಶಿಸ್ತು ಕ್ರಮ ತೆಗೆದುಕೊಳ್ಳುತ್ತೇನೆ. ಈಗಾಗಲೇ ನಾನು ಶಿಸ್ತು ಕ್ರಮ ತೆಗೆದುಕೊಳ್ಳುತ್ತಿದ್ದೆ. ಆ ರೀತಿ ಏನು ಆಗಿಲ್ಲ.

**ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಪರಿಣಾಮಕಾರಿಯಾಗಿ . . .

**ಸಭಾಪತಿಯವರು:–** ಮಾನ್ಯ ಎಂ.ನಾಗರಾಜುರವರೇ, no discussion. ಮಾನ್ಯ ಸದಸ್ಯರಾದ ಶಾಂತರಾಮ್ ಬುಡ್ನ ಸಿದ್ಧಿಯವರೇ ಮಾತನಾಡಿ.

## 10.ಗಮನ ಸೆಳೆಯುವ ಸೂಚನೆ

**ಆ) ವಿಷಯ: ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ಬರುವ ಬುಡಕಟ್ಟು ಮತ್ತು ಇತರೆಜನಾಂಗದ ಕುಟುಂಬಗಳನ್ನು ಬೇರೆ ಕಡೆ ಅವರ ಒಪ್ಪಿಗೆಯಂತೆ ಸ್ಥಳಾಂತರಿಸುತ್ತಿರುವ ಹಾಗೂ ಅವರು ಸಾಗುವಳಿ ಮಾಡಿಕೊಂಡು ಬಂದ ಅರಣ್ಯ ಭೂಮಿಗೆ ಪರಿಹಾರ ನೀಡುವ ಕುರಿತು.**

– – – –

**ಶ್ರೀ ಶಾಂತರಾಮ್ ಬುಡ್ನಸಿದ್ಧಿ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ಬರುವ ಬುಡಕಟ್ಟು ಮತ್ತು ಇತರೆ ಜನಾಂಗದ ಕುಟುಂಬಗಳನ್ನು ಬೇರೆ ಕಡೆ ಅವರ ಒಪ್ಪಿಗೆಯಂತೆ ಸ್ಥಳಾಂತರಿಸುತ್ತಿರುವ ಹಾಗೂ ಅವರು ಸಾಗುವಳಿ ಮಾಡಿಕೊಂಡು ಬಂದ ಅರಣ್ಯ ಭೂಮಿಗೆ ಪರಿಹಾರ ನೀಡುವ ಬಗ್ಗೆ ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ.

**ಶ್ರೀ ಈಶ್ವರ ಬಿ.ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು):–** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಲಾಗಿದೆ.

**(ಉತ್ತರದ ಪ್ರತಿಯನ್ನು ಲಗತ್ತಿಸಿದೆ)**

**ಶ್ರೀ ಶಾಂತರಾಮ್ ಬುಡ್ನ ಸಿದ್ಧಿ:–** ಮಾನ್ಯ ಸಭಾಪತಿಯವರೇ, ಈಗ ಉತ್ತರ ಬಂದು ಕೈ ಸೇರಿತು. ಒಂದಷ್ಟು ಅಂಶಗಳನ್ನು . . .

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಶಾಂತರಾಮ್ ಬುಡ್ನ ಸಿದ್ಧಿಯವರೇ, ಒಂದು ನಿಮಿಷ. ಗಮನ ಸೆಳೆಯುವ ಸೂಚನೆ ಇದ್ದಾಗ ತಾವು ಮೊದಲು ಹೇಳಬೇಕು. ಮಾನ್ಯ ಸಚಿವರು ಉತ್ತರವನ್ನು ಓದಬೇಕು. ಕನಿಷ್ಟ ಪಕ್ಷ ತಾವು ಹೇಳಿ. ನಂತರ ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳುತ್ತಾರೆ.

**ಶ್ರೀ ಈಶ್ವರ ಬಿ.ಖಂಡ್ರೆ:–** ಮಾನ್ಯ ಸಭಾಪತಿಯವರೇ, ಕುದುರೆಮುಖ ರಾಷ್ಟ್ರೀಯ ಉದ್ಯಾನವನವನ್ನು . . .

**ಶ್ರೀ ಶಾಂತರಾಮ್ ಬುಡ್ನ ಸಿದ್ಧಿ:–** ಮಾನ್ಯ ಸಭಾಪತಿಯವರೇ, ನಾನು ಇನ್ನೂ ವಿವರಣೆ ನೀಡಿಲ್ಲ.

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಶಾಂತರಾಮ್ ಬುಡ್ನ ಸಿದ್ಧಿಯವರೇ, ನಾನು ಪದ್ಧತಿ ಹೇಳುತ್ತೇನೆ. ಗಮನ ಸೆಳೆದ ನಂತರ ಮಾನ್ಯ ಸಚಿವರು ಉತ್ತರವನ್ನು ಓದಬೇಕು. ಉತ್ತರವನ್ನು ಓದುವುದಕ್ಕೆ ಸಮಯವಾಗುತ್ತದೆ ಎಂದು ಅವರು ವಿವರಣೆ ಕೊಡುತ್ತಿದ್ದಾರೆ. ನಂತರ ತಾವು ಪ್ರಶ್ನೆಯನ್ನು ಕೇಳಿ. ನಾನು ತಮಗೆ ಸಮಯವನ್ನು ಕೊಡುತ್ತೇನೆ. ಸ್ವಲ್ಪ ನಿಯಮಗಳನ್ನು ತಿಳಿದುಕೊಳ್ಳಿ.

**ಶ್ರೀ ಈಶ್ವರ ಬಿ.ಖಂಡ್ರೆ:–** ಮಾನ್ಯ ಸಭಾಪತಿಯವರೇ, ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ಬರುವ ಬುಡಕಟ್ಟು ಮತ್ತು ಇತರೆ ಜನಾಂಗದ ಕುಟುಂಬಗಳನ್ನು (ಸ್ವ ಇಚ್ಛೆಯಿಂದ ಹೋಗುವವರಿಗೆ) ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಪುನರ್ವಸತಿ ಯೋಜನೆಯಡಿ ಸರ್ಕಾರದ ಆದೇಶ ಸಂಖ್ಯೆ No RD 26 REH 2003 Bangalore, Dated: 18.04.2005 ರಂತೆ ಪರಿಹಾರ ಪಾವತಿಸಲಾಗುತ್ತಿದೆ.

2025–26 ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ "2406–02–110–0–55–ಪುನರ್ವಸತಿ ಮತ್ತು ಸ್ವಯಂ ಭೂಸ್ವಾಧೀನ ಕಾರ್ಯಕ್ರಮ–059 ಇತರ ಖರ್ಚುಗಳು" ಇದರಡಿ ರೂ 1000.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿರುತ್ತದೆ.

ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ವಾಸ್ತವ್ಯವಿರುವ ಕುಟುಂಬಗಳ ಸಂಖ್ಯೆ–1382, ಸ್ವಯಂ–ಪ್ರೇರಿತವಾಗಿ ಪುನರ್ವಸತಿಗಾಗಿ ಅರ್ಜಿ ಸಲ್ಲಿಸಿರುವ ಕುಟುಂಬಗಳ ಸಂಖ್ಯೆ–670, ಪರಿಹಾರ ಪಡೆದಿರುವ ಕುಟುಂಬಗಳ ಸಂಖ್ಯೆ ಮತ್ತು ಒಟ್ಟು ಪರಿಹಾರದ ಮೊತ್ತ, ಈಗಾಗಲೇ 356 ಕುಟುಂಬಗಳಿಗೆ ಪರಿಹಾರ ಕೊಡಲಾಗಿದೆ. (ರೂ.142.0934 ಕೋಟಿ), ಪರಿಹಾರ ಪಡೆಯಲು ಬಾಕಿ ಕುಟುಂಬಗಳ ಸಂಖ್ಯೆ–314.

ಸದರಿ 314 ಕುಟುಂಬಗಳ ಪೈಕಿ 76 ಕುಟುಂಬಗಳ ಸ್ಥಿರಾಸ್ತಿಯ ಮೌಲ್ಯಮಾಪನವು ವಿವಿಧ ಇಲಾಖೆಗಳ ವತಿಯಿಂದ ಮಾಡಲಾಗಿದ್ದು, ಸರ್ಕಾರದಿಂದ ಅನುದಾನ ಬಿಡುಗಡೆ ಆಧಾರದ ಮೇಲೆ ಜಿಲ್ಲಾ ಮಟ್ಟದ ಪುನರ್ವಸತಿ ಪರಿಹಾರ ಸಮಿತಿ ವತಿಯಿಂದ ಅನುಮೋದನೆ ಪಡೆದು ಪರಿಹಾರ ವಿತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿ ಪ್ರಸ್ತುತ ಪುನರ್ವಸತಿ ಬಯಸಿ ಅರ್ಜಿ ಸಲ್ಲಿಸಿದ ಅರ್ಜಿದಾರರ ಮನೆ, ಜಮೀನು ಹಾಗೂ ಇತರೆ ತೋಟಗಾರಿಕಾ ಬೆಳೆ ಹಾಗೂ ಮರಗಳ ಮೌಲ್ಯಮಾಪನವನ್ನು ಹಾಲಿ ವರ್ಷದಲ್ಲಿ

ಚಾಲ್ತಿಯಲ್ಲಿರುವ ದರದಂತೆ ಕೈಗೊಂಡು ಜಿಲ್ಲಾಧಿಕಾರಿಗಳ ಸಮಿತಿ ವತಿಯಿಂದ ಅನುಮೋದನೆ ಪಡೆದು ಸರ್ಕಾರದ ನಿಯಮದಂತೆ ಪರಿಹಾರ ಮೊಬಲಗನ್ನು ಅನುದಾನ ಲಭ್ಯತೆಯ ಆಧಾರದಲ್ಲಿ ಪಾವತಿ ಮಾಡಲಾಗುತ್ತಿದೆ.

ಸರ್ಕಾರದ ಆದೇಶ ಸಂಖ್ಯೆ: No RD 26 REH 2003 Bangalore, Dated 18.04.2005 ರಲ್ಲಿ ಉಲ್ಲೇಖಿಸಿರುವ ಮಾನದಂಡಗಳಾದ 1) ಸ್ವಂತ ಜಮೀನು ಇತ್ಯಾದಿ, 2) ಕಂದಾಯ ಜಮೀನನ್ನು ಒತ್ತುವರಿ ಮಾಡಿಕೊಂಡಿರುವುದು ಮತ್ತು 3) ಕಿರು ಅರಣ್ಯ ಹಾಗೂ ರಾಜ್ಯ ಅರಣ್ಯವನ್ನು ಒತ್ತುವರಿ ಮಾಡಿಕೊಂಡಿರುವುದರ ಆಧಾರದ ಮೇರೆಗೆ, ಭೂಸ್ವಾಧೀನ ಕಾಯ್ದೆ ಹಾಗೂ ಚಾಲ್ತಿಯಲ್ಲಿರುವ ನಿಯಮಗಳನ್ವಯ ಪರಿಹಾರವನ್ನು ಒದಗಿಸಲಾಗುತ್ತಿದೆ.

**ಶ್ರೀ ಶಾಂತರಾಮ್ ಬುಡ್ನ ಸಿದ್ಧಿ:-** ಮಾನ್ಯ ಸಭಾಪತಿಯವರೇ, ಉತ್ತರ ಸಮರ್ಪಕವಾಗಿದ್ದರೂ ಕೆಲವು ಅಂಶಗಳನ್ನು ಸೇರಿಸುವುದಕ್ಕೆ ಬಯಸುತ್ತೇನೆ. ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಗೆ ಚಿಕ್ಕಮಗಳೂರು, ಉಡುಪಿ, ಮಂಗಳೂರು, ಶಿವಮೊಗ್ಗ ಜಿಲ್ಲೆಗಳು ಬರುತ್ತವೆ. ಇದರಲ್ಲಿ ವಿಶೇಷವಾಗಿ ಚಿಕ್ಕಮಗಳೂರು ಜಿಲ್ಲೆಯ ಕೆರೆಕಟ್ಟೆ ಗ್ರಾಮ ಪಂಚಾಯಿತಿಗೆ ಸಂಬಂಧಪಟ್ಟಂತೆ, ಅಲ್ಲಿ ಸುಮಾರು 350 ಕ್ಕೂ ಹೆಚ್ಚು ಬುಡಕಟ್ಟು ಕುಟುಂಬಗಳು ಇರುತ್ತವೆ. ನಾನು ವಿಶೇಷವಾಗಿ ಬುಡಕಟ್ಟು ಕುಟುಂಬಗಳ ಬಗ್ಗೆ ಉಲ್ಲೇಖ ಮಾಡುತ್ತೇನೆ. ಇದರಲ್ಲಿ 4 ಅಂಶಗಳನ್ನು ಸೇರಿಸಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ಮೊದಲನೆಯದಾಗಿ ಯಾವ ಬುಡಕಟ್ಟು ಸಮುದಾಯದ ಕುಟುಂಬಗಳಿಗೆ ಅರಣ್ಯ ಹಕ್ಕುಪತ್ರ ಸಿಕ್ಕಿದೆಯೋ, ಅವರಿಗೂ ಪರಿಹಾರ ನೀಡುವಾಗ ಅಧಿಕೃತ ಜಮೀನು ಹೊಂದಿದವರ ಪ್ರಮಾಣದಲ್ಲಿಯೇ ಪುನರ್ವಸತಿ ಕೊಡಬೇಕು. ಹಾಗೆಯೇ ಅನುದಾನ ಕೊಡಬೇಕೆನ್ನುವುದನ್ನು ಉಲ್ಲೇಖ ಮಾಡುವುದಕ್ಕೆ ಬಯಸುತ್ತೇನೆ. ಹಾಗೆಯೇ, ವಿಶೇಷವಾಗಿ ಗೌಡಲು ಬುಡಕಟ್ಟು ಜನಾಂಗದವರು ವಾಸಿಸುವ ಪ್ರದೇಶದಲ್ಲಿ ಹುಲಿ ಮತ್ತು ಇತರೆ ಕಾಡು ಪ್ರಾಣಿಗಳಿಂದ ನಿರಂತರವಾಗಿ ದಾಳಿ ನಡೆಯುತ್ತಿದೆ. ಅವರು ಅತಿಕ್ರಮಣ ಜಾಗದಲ್ಲಿ ಇರುವುದರಿಂದ ಅವರಿಗೆ ಪರಿಹಾರ ಕೊಡುವಂತಹದ್ದು ಆಗಬೇಕು. ಎರಡನೆಯದಾಗಿ ವಿಶೇಷವಾಗಿ ಮುಂಡಗಾರು ಗೌಡಲು ಕಾಲೋನಿಯಲ್ಲಿ ಮತ್ತು ಗುರಿಗೆ ಗ್ರಾಮ ಬುಡಕಟ್ಟು ಸಮುದಾಯದಲ್ಲಿ ಹಾಗೂ ಇತರೆ ಬೇರೆ ಬೇರೆ ಗ್ರಾಮಗಳಲ್ಲಿರುವ ಬುಡಕಟ್ಟು ಸಮುದಾಯದ ಕುಟುಂಬಗಳಿಗೆ ಅರಣ್ಯ ಹಕ್ಕುಪತ್ರ ಹೊಂದಿರಲಿ ಅಥವಾ ಮೂಲ ಜಮೀನು ಇರಲಿ, ಅವರಿಗೆ 2025-26ರ ದರದಂತೆ ಜಮೀನು ಮತ್ತು ಪರಿಹಾರ ಕೊಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ಧನ್ಯವಾದಗಳು.

**ಶ್ರೀ ಈಶ್ವರ ಬಿ.ಖಂಡ್ರೆ:-** ಮಾನ್ಯ ಸಭಾಪತಿಯವರೇ, ಯಾರದ್ದು ಪಟ್ಟಾ ಜಮೀನು ಇದೆ, ಅಂತಹವರಿಗೆ ಮಾತ್ರ ಪರಿಹಾರ ಕೊಡುವುದಕ್ಕೆ ಅವಕಾಶ ಇದೆ. ಅರಣ್ಯ ಹಕ್ಕುಪತ್ರ ಕಾಯ್ದೆ ಅಡಿಯಲ್ಲಿ ಬರುವಂತಹವರಿಗೂ ಸಹಿತ ಪರಿಹಾರ ಕೊಡುವುದನ್ನು ವಿಸ್ತರಿಸಬೇಕೆನ್ನುವ ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ. ಅದನ್ನು ಪರಿಶೀಲನೆ ಮಾಡಲಾಗುವುದು.

**ಸಭಾಪತಿಯವರು:–** ಸದನವನ್ನು ನಾಳೆ ಬೆಳಗ್ಗೆ 11.00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಮಧ್ಯಾಹ್ನ 2 ಗಂಟೆ 07 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ: 10ನೇ ಮಾರ್ಚ್ ಮಾಹೆ 2026 ರ ಮಂಗಳವಾರದಂದು ಬೆಳಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)**